ಮಂಗಳವಾರ, ಮೇ 13, 2025 | ₹ 7.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net prajavani prajavani prajavani

ಮರಳಿ ಮನೆಗೆ

ಭಾರತ–ಪಾಕಿಸ್ತಾನ ಸಂಘರ್ಷದಿಂದ ಸ್ಥಳಾಂತರಗೊಂಡಿದ್ದ ಬಾರಾಮುಲ್ಲಾ ಜಿಲ್ಲೆಯ ಉರಿ ಪಟ್ಟಣದ ಜನರು ಸೋಮವಾರ ತಮ್ಮ ಮನೆಗಳಿಗೆ ಮರಳಿದರು



ಸಂಕ್ಷಿಪ್ತ ಸುದ್ದಿ

ಕಸಾಪ ಸಭೆಗೆ ಬರಲು ಭದ್ರತೆ ಕೋರಿ ಮನವಿ

ಶಿವಮೊಗ್ಗ: 'ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಬೆಂಬಲಿಗರಿಂದ ಅಪಾಯ ಎದುರಾಗುವ ಸಾಧ್ಯತೆ ಇದೆ' ಎಂದು ಕನ್ನಡ ಸಾಹಿತ್ಯ ಪರಿಷತ್ನ ಶಿವಮೊಗ್ಗ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಮಂಜುನಾಥ ಆರೋಪಿಸಿದ್ದಾರೆ.

'ಬೆಂಗಳೂರಿನಲ್ಲಿ ಮೇ 14ರಂದು ನಡೆಯುವ ಪರಿಷತ್‌ನ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳಲು ನನಗೆ ಪೊಲೀಸ್ ಭದ್ರತೆ ಒದಗಿಸಿ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ಸೋಮವಾರ ಮನವಿ ಸಲ್ಲಿಸಿದ್ದಾರೆ.

'ಮಹೇಶ್ ಜೋಶಿ ಅವರ ಪರಮಾಧಿಕಾರ, ಅಸಂವಿಧಾನಿಕ ನಡೆಯ ವಿರುದ್ಧ ಮೂರು ವರ್ಷಗಳಿಂದ ನಿರಂತರವಾಗಿ ಪರಿಷತ್‌ನ ರಾಜ್ಯ ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸುತ್ತಿದ್ದೇನೆ. ಇದರ ಪರಿಣಾಮವಾಗಿ ಕಸಾಪ ಆಜೀವ ಸದಸ್ಯತ್ವದಿಂದಲೇ ಅಮಾನತು ಮಾಡುವ ಷೋಕಾಸ್ ನೋಟಿಸ್ ನೀಡಿ ಅವರು ನನಗೆ ಬೆದರಿಕೆ ಒಡ್ಡಿದ್ದಾರೆ' ಎಂದು ಆರೋಪಿಸಿದರು.

'ವಿಜಯೇಂದ್ರ ಇಳಿದ ಬಳಿಕ ಬಿಜೆಪಿಗೆ'



ಬಸನಗೌಡ ಯತ್ನಾಳ

ವಿಜಯಪುರ: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಬಿ.ವೈ. ವಿಜಯೇಂದ್ರ ಅವರನ್ನು ಕೆಳಗಿಳಿಸಿದ ಬಳಿಕ ನನ್ನನ್ನು ಪಕ್ಷಕ್ಕೆ ಸೇರಿಸಿಕೊಳ್ಳುವುದಾಗಿ ಪಕ್ಷದ ವರಿಷ್ಠರು ತಿಳಿಸಿದ್ದಾರೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನನ್ನನ್ನು ಬಿಜೆಪಿಗೆ ಸೇರಿಸಿಕೊಳ್ಳುವಂತೆ ರಾಜ್ಯದ ಮುಖಂಡರು ಸೇರಿದಂತೆ ಯಾರನ್ನೂ ಕೇಳಿಕೊಂಡಿಲ್ಲ' ಎಂದರು.

'ಕೆಲವರಿಗೆ ಹುಚ್ಚು ಹಿಡಿದಿದೆ. ನನ್ನನ್ನು ಬಿಜೆಪಿಯಿಂದ ಶಾಶ್ವತವಾಗಿ ಹೊರಗೆ ಹಾಕಲಾಗಿದ್ದು, ವಾಪಸ್ ಕರೆದುಕೊಳ್ಳಲ್ಲ ಎಂದು ಭಾವಿಸಿದ್ದಾರೆ. ಆದರೆ, ಪಕ್ಷದ ವರಿಷ್ಠರು ನಿರಂತರ ನನ್ನ ಸಂಪರ್ಕದಲ್ಲಿದ್ದಾರೆ' ಎಂದರು.

'ಯತ್ನಾಳ ಬಿಜೆಪಿಗೆ ಮರಳುವುದು ಅನುಮಾನ'


ರಮೇಶ ಜಿಗಜಿಣಗಿ

ವಿಜಯಪುರ: 'ಬಿಜೆಪಿ ವರಿಷ್ಠರು ಸೂಕ್ತ ನಿರ್ಣಯ ಕೈಗೊಂಡು, ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟಿಸಿದ್ದಾರೆ. ಅವರು ಪುನಃ ಪಕ್ಷಕ್ಕೆ ಮರಳುವುದು ಅನುಮಾನ' ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದರು.

'ಯತ್ನಾಳ ಉಚ್ಚಾಟನೆ ಮುಗಿದ ಅಧ್ಯಾಯ. ಯಾವಾಗಲೂ ಬಯ್ಯುವ ಮನುಷ್ಯ ನಾಯಕ ಆಗಲ್ಲ. ಬಯ್ಯಿಸಿಕೊಂಡವನೇ ನಾಯಕ ಆಗಲು ಸಾಧ್ಯ. ತಂದೆಯಂತಹ ಹಿರಿಯರಾದ ಯಡಿಯೂರಪ್ಪ ಮತ್ತು ಅವರ ಕುಟುಂಬಕ್ಕೆ ಬಾಯಿಗೆ ಬಂದಂತೆ ಬಯ್ದರು. ಹೀಗಾಗಿ ಅವರು ಸಮಾಜದಲ್ಲಿ ಯೋಗ್ಯತೆ ಕಳೆದುಕೊಂಡಿದ್ದಾರೆ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಶಾಸಕರಾಗುವ ಮುನ್ನ ಯತ್ನಾಳ ಅವರಿಗೆ ಅನುಭವ ಇತ್ತಾ? ಅವರು ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಮುನ್ಸಿಪಲ್ ಸದ್ಯಸರಾಗಿದ್ದರಾ? ಅದೇ ರೀತಿ ವಿಜಯೇಂದ್ರ ಒಬ್ಬ ನಾಯಕರ ಮಗ, ರಾಜ್ಯಾಧ್ಯಕ್ಷರಾದರೆ ಪಕ್ಷಕ್ಕೆ ಒಳ್ಳೆಯದು ಆಗುತ್ತದೆ ಎಂದು ಮಾಡಿದ್ದಾರೆ. ಇದರಲ್ಲಿ ತಪ್ಪೇನು' ಎಂದರು.

ಕದನ ವಿರಾಮ ಘೋಷಣೆಗೆ ಮುನ್ನ ಪ್ರಧಾನಿ ಮೋದಿ ಅವರು ಸರ್ವಪಕ್ಷಗಳ ಸಭೆ ಕರೆಯಬೇಕಿತ್ತು

ಶ್ರೇಯ ಸೈನಿಕರಿಗೇ ಸಲ್ಲಬೇಕು: ಸಿ.ಎಂ

ಪ್ರಜಾವಾಣಿ ವಾರ್ತೆ


ಸಿದ್ದರಾಮಯ್ಯ

ಎಚ್.ಡಿ. ಕೋಟೆ (ಮೈಸೂರು ಜಿಲ್ಲೆ): 'ಪಾಕಿಸ್ತಾನದ ವಿರುದ್ಧ ನಡೆಸಿದ ಕಾರ್ಯಾಚರಣೆಯ ಕ್ರೆಡಿಟ್ ಸೇನೆಯವರಿಗಷ್ಟೇ ಸಲ್ಲಬೇಕು. ಯಾವ ಪಕ್ಷವೂ ಅದನ್ನು ಕ್ಲೇಮ್ ಮಾಡಬಾರದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಇಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, '1971ರಲ್ಲಿ ಪಾಕಿಸ್ತಾನದ ವಿರುದ್ಧ ನಡೆದಿದ್ದ ಯುದ್ಧಕ್ಕೂ- ಇವತ್ತಿನ ಸಂದರ್ಭಕ್ಕೂ ಹೋಲಿಸಿ ಮಾತನಾಡುವುದಿಲ್ಲ. ಆಗಿನ ಪರಿಸ್ಥಿತಿಗಳೇ ಬೇರೆ, ಇವತ್ತಿನವೇ ಬೇರೆ' ಎಂದರು.

'ಕದನ ವಿರಾಮ ಘೋಷಣೆಯಾಗಿದ್ದು, ಎರಡೂ ದೇಶಗಳವರು ಒಪ್ಪಿಕೊಂಡಿರುವುದನ್ನು ಸ್ವಾಗತಿಸುತ್ತೇನೆ. ಘೋಷಣೆಗೂ ಮುನ್ನ ಕೇಂದ್ರ ಸರ್ಕಾರವು ಸರ್ವಪಕ್ಷಗಳ ಸಭೆ ಹಾಗೂ ವಿಶೇಷ ಅಧಿವೇಶನವನ್ನೂ ಕರೆಯಬೇಕಿತ್ತು. ಗಂಭೀರ ವಿಷಯವಾಗಿದ್ದರಿಂದ, ಸರ್ವಪಕ್ಷ ಸಭೆಯಲ್ಲಿ ಚರ್ಚಿಸಿ ನಿರ್ಧಾರ ಪ್ರಕಟಿಸಬಹುದಿತ್ತು' ಎಂದರು.

'ರಾಜ್ಯದಲ್ಲಿರುವ ಎಲ್ಲಾ ಪಾಕಿಸ್ತಾನಿ ಪ್ರಜೆಗಳನ್ನು ಹೊರಗೆ ಕಳುಹಿಸಿದ್ದು, ಮೈಸೂರಿನಲ್ಲಿ ಮೂವರು ಮಕ್ಕಳಷ್ಟೇ ಇದ್ದಾರೆ. ಅವರನ್ನು ಹೊರಗೆ ಕಳುಹಿಸಲು ತಾಂತ್ರಿಕ ಸಮಸ್ಯೆ ಇದೆ. ಗಂಡ ಪಾಕಿಸ್ತಾನಿ, ಹೆಂಡತಿ ಮೈಸೂರಿನವಳು. ಹೀಗಾಗಿ ಆರು ವರ್ಷದೊಳಗಿನವರಾದ ಮಕ್ಕಳ ವಿಚಾರದಲ್ಲಿ ತಾಂತ್ರಿಕ ಸಮಸ್ಯೆ ಎದುರಾಗಿದೆ' ಎಂದು ಪ್ರತಿಕ್ರಿಯಿಸಿದರು.

ವಿದೇಶಾಂಗ ನೀತಿ ಟ್ರಂಪ್‌ಗೆ ಅಡ ಇಡ್ತೀರಾ?: ಪ್ರಿಯಾಂಕ್


ಪ್ರಿಯಾಂಕ್ ಖರ್ಗೆ

ಕಲಬುರಗಿ: 'ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಸ್ನೇಹಿತ ಎಂದು ಹೇಳುತ್ತಾರೆ. ನಿಮ್ಮ ಸ್ನೇಹಿತರಿದ್ದರೆ ದೇಶದ ವಿದೇಶಾಂಗ ನೀತಿ ಅವರಿಗೆ ಅಡ ಇಡ್ತೀರಾ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಭಯೋತ್ಪಾದನೆ ಹುಟ್ಟುವ ತಾಣಗಳನ್ನು ಗುರಿಯಾಗಿಸಿ ದಾಳಿ ಮಾಡಿ ಭಯೋತ್ಪಾದನೆ ಕಿತ್ತೊಗೆಯಲು ಭಾರತೀಯ ಸೇನೆ ಪ್ರಯತ್ನಿಸಿದೆ. ಪಾಕ್ ವಿರುದ್ಧದ ಹೋರಾಟಕ್ಕೆ ವಿರೋಧ ಪಕ್ಷಗಳು ಸೇರಿದಂತೆ ಇಡೀ ದೇಶವೇ ಬೆಂಬಲಿಸಿದೆ. ಆದರೆ, ಅಮೆರಿಕದ ಮಾತು ಕೇಳಿ ಕದನ ವಿರಾಮಕ್ಕೆ ಮುಂದಾಗಿದ್ದು ಏಕೆ?' ಎಂದರು.

'ಪ್ರಧಾನಿಯಾಗಿ ದೇಶದ ಹಿತಾಸಕ್ತಿಗಾಗಿ ನೀವು ಕೈಗೊಳ್ಳುವ ಯಾವುದೇ ನಿರ್ಧಾರ ಬೆಂಬಲಿಸಲು ನಾವು ಸಿದ್ಧ. ಆದರೆ, ಭಾರತ–ಪಾಕಿಸ್ತಾನ ನಡುವಣ ಕದನ ವಿರಾಮಕ್ಕೆ ಒಪ್ಪಿಕೊಂಡದ್ದನ್ನು ಟ್ರಂಪ್ ತಮ್ಮ 'ಎಕ್ಸ್'ನಲ್ಲಿ ಬರೆದು ಘೋಷಿಸುತ್ತಾರೆ. ಕಾಮನ್ ಸೆನ್ಸ್ ಎನ್ನುವ ಪದ ಬಳಸುತ್ತಾರೆ. ಇದು ವಿದೇಶಾಂಗ ನೀತಿಯ ಸ್ಪಷ್ಟ ಕುಸಿತ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮೌನವೇಕೆ?: 'ಪರೀಕ್ಷಾ ಪೇ ಚರ್ಚಾ, ಮನ್ ಕಿ ಬಾತ್ ಎಂದೆಲ್ಲ ದೇಶವನ್ನು ಉದ್ದೇಶಿಸಿ ಮಾತನಾಡುವ ಪ್ರಧಾನಿ, ಪಹಲ್ಗಾಮ್ ದಾಳಿಯ ಭಯೋತ್ಪಾದಕರು ಏನಾದರು? ಅವರೆಲ್ಲ ಎಲ್ಲಿ ಹೋದರು? ಕದನ ವಿರಾಮದ ಉದ್ದೇಶವೇನು? ದೇಶಕ್ಕಾದ ಲಾಭವೇನು? ಅದರ ಷರತ್ತುಗಳೇನು ಎಂಬುದರ ಬಗೆಗೆ ಸಂಸತ್ತಿನ ವಿಶೇಷ ಅಧಿವೇಶನ ಕರೆದು ಜನರಿಗೆ ತಿಳಿಸಬೇಕು' ಎಂದು ಒತ್ತಾಯಿಸಿದರು.

ಡೊನಾಲ್ಡ್ ಟ್ರಂಪ್ ವಿಶ್ವಗುರು: ಹರಿಪ್ರಸಾದ್


ಬಿ.ಕೆ. ಹರಿಪ್ರಸಾದ್

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರನ್ನು ಅವರ ಅನುಯಾಯಿಗಳು ವಿಶ್ವಗುರು ಎನ್ನುತ್ತಿದ್ದರು. ಈಗ ನಿಜವಾದ ವಿಶ್ವಗುರು ಟ್ರಂಪ್. ಅವರ ಆಣತಿಯಂತೆಯೇ ಹೆಜ್ಜೆ ಇಡುವ ಪ್ರಧಾನಿಯನ್ನು ಇನ್ನು ಮುಂದೆ ಯಾರೂ ವಿಶ್ವಗುರು ಎನ್ನಬಾರದು ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ವಿನಂತಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಪಾಕಿಸ್ತಾನದ ಮೇಲೆ ಭಾರತ ಯುದ್ಧ ಮಾಡಬೇಕೇ? ಬೇಡವೇ ಎಂಬ ತೀರ್ಮಾನವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾಡುತ್ತಾರೆ. ಇದು ಭಾರತದ ಸೈನಿಕರ ಆತ್ಮಸ್ಥೈರ್ಯ ಕುಗ್ಗಿಸುವ ಕೆಲಸ. ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಡಿದ ಅವಮಾನ. ಶಿಮ್ಲಾ ಒಪ್ಪಂದದ ಉಲ್ಲಂಘನೆ. ಪಹಲ್ಗಾಮ್ ಘಟನೆಯ ನಂತರದ ಬೆಳವಣಿಗೆ, ಭಾರತ–ಪಾಕಿಸ್ತಾನ ಬಿಕ್ಕಟ್ಟು ಶಮನಕ್ಕೆ ಅಮೆರಿಕ ಮಧ್ಯಸ್ಥಿಕೆ ಕುರಿತು ಚರ್ಚಿಸಲು ವಿಶೇಷ ಸಂಸತ್ ಅಧಿವೇಶನ ಕರೆಯಬೇಕು ಎಂದು ಒತ್ತಾಯಿಸಿದರು.

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ಪಾಕಿಸ್ತಾನಕ್ಕೆ 1.2 ಶತಕೋಟಿ ಡಾಲರ್ ಸಾಲ ನೀಡಿದೆ. ಅದನ್ನು ತಡೆಯಲು ಭಾರತ ಪ್ರಯತ್ನ ಮಾಡಲಿಲ್ಲ. ಟರ್ಕಿ, ಇರಾನ್, ಸೌದಿ ಅರೇಬಿಯಾ ಸಹ ಭಾರತದ ಪರ ಮಾತನಾಡಲಿಲ್ಲ. ಇದು ಭಾರತದ ನಾಯಕತ್ವದ ಕೊರತೆಯನ್ನು ಬಿಂಬಿಸುತ್ತದೆ ಎಂದರು.

ಭಯೋತ್ಪಾದಕ ದಾಳಿ ನಡೆಸಿದ ಪಾಕಿಸ್ತಾನಕ್ಕೆ ಸರಿಯಾದ ಬುದ್ಧಿ ಕಲಿಸಬೇಕು ಎಂದು ಕೇಂದ್ರ ಸರ್ಕಾರ ತೆಗೆದುಕೊಂಡ ನಿರ್ಧಾರಗಳಿಗೆ ಕಾಂಗ್ರೆಸ್ ಸೇರಿದಂತೆ ಎಲ್ಲ ವಿರೋಧ ಪಕ್ಷಗಳೂ ಬೆಂಬಲ ನೀಡಿದ್ದವು. ಆದರೆ, ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡುವ ಮೊದಲೇ ಅಮೆರಿಕಕ್ಕೆ ಶರಣಾದುದು ವಿಪರ್ಯಾಸ ಎಂದು ಹೇಳಿದರು.

ಪಾಕ್ ನಕ್ಷೆಯಲ್ಲಿ ಕಾಶ್ಮೀರ: ಅಶೋಕ ಟೀಕೆ


ಆರ್.ಅಶೋಕ

ಬೆಂಗಳೂರು: 'ಕಾಶ್ಮೀರ ಪಾಕಿಸ್ತಾನಕ್ಕೆ ಸೇರಿದ್ದು ಎಂದು ಬಿಂಬಿಸುವ ನಕ್ಷೆಯನ್ನು 'ಎಕ್ಸ್' ಮೂಲಕ ಹಂಚಿಕೊಂಡಿರುವ ಕರ್ನಾಟಕ ಕಾಂಗ್ರೆಸ್ ಮತ್ತೊಮ್ಮೆ ಪಾಕಿಸ್ತಾನದ ಮೇಲೆ ತನಗೆ ಎಷ್ಟು ಪ್ರೀತಿ ಇದೆ ಎಂಬುದನ್ನು ತೋರಿಸಿಕೊಂಡಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್‌ನ ಜಾಲತಾಣದ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡ ಬಳಿಕ, ಆ ನಕ್ಷೆಯನ್ನು ಹಿಂದಕ್ಕೆ ಪಡೆದಿದ್ದಾರೆ. ಕರ್ನಾಟಕ ಕಾಂಗ್ರೆಸ್ ಪಕ್ಷದ ಐ.ಟಿ ಸೆಲ್ ಪಾಕಿಸ್ತಾನಿ ಉಗ್ರರ ಸ್ಲೀಪರ್ ಸೆಲ್ ಎನ್ನುವುದರಲ್ಲಿ ಅನುಮಾನವೇ ಇಲ್ಲ' ಎಂದು ಹರಿಹಾಯ್ದಿದ್ದಾರೆ.

'ಆಪರೇಷನ್ ಸಿಂಧೂರ ಕಾರ್ಯಾಚರಣೆಗೂ ಮೊದಲೇ ಪಾಕಿಸ್ತಾನದ ಜತೆ ಯುದ್ಧ ಬೇಡ ಎಂದು ಪಾಕಿಸ್ತಾನದ ಪರ ವಕಾಲತ್ತು ವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಜನಾಕ್ರೋಶ ನೋಡಿ ಉಲ್ಟಾ ಹೊಡೆದರು' ಎಂದಿದ್ದಾರೆ.

ಸುದ್ದಿ 2 ನಿಮಿಷ

'ಮೂರನೇ ರಾಷ್ಟ್ರದ ಮಧ್ಯಸ್ಥಿಕೆ ಇಲ್ಲ'



ಬೆಂಗಳೂರು: 'ಅಮೆರಿಕದ ಮಧ್ಯಸ್ಥಿಕೆಯಲ್ಲಿ ಕದನವಿರಾಮ ಅನ್ನುವುದು ಸರಿಯಲ್ಲ. ಜಾಗತಿಕ ಮಟ್ಟದಲ್ಲಿ ತನ್ನ ಮುಖ ಉಳಿಸಿಕೊಳ್ಳಲು ಪಾಕಿಸ್ತಾನ ನಾನಾ ಸರ್ಕಸ್ ಮಾಡಿದೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಶ್ಮೀರದ ವಿಷಯದಲ್ಲಿ ಭಾರತ ಎಂದಿಗೂ ಮೂರನೇ ರಾಷ್ಟ್ರದ ಮಧ್ಯಸ್ಥಿಕೆ ಒಪ್ಪಿಲ್ಲ. ಅದಕ್ಕೆ ಅವಕಾಶವನ್ನು ಕೂಡ ಕೊಟ್ಟಿಲ್ಲ. ಪ್ರಧಾನಿ ಮೋದಿ ಅವರು ಇದೇ ಮಾತನ್ನು ಸ್ಪಷ್ಟವಾಗಿ ಹೇಳಿದ್ದು, ರಾಷ್ಟ್ರೀಯ ಹಿತಾಸಕ್ತಿ ವಿಷಯದಲ್ಲಿ ಮೋದಿ ಅವರು ಎಂದಿಗೂ ರಾಜಿ ಮಾಡಿಕೊಳ್ಳುವುದಿಲ್ಲ' ಎಂದರು.

'ರಾಷ್ಟ್ರೀಯ ಭದ್ರತೆ ಮತ್ತು ರಕ್ಷಣೆ ವಿಚಾರದಲ್ಲಿ ಮೋದಿ ಸರ್ಕಾರ ದೃಢ ಹೆಜ್ಜೆಗಳನ್ನು ಇಟ್ಟಿದ್ದು, ನಮ್ಮ ಮೇಲೆ ದಾಳಿ ನಡೆಸಿದ ರಾಷ್ಟ್ರಕ್ಕೆ ನಮ್ಮ ಸೇನಾ ಪಡೆಗಳು ತಕ್ಕ ಪಾಠ ಕಲಿಸಿವೆ. ಪಾಕಿಸ್ತಾನವನ್ನು ಮಟ್ಟ ಹಾಕುವ ದೃಷ್ಟಿಯಿಂದ ಪೂರ್ಣ ಪ್ರಮಾಣದ ಯುದ್ಧ ಆಗಲೇಬೇಕಿತ್ತು ಎಂಬ ನಿಲುವು ಒಂದು ಕಡೆ ಇದೆ. ಮತ್ತೊಂದು ಕಡೆ ರಷ್ಯಾ, ಉಕ್ರೇನ್ ಯುದ್ಧದಿಂದ ಇವತ್ತು ಯಾವ ಸ್ಥಿತಿ ಉಂಟಾಗಿದೆ ಎನ್ನುವ ವಾದವೂ ಇನ್ನೊಂದೆಡೆ ಇದೆ. ಈಗಲಾದರೂ ಪಾಕಿಸ್ತಾನ ಎಚ್ಚೆತ್ತುಕೊಳ್ಳದಿದ್ದರೆ ಅದು ಮುಂದಿನ ದಿನಗಳಲ್ಲಿ ಸಂಪೂರ್ಣವಾಗಿ ನಾಶವಾಗಲಿದೆ' ಎಂದು ಅವರು ಎಚ್ಚರಿಕೆ ಕೊಟ್ಟರು.

ಇದೇ 15ರಿಂದ ನೌಕರರ ಸಾರ್ವತ್ರಿಕ ವರ್ಗಾವಣೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಗೆ ಸಂಬಂಧಿಸಿದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆ ಅಧಿಕೃತ ಆದೇಶ ಹೊರಡಿಸಿದ್ದು, ಇದೇ 15ರಿಂದ ಜೂನ್ 14 ರವರೆಗೆ ವರ್ಗಾವಣೆ ಪ್ರಕ್ರಿಯೆ ನಡೆಯಲಿದೆ.

ಈ ಸಾಲಿನಲ್ಲಿ ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ, ಮತ್ತು ಗ್ರೂಪ್- ಡಿ ಹುದ್ದೆಗಳಿಗೆ ಮಾಡಲಾಗುವ ವರ್ಗಾವಣೆಗಳ ಸಂಖ್ಯೆಯು ಆಯಾ ವೃಂದಗಳ ಕಾರ್ಯನಿರತ ವೃಂದ ಬಲದ ಶೇ 6 ಅನ್ನು ಮೀರಬಾರದು. ಆದ್ದರಿಂದ, ಗ್ರೂಪ್-ಎ, ಗ್ರೂಪ್-ಬಿ ವೃಂದದ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಆಯಾ ಇಲಾಖೆ ಸಚಿವರಿಗೆ ಹಾಗೂ ಗ್ರೂಪ್-ಸಿ ಮತ್ತು ಗ್ರೂಪ್-ಡಿ ವೃಂದದ ನೌಕರರಿಗೆ ಸಂಬಂಧಿಸಿದಂತೆ ಆಯಾ ನೇಮಕಾತಿ ಪ್ರಾಧಿಕಾರಗಳಿಗೆ ಅಧಿಕಾರ ನೀಡಲಾಗಿದೆ.

ಎ ಮತ್ತು ಬಿ ವೃಂದದ ಹುದ್ದೆಗಳಲ್ಲಿ 2 ವರ್ಷ, ಸಿ ವೃಂದದ ಹುದ್ದೆಯಲ್ಲಿ 4 ವರ್ಷ ಹಾಗೂ ಡಿ ವೃಂದದ ಹುದ್ದೆಗಳಲ್ಲಿ 7 ವರ್ಷ ಪೂರ್ಣಗೊಳಿಸಿದವರನ್ನು ವರ್ಗಾವಣೆ ಮಾಡಬಹುದಾಗಿದೆ. ಎ ಮತ್ತು ಬಿ ವೃಂದದ ಅಧಿಕಾರಿಗಳಿಗೆ ಸಂಬಂಧಿಸಿದ ವರ್ಗಾವಣೆ ಪ್ರಸ್ತಾವನೆಗಳನ್ನು ಸಚಿವಾಲಯದ ಆಡಳಿತ ಇಲಾಖೆಗಳ ಮೂಲಕವೇ ಸಚಿವರಿಗೆ ಸಲ್ಲಿಸಬೇಕು.

ಹೈದರಾಬಾದ್ ಕರ್ನಾಟಕ ಪ್ರದೇಶದ ಕಚೇರಿಗಳಲ್ಲಿ ವಿವಿಧ ವೃಂದಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆದುರಾಗಿ ನೇಮಕಗೊಂಡ ನೌಕರರನ್ನು ಅವರ ನೇಮಕಾತಿ ದಿನಾಂಕದಿಂದ ಕನಿಷ್ಠ 10 ವರ್ಷಗಳವರೆಗೆ ಹೈದರಾಬಾದ್ ಕರ್ನಾಟಕ ಪ್ರದೇಶ ಹೊರತುಪಡಿಸಿ ಬೇರೆಡೆ ವರ್ಗಾವಣೆ ಮಾಡುವಂತಿಲ್ಲ ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ಜಿಲ್ಲೆಗಳಲ್ಲಿ ಅಂಗಾಂಗ ಪಡೆಯುವ ಕೇಂದ್ರ ಪ್ರಾರಂಭಿಸಿ: ಆರೋಗ್ಯ ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಿದುಳು ನಿಷ್ಕ್ರಿಯಗೊಂಡು ಮೃತಪಟ್ಟವರ ಅಂಗಾಂಗಗಳನ್ನು ಪಡೆಯುವ ಪ್ರಯತ್ನಗಳು ಜಿಲ್ಲಾ ಆಸ್ಪತ್ರೆಗಳಲ್ಲಿ ನಡೆಯುತ್ತಿಲ್ಲ. ಎಲ್ಲ ಜಿಲ್ಲಾ ಆಸ್ಪತ್ರೆಗಳು ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಅಂಗಾಂಗ ಮರುಪಡೆಯುವ ಕೇಂದ್ರಗಳನ್ನು ಕೂಡಲೇ ಪ್ರಾರಂಭಿಸಬೇಕು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೋಮವಾರ ಸೂಚನೆ ನೀಡಿದರು.

ಜೀವಸಾರ್ಥಕತೆ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಜೀವಸಾರ್ಥಕತೆ ಕಾರ್ಯಕ್ರಮದ ಅಡಿಯಲ್ಲಿ ಅಂಗಾಂಗ ದಾನ ಮತ್ತು ಅಂಗಾಂಗ ಕಸಿ ಆರೋಗ್ಯ ಸೇವೆಗಳನ್ನು ಹೆಚ್ಚಿಸಲು ಸರ್ಕಾರಿ ಜಿಲ್ಲಾ ಆಸ್ಪತ್ರೆಗಳು ಗಮನ ಹರಿಸಬೇಕು. ರಾಜ್ಯದ ಮೂರು ಸ್ಥಳಗಳಲ್ಲಿ ಬೆಂಗಳೂರು ಮೆಡಿಕಲ್ ಸರ್ವಿಸ್ ಟ್ರಸ್ಟ್ ಅಡಿಯಲ್ಲಿ ಹ್ಯೂಮನ್ ಲ್ಯುಕೋಸೈಟ್ ಆ್ಯಂಟಿಜೆನ್ ಪ್ರಯೋಗಾಲಯಗಳನ್ನು ಸ್ಥಾಪಿಸಲು 'ಕೆಎಂಸಿ ಆ್ಯಂಡ್ ಆರ್‌ಐ' ಮಾದರಿಯನ್ನು ಅನ್ವೇಷಿಸಬೇಕು ಎಂದರು.



ರಥೋತ್ಸವ

ಗದಗ ಜಿಲ್ಲೆ ಶಿರಹಟ್ಟಿಯ ಫಕ್ಕಿರೇಶ್ವರರ ಮಹಾರಥೋತ್ಸವವು ಸೋಮವಾರ ಭಕ್ತ ಸಮೂಹದ ನಡುವೆ ವಿಜೃಂಭಣೆಯಿಂದ ನಡೆಯಿತು ಚಿತ್ರ: ನಿಂಗಪ್ಪ ಹಮ್ಮಿಗಿ

ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರಕ್ಕೆ ಎರಡು ವರ್ಷ

'ಸಂಭ್ರಮಕ್ಕೆ ಮತ್ತೆ ತಯಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು/ಎಚ್.ಡಿ. ಕೋಟೆ: ಕಾಂಗ್ರೆಸ್ ನೇತೃತ್ವದ ಸರ್ಕಾರದ ಎರಡು ವರ್ಷಗಳ ಸಂಭ್ರಮಾಚರಣೆಯನ್ನು ಶೀಘ್ರವೇ ಹಮ್ಮಿಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಎರಡು ವರ್ಷ ಪೂರ್ಣಗೊಳಿಸುತ್ತಿದೆ. ಸಂಭ್ರಮಾಚರಣೆ ಹಮ್ಮಿಕೊಳ್ಳಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಅನುಮತಿಯನ್ನು ಪಡೆದಿದ್ದೆವು. ಸಂಪುಟ ಸಭೆಯಲ್ಲೂ ನಿರ್ಧಾರ ತೆಗೆದುಕೊಳ್ಳಲಾಗಿತ್ತು' ಎಂದರು.

ಭಾರತ–ಪಾಕಿಸ್ತಾನದ ಮಧ್ಯೆ ಯುದ್ಧದ ಸಿದ್ಧತೆ ಆರಂಭವಾದ ಕಾರಣ ಸಂಭ್ರಮಾಚರಣೆ ಮುಂದೂಡುವ ನಿರ್ಧಾರ ತೆಗೆದುಕೊಂಡಿದ್ದೆವು. ಈಗ ಕದನ ವಿರಾಮ ಏರ್ಪಟ್ಟಿದೆ. ಹೈಕಮಾಂಡ್ ಜತೆ ಚರ್ಚಿಸಿ, ಮತ್ತೆ ಸಿದ್ಧತೆ ಆರಂಭಿಸುತ್ತೇವೆ. ನುಡಿದಂತೆ ನಡೆದ ಸರ್ಕಾರದ ಸಾಧನೆಗಳನ್ನು ಜನರಿಗೆ ತಿಳಿಸುತ್ತೇವೆ ಎಂದು ಹೇಳಿದರು.

ಈ ಕುರಿತು ಬೆಂಗಳೂರಿನಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಗಡಿಯಲ್ಲಿನ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದ ಕಾರಣ ಸಂಭ್ರಮಾಚರಣೆ ಮುಂದೂಡಲು ನಿರ್ಧರಿಸಿದ್ದೆವು. ಈಗ ಕದನ ವಿರಾಮ ಘೋಷಣೆಯಾಗಿದೆ. ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ ಐದಾರು ಜಿಲ್ಲೆಗಳ ಉಸ್ತುವಾರಿ ಸಚಿವರು, ಶಾಸಕರು, ವಿಧಾನಸಭಾ ಕ್ಷೇತ್ರವಾರು ಕಾರ್ಯಕರ್ತರ ಸಭೆ ನಡೆಸಲು ಸೂಚಿಸಲಾಗಿದೆ' ಎಂದರು.

ಹಿರಿಯರು ಸಚಿವ ಸ್ಥಾನ ತ್ಯಾಗ ಮಾಡಬೇಕು: ಮುನಿಯಪ್ಪ



ಕೋಲಾರ: ರಾಜ್ಯ ಕಾಂಗ್ರೆಸ್ ಸರ್ಕಾರ ಎರಡೂವರೆ ವರ್ಷ ಪೂರೈಸಿದ ಬಳಿಕ ಹಿರಿಯ ಸಚಿವರು ಎರಡನೇ ಹಂತದ ನಾಯಕರಿಗೆ ಅವಕಾಶ ಮಾಡಿಕೊಡಲು ತ್ಯಾಗಕ್ಕೆ ಸಿದ್ಧರಾಗಬೇಕು. ಮೂರ್‍ನಾಲ್ಕು ಬಾರಿ ಗೆದ್ದಿರುವ ಶಾಸಕರಿಗೆ ಇನ್ನೂ ಅವಕಾಶಗಳು ಸಿಕ್ಕಿಲ್ಲ ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮತ್ತೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಮತ್ತು ಪಕ್ಷದ ಒಳಿತಿಗಾಗಿ ಎರಡನೇ ಹಂತದ ನಾಯಕರಿಗೆ ಅವಕಾಶ ಮಾಡಿಕೊಡಬೇಕು ಎಂದರು.

> ಕಾಂಗ್ರೆಸ್ ಕೊಟ್ಟ ಮಾತಿನಂತೆ ನಡೆದಿದೆ. ಭರವಸೆಯಂತೆ 1 ಲಕ್ಷ ಪಟ್ಟಾ ಖಾತೆ ಹಂಚಿಕೆ ಮಾಡಲಾಗುತ್ತಿದೆ. 2 ವರ್ಷಗಳ ಸರ್ಕಾರದ ಸಾಧನೆಯನ್ನು ಎಲ್ಲರೂ ಸಂಭ್ರಮಿಸಲಿದ್ದಾರೆ
> **ಡಿ.ಕೆ. ಶಿವಕುಮಾರ್, ಡಿಸಿಎಂ**

'ನಾನು ಬಹಳ ಹಿಂದೆಯೇ ಸದುದ್ದೇಶದಿಂದ ಈ ಮಾತು ಹೇಳಿದ್ದೆ. ಆ ಮಾತಿಗೆ ನಾನು ಈಗಲೂ ಬದ್ಧ. ರಾಜಕೀಯವಾಗಿ ಪಕ್ಷ ಕಟ್ಟಬೇಕಾದರೆ ತ್ಯಾಗ ಮಾಡಲು ಸಿದ್ಧರಿರಬೇಕು. ಆದರೆ, ಅಂತಿಮವಾಗಿ ತೀರ್ಮಾನ ಮಾಡುವುದು ಹೈಕಮಾಂಡ್' ಎಂದು ಹೇಳಿದರು.

ಮುಖ್ಯಮಂತ್ರಿ ಬದಲಾವಣೆ ಕುರಿತಾಗಲಿ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತಾಗಲಿ ಪಕ್ಷದಲ್ಲಿ ಯಾವುದೇ ತೀರ್ಮಾನ ಆಗಿಲ್ಲ. ಇಬ್ಬರೂ ತಮ್ಮ ತಮ್ಮ ಸ್ಥಾನಗಳಲ್ಲಿ ಮುಂದುವರಿಯಲಿದ್ದಾರೆ ಎಂದು ತಿಳಿಸಿದರು.

ಅರ್ಜಿ ಹಾಕಿದವರಿಗೆ ಶೀಘ್ರದಲ್ಲೇ ಹೊಸದಾಗಿ ಬಿಪಿಎಲ್ ಪಡಿತರ ಚೀಟಿ ಕೊಡಲಾಗುವುದು. ಅನ್ನಭಾಗ್ಯ ಯೋಜನೆಯಡಿ ಪ್ರತಿ ತಿಂಗಳು ತಪ್ಪದೇ 10 ಕೆ.ಜಿ ಅಕ್ಕಿ ವಿತರಿಸಲಾಗುತ್ತಿದೆ ಎಂದು ಸಚಿವರು ಹೇಳಿದರು.

ನರ್ಸಿಂಗ್: ವಿವರ ಪ್ರಕಟಕ್ಕೆ ನಿರ್ದೇಶನ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ರಾಜ್ಯದ ನರ್ಸಿಂಗ್ ಕಾಲೇಜುಗಳಲ್ಲಿನ ಮೂಲಸೌಕರ್ಯ ಸೇರಿದಂತೆ ಇತರೆ ಅಂಶಗಳ ತಪಾಸಣಾ ವರದಿಗಳನ್ನು ಆಯಾ ನರ್ಸಿಂಗ್ ಸಂಸ್ಥೆಗಳು ವೆಬ್ ಪೋರ್ಟಲ್‌ನಲ್ಲಿ ಕಾಲಕಾಲಕ್ಕೆ ಅಪ್‌ಲೋಡ್ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಹೈಕೋರ್ಟ್ ಸಂಬಂಧಿಸಿದ ಪ್ರಾಧಿಕಾರಗಳಿಗೆ ಆದೇಶಿಸಿದೆ.

ಈ ಸಂಬಂಧ, 'ಕರ್ನಾಟಕ ರಾಜ್ಯ ಖಾಸಗಿ ಆರೋಗ್ಯ ಸಂಸ್ಥೆಗಳ ನಿರ್ವಹಣಾ ಒಕ್ಕೂಟ' ಮತ್ತು 'ಕರ್ನಾಟಕ ರಾಜ್ಯ ನರ್ಸಿಂಗ್ ಮತ್ತು ಇತರೆ ಆರೋಗ್ಯ ಸಂಬಂಧಿ ಸಂಸ್ಥೆಗಳ ನಿರ್ವಹಣಾ ಒಕ್ಕೂಟ' ಸಲ್ಲಿಸಿದ್ದ ಅರ್ಜಿಗಳ ಮನವಿಯನ್ನು ಮಾನ್ಯ ಮಾಡಲು ನಿರಾಕರಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ನರ್ಸಿಂಗ್ ಕೋರ್ಸ್‌ಗಳಿಗೆ ಸೇರುವ ವಿದ್ಯಾರ್ಥಿಗಳು ಯಾವ ಸಂಸ್ಥೆಗಳ ಕಾಲೇಜಿನಲ್ಲಿ ಸೀಟು ಪಡೆಯಬೇಕು, ಕಾಲೇಜುಗಳು ಮತ್ತು ಅವುಗಳ ಸಂಸ್ಥೆಗಳ ಮೂಲಸೌಕರ್ಯ, ಅಲ್ಲಿನ ವ್ಯವಸ್ಥೆ ಹೇಗಿದೆ ಎಂಬೆಲ್ಲಾ ವಿವರಗಳನ್ನು ಪಡೆಯಲು ಸದ್ಯಕ್ಕೆ ಯಾವುದೇ ವ್ಯವಸ್ಥೆ ಇಲ್ಲ' ಎಂಬುದನ್ನು ನ್ಯಾಯಪೀಠ ಆದೇಶದಲ್ಲಿ ಉಲ್ಲೇಖಿಸಿದೆ.

'ಈ ನಿಟ್ಟಿನಲ್ಲಿ, ತಪಾಸಣಾ ವರದಿಗಳನ್ನು ಆಯಾ ನರ್ಸಿಂಗ್ ಸಂಸ್ಥೆಗಳು ವೆಬ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ನ್ಯಾಯಪೀಠ, ಭಾರತೀಯ ನರ್ಸಿಂಗ್ ಮಂಡಳಿ (ಐಎನ್‌ಸಿ), ಕರ್ನಾಟಕ ನರ್ಸಿಂಗ್ ಮಂಡಳಿ (ಕೆಎನ್‌ಸಿ) ಮತ್ತು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ (ಆರ್‌ಜಿಯುಎಚ್‌ಎಸ್) ನಿರ್ದೇಶಿಸಿದೆ.

'ನರ್ಸಿಂಗ್ ಸಂಸ್ಥೆಗಳ ವಿರುದ್ಧ ಯಾವುದೇ ವಿದ್ಯಾರ್ಥಿ, ಪೋಷಕರು, ಶಿಕ್ಷಕರು ಅಥವಾ ಉಪನ್ಯಾಸಕರು ಆನ್‌ಲೈನ್ ಮೂಲಕವೇ ಐಎನ್‌ಸಿ, ಕೆಎನ್‌ಸಿ ಮತ್ತು ಆರ್‌ಜಿಯುಎಚ್‌ಎಸ್‌ಗೆ ದೂರು ಸಲ್ಲಿಸಲು ಅವಕಾಶ ಮಾಡಿಕೊಡಬೇಕು ಮತ್ತು ಆ ದೂರುಗಳನ್ನೂ ಅಪ್‌ಲೋಡ್ ಮಾಡಬೇಕು' ಎಂದು ಐಎನ್‌ಸಿ, ಕೆಎನ್‌ಸಿ ಮತ್ತು ಆರ್‌ಜಿಯುಎಚ್‌ಎಸ್‌ಗೆ ನ್ಯಾಯಪೀಠ ತಾಕೀತು ಮಾಡಿದೆ.

'ನಿಮ್ಮ ವ್ಯಾಪ್ತಿಯ ನರ್ಸಿಂಗ್ ಕಾಲೇಜುಗಳಿಗೆ ಭೇಟಿ ನೀಡಿ ಅಲ್ಲಿನ ಮೂಲಸೌಕರ್ಯಗಳ ಬಗ್ಗೆ ಕೂಲಂಕಷ ತಪಾಸಣೆ ನಡೆಸಿ ವರದಿ ಸಲ್ಲಿಸಿ' ಎಂದು ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯು ಎಲ್ಲ ಜಿಲ್ಲಾಧಿಕಾರಿಗಳಿಗೆ 2024ರ ನವೆಂಬರ್ 5ರಂದು ಸೂಚಿಸಿದ್ದರು. ಅರ್ಜಿದಾರರು ಇದನ್ನು ಪ್ರಶ್ನಿಸಿದ್ದರು.

ಸೀಟ್ ಬ್ಲಾಕಿಂಗ್: ಕೈಸೇರದ ವರದಿ

ಬೆಂಗಳೂರು: 2024–25ನೇ ಸಾಲಿನಲ್ಲಿ ನಡೆದ ಸೀಟ್ ಬ್ಲಾಕಿಂಗ್ ಹಗರಣದ ತನಿಖೆಯ ವರದಿ ಇಲ್ಲಿಯವರೆಗೂ ಕೈಸೇರಿಲ್ಲ. ಪೊಲೀಸ್ ಕಮಿಷನರ್ ಬಿ. ದಯಾನಂದ ಅವರಿಂದ ಮಾಹಿತಿ ಪಡೆಯಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಗರಣದ ನಂತರ ಪೊಲೀಸರು ಕೆಲವರನ್ನು ಬಂಧಿಸಿದ್ದರು. ಅವರು ಜಾಮೀನು ಪಡೆದು ಹೊರಬಂದಿದ್ದಾರೆ. ಹಗರಣದಲ್ಲಿ ಹೆಸರಿಸಲಾದ ಕಾಲೇಜುಗಳ ಪಾತ್ರದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಈ ಕುರಿತು ಸಂಪೂರ್ಣ ಮಾಹಿತಿ ಪಡೆಯಲಾಗುವುದು ಎಂದರು.

ಹಗರಣದಲ್ಲಿ ಪ್ರಮುಖವಾಗಿ ಹೆಸರು ಕೇಳಿಬಂದಿದ್ದ ಬಿಎಂಎಸ್ ಕಾಲೇಜು ಆ ಶೈಕ್ಷಣಿಕ ವರ್ಷದಲ್ಲಿ ಉಳಿಕೆಯಾದ ಯಾವ ಸೀಟನ್ನು ಭರ್ತಿ ಮಾಡಿಲ್ಲ ಎಂದು ಮಾಹಿತಿ ನೀಡಿದೆ. ಸೀಟ್ ಬ್ಲಾಕಿಂಗ್ ದಂಧೆಯಲ್ಲಿ ಭಾಗಿಯಾದ ಇತರೆ ಕಾಲೇಜುಗಳ ಪಾತ್ರದ ಬಗ್ಗೆ ವರದಿ ನೀಡಲು ಪೊಲೀಸರಿಗೆ ಏಕೆ ಸಾಧ್ಯವಾಗಲಿಲ್ಲ ಎಂಬ ಮಾಹಿತಿ ಬೇಕಿದೆ ಎಂದು ಹೇಳಿದರು. ಸೀಟ್ ಬ್ಲಾಕಿಂಗ್ ತಡೆಗೆ ಈ ವರ್ಷ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಅಂತಹ ಪ್ರಕರಣಗಳು ಮತ್ತೆ ಮರುಕಳಿಸುವುದಿಲ್ಲ ಎನ್ನುವ ಭರವಸೆ ಮೂಡಿದೆ ಎಂದು ಹೇಳಿದರು.

ಪಿಜಿ-ಸಿಇಟಿ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ


ಪಿಜಿ-ಸಿಇಟಿಗೆ ಅರ್ಜಿ ಸಲ್ಲಿಕೆ ಮತ್ತು ಶುಲ್ಕ ಪಾವತಿಸುವ ಅವಧಿಯನ್ನು ಮೇ 14ರವರೆಗೆ ವಿಸ್ತರಿಸಲಾಗಿದೆ.

ಮೇ 14ರ ಬೆಳಿಗ್ಗೆ 11ರ ಒಳಗೆ ಅರ್ಜಿ ಸಲ್ಲಿಸಬೇಕು. ಅಂದೇ ಸಂಜೆ 6ರ ಒಳಗೆ ಶುಲ್ಕ ಪಾವತಿಸಲು ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ವಿಐಟಿ: ವಿಶ್ವನಾಥನ್‌ಗೆ ಗೌರವ ಡಾಕ್ಟರೇಟ್

ಚೆನ್ನೈ: ಪ್ರಸಿದ್ಧ ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಐಟಿ)ಯ ಸ್ಥಾಪಕ ಮತ್ತು ಕುಲಪತಿ ಜಿ. ವಿಶ್ವನಾಥನ್ ಅವರಿಗೆ ಅಮೆರಿಕದ ನ್ಯೂಯಾರ್ಕ್‌ನ ರೋಚೆಸ್ಟರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಆರ್‌ಐಟಿ) 'ಗೌರವ ಡಾಕ್ಟರೇಟ್ ಪದವಿ' ನೀಡಿ ಗೌರವಿಸಿದೆ.

ಭಾರತದಾದ್ಯಂತ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ನಿರ್ವಹಣೆ (ಎಸ್‌ಟಿಇಎಂ) ಶಿಕ್ಷಣದ ವಿಸ್ತರಣೆಯಲ್ಲಿ ವಿಶ್ವನಾಥನ್ ಅವರ ದೃಷ್ಟಿಕೋನ ಮತ್ತು ನಾಯಕತ್ವವನ್ನು ಗುರುತಿಸಿದ ರೋಚೆಸ್ಟರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮೇ 9ರಂದು ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ. ಇದರ ಜತೆಯಲ್ಲಿ ವಿಶ್ವನಾಥನ್ ಅವರು ಹಿಂದುಳಿದವರಿಗೆ ನೀಡುವ ಬೆಂಬಲ ಮತ್ತು ಕೊಡುಗೆಯನ್ನೂ ಗುರುತಿಸಿದೆ.


ಆರ್‌ಐಟಿ ಅಧ್ಯಕ್ಷ ಡಾ. ಡೇವಿಡ್ ಸಿ. ಮುನ್ಸನ್ ಮತ್ತು ಡಾ. ಪ್ರಭು ಡೇವಿಡ್ ವಿಐಟಿ ಕುಲಪತಿ ಡಾ. ಜಿ. ವಿಶ್ವನಾಥನ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿದರು.

2009ರಲ್ಲಿ ಅಮೆರಿಕದ ವೆಸ್ಟ್ ವರ್ಜೀನಿಯಾ ವಿಶ್ವವಿದ್ಯಾಲಯ ಮತ್ತು 2024ರಲ್ಲಿ ಅಮೆರಿಕದ ಬಿಂಗ್‌ಹ್ಯಾಮ್ಟನ್ ವಿಶ್ವವಿದ್ಯಾಲಯದ ಸ್ಟೇಟ್ ಯೂನಿವರ್ಸಿಟಿಯಿಂದ ಗೌರವ ಡಾಕ್ಟರೇಟ್ ಪದವಿ ಪಡೆದಿದ್ದ ವಿಶ್ವನಾಥನ್ ಅವರು ಈಗ ರೋಚೆಸ್ಟರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಗೌರವ ಡಾಕ್ಟರೇಟ್‌ಗೂ ಭಾಜನರಾಗಿದ್ದಾರೆ. ಅಮೆರಿಕದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ನೀಡಿರುವ ಮೂರೂ ಗೌರವ ಡಾಕ್ಟರೇಟ್‌ಗಳಿಗೆ ಪಾತ್ರರಾಗಿರುವ ಏಕೈಕ ವ್ಯಕ್ತಿ ಎಂಬ ಕೀರ್ತಿ ಇವರದ್ದಾಗಿದೆ. ಇದರೊಟ್ಟಿಗೆ 2025ರಲ್ಲಿ ಕೋಲ್ಕತದ ಸೇಂಟ್ ಕ್ಸೇವಿಯರ್ಸ್ ವಿವಿಯಿಂದ ಗೌರವ ಡಾಕ್ಟರೇಟ್ ಪದವಿ ಪಡೆದಿರುವುದು ವಿಶೇಷ.

ಆರ್‌ಐಟಿ ಅಧ್ಯಕ್ಷ ಡಾ. ಡೇವಿಡ್ ಸಿ. ಮುನ್ಸನ್ ಮತ್ತು ಆರ್‌ಐಟಿಯ ಶೈಕ್ಷಣಿಕ ವ್ಯವಹಾರಗಳ ಪ್ರೊವೋಸ್ಟ್ ಮತ್ತು ಹಿರಿಯ ಉಪಾಧ್ಯಕ್ಷ ಡಾ. ಪ್ರಭು ಡೇವಿಡ್ ಅವರು ವಿಶ್ವನಾಥನ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದರು. ವಿಶ್ವನಾಥನ್ ಅವರು ಆರ್‌ಐಟಿಗೆ ಕೃತಜ್ಞತೆ ಸಲ್ಲಿಸಿದರು.

515 ಸೈಬರ್ ಪ್ರಕರಣ: 20 ಮಂದಿ ಬಂಧನ


ಹೈದರಾಬಾದ್ (ಪಿಟಿಐ): ದೇಶದಾದ್ಯಂತ 515 ಸೈಬರ್ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಸುಮಾರು 20 ಆರೋಪಿಗಳನ್ನು ತೆಲಂಗಾಣ ಸೈಬರ್ ಭದ್ರತಾ ಬ್ಯೂರೊ (ಟಿಜಿಸಿಎಸ್‌ಬಿ) ಅಧಿಕಾರಿಗಳು ಗುಜರಾತ್‌ನ ಸೂರತ್‌ನಲ್ಲಿ ಸೋಮವಾರ ಬಂಧಿಸಿದ್ದಾರೆ.

ಈ ಪ್ರಕರಣಗಳ ಪೈಕಿ 60 ಪ್ರಕರಣಗಳು ತೆಲಂಗಾಣದಲ್ಲಿಯೇ ದಾಖಲಾಗಿವೆ. 'ಖಾಸಗಿ ಕಂಪನಿಗಳ ಉದ್ಯೋಗಿಗಳು, ಉದ್ಯಮಿಗಳು ಹಾಗೂ ಖಾಸಗಿ ಬ್ಯಾಂಕ್ ಸಿಬ್ಬಂದಿಯನ್ನು ಬಂಧಿಸಲಾಗಿದೆ' ಎಂದು ಟಿಜಿಸಿಎಸ್‌ಬಿ ನಿರ್ದೇಶಕ ಶಿಖಾ ಗೋಯೆಲ್ ಹೇಳಿದರು. ಅಕ್ರಮಗಳಿಂದ ಬಂದ ಹಣವನ್ನು ಇತರೆ ಖಾತೆಗಳಿಗೆ ವರ್ಗಾಯಿಸಿದ ಮತ್ತು ಚೆಕ್ ಮೂಲಕ ಹಣ ಪಡೆದುಕೊಂಡದ್ದನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ. ಜೊತೆಗೆ, ಅಕ್ರಮಗಳಿಂದ ಬಂದ ಹಣವನ್ನು ಈ ಆರೋಪಿಗಳು ವರ್ಗಾಯಿಸುತ್ತಿದ್ದ 14 ಖಾತೆಗಳನ್ನು ಸ್ಥಗಿತಗೊಳಿಸಿದ್ದಾರೆ ಮತ್ತು ಆರು ಏಜೆಂಟರನ್ನೂ ಬಂಧಿಸಿದ್ದಾರೆ.

ಆಫ್ರಿಕಾ ಇಂಡಿಯಾ ಎಕನಾಮಿಕ್ ಫೌಂಡೇಷನ್ ಜತೆ ಮಾತುಕತೆ

ನಮೀಬಿಯಾದಲ್ಲಿ ಜಿಟಿಟಿಸಿ ಸ್ಥಾಪನೆ

ಪ್ರಜಾವಾಣಿ ವಾರ್ತೆ


ಡಾ.ಶರಣಪ್ರಕಾಶ

ಬೆಂಗಳೂರು: ರಾಜ್ಯದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವನ್ನು (ಜಿಟಿಟಿಸಿ) ಆಫ್ರಿಕಾದ ನಮೀಬಿಯಾದಲ್ಲಿ ಸ್ಥಾಪಿಸುವ ಕುರಿತು ಆಫ್ರಿಕಾ ಇಂಡಿಯಾ ಎಕನಾಮಿಕ್ ಫೌಂಡೇಷನ್ (ಎಐಇಎಫ್) ಜತೆ ಮಾತುಕತೆ ನಡೆದಿದೆ.

ಈ ಕುರಿತು ಮಾಹಿತಿ ನೀಡಿರುವ ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ ಪಾಟೀಲ, 'ವೃತ್ತಿ ತರಬೇತಿಯಲ್ಲಿ ಭಾರತ–ಆಫ್ರಿಕಾ ಸಹಕಾರವನ್ನು ಬಲಪಡಿಸುವ ಮಹತ್ವದ ಹೆಜ್ಜೆಯಾಗಿ ಆಫ್ರಿಕಾ ಇಂಡಿಯಾ ಎಕನಾಮಿಕ್ ಫೌಂಡೇಷನ್ ಜಿಟಿಟಿಸಿಯನ್ನು ಪ್ರಮುಖ ಜ್ಞಾನ ಮತ್ತು ತಂತ್ರಜ್ಞಾನ ಪಾಲುದಾರ ಸಂಸ್ಥೆಯನ್ನಾಗಿ ಮಾಡಿಕೊಳ್ಳಲು ಮುಂದೆ ಬಂದಿದೆ' ಎಂದು ಹೇಳಿದರು.

ಮುಖ್ಯಾಂಶಗಳು

- ಭಾರತ– ಆಫ್ರಿಕಾ ಸಹಕಾರವನ್ನು ಬಲಪಡಿಸುವ ಮಹತ್ವದ ಹೆಜ್ಜೆ
- ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳಿಗೆ ಹೊಸ ಮಾರುಕಟ್ಟೆ ಸೃಷ್ಟಿ
- ಅಡಿಸ್ ಅಬಾಬಾದಲ್ಲಿ 2020ರಲ್ಲಿ ನಡೆದ ಶೃಂಗಸಭೆಯಲ್ಲಿಯೇ ಚರ್ಚೆ

ಆಫ್ರಿಕಾದ ಕೈಗಾರಿಕಾ ತರಬೇತಿ ಅಗತ್ಯಗಳಿಗೆ ಜಿಟಿಟಿಸಿಯು ಉತ್ತಮ ಮತ್ತು ದೃಢವಾದ ಮಾದರಿಯಾಗಿ ಕಾರ್ಯನಿರ್ವಹಿಸುವ ಬಗ್ಗೆ ಚರ್ಚೆ ನಡೆದಿದೆ. ಜಿಟಿಟಿಸಿ ಐದು ದಶಕಗಳಿಗೂ ಹೆಚ್ಚು ಕಾಲದ ಪರಂಪರೆಯನ್ನು ಹೊಂದಿರುವ ಸರ್ಕಾರಿ ಸ್ವಾಮ್ಯದ ಸಂಸ್ಥೆ. ರಾಜ್ಯದಾದ್ಯಂತ 20 ಕ್ಕೂ ಹೆಚ್ಚು ಕೇಂದ್ರಗಳನ್ನು ಹೊಂದಿದೆ. ಸಾವಿರಾರು ಜನರಿಗೆ ಉಪಕರಣಗಳು, ಸಿಎನ್‌ಸಿ ಕಾರ್ಯಾಚರಣೆಗಳು, ಮೆಕಾಟ್ರಾನಿಕ್ಸ್ ಮತ್ತು ರೊಬೊಟಿಕ್ಸ್‌ನಲ್ಲಿ ತರಬೇತಿ ನೀಡಲಾಗುತ್ತಿದೆ. ಈ ಎಲ್ಲ ಪರಿಣತಿಯನ್ನು ಆಫ್ರಿಕನ್ ಸಂದರ್ಭಗಳಿಗೆ ಸರಾಗವಾಗಿ ಅಳವಡಿಸಿಕೊಳ್ಳಬಹುದು ಎಂದು ಅವರು ಹೇಳಿದರು.

ಭಾರತ ಮತ್ತು ಆಫ್ರಿಕಾ ಖಂಡದ 54 ರಾಷ್ಟ್ರಗಳ ನಡುವೆ ಜ್ಞಾನ, ತಂತ್ರಜ್ಞಾನ, ವ್ಯಾಪಾರ ಮತ್ತು ಹೂಡಿಕೆಯ ಕಾರ್ಯತಂತ್ರದ ಏಕೀಕರಣವನ್ನು ಉತ್ತೇಜಿಸಲು ಎಐಇಎಫ್ ರಚಿಸಲಾಗಿದೆ. ಇದರ ಉಪಕ್ರಮಗಳು ಆಫ್ರಿಕನ್ ಒಕ್ಕೂಟದಿಂದ ಅನುಮೋದನೆ ಪಡೆದಿವೆ. ಅಡಿಸ್ ಅಬಾಬಾದಲ್ಲಿ 2020ರಲ್ಲಿ ನಡೆದ ಶೃಂಗಸಭೆಯಲ್ಲಿ ಈ ಕುರಿತು ಚರ್ಚಿಸಲಾಗಿತ್ತು ಎಂದು ತಿಳಿಸಿದರು.

ಜಿಟಿಟಿಸಿಯ ವ್ಯವಸ್ಥಾಪಕ ನಿರ್ದೇಶಕ ಡಾ.ವೈ.ಕೆ.ದಿನೇಶ್ ಕುಮಾರ್, ಈ ಪಾಲುದಾರಿಕೆಯ ಮೂಲಕ ಆಫ್ರಿಕಾದಾದ್ಯಂತ ಜಿಟಿಟಿಸಿಯ ಹಳೆಯ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಕರ್ನಾಟಕದ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳಿಗೆ ಹೊಸ ಮಾರುಕಟ್ಟೆ ತೆರೆದುಕೊಳ್ಳಲಿದೆ ಹಾಗೂ ಕರ್ನಾಟಕದ ಕೌಶಲ ಮಾದರಿಯು ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಡುತ್ತದೆ ಎಂದು ಹೇಳಿದರು.

ಎಐಇಎಫ್ ಜಂಟಿ ಕಾರ್ಯದರ್ಶಿ ಆರ್.ಕಾಂಚನವೇಲು, ನಮೀಬಿಯಾದಲ್ಲಿ ಯುರೇನಿಯಂ, ವಜ್ರಗಳು, ಚಿನ್ನ ಮತ್ತು ಅಪರೂಪದ ಖನಿಜಗಳು ಹೇರಳವಾಗಿವೆ. ಅಲ್ಲದೇ, ಇಂಧನ, ಕೃಷಿ ವ್ಯವಹಾರ, ಲಾಜಿಸ್ಟಿಕ್ಸ್ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳು ವೇಗವಾಗಿ ಅಭಿವೃದ್ಧಿ ಹೊಂದುತ್ತಿವೆ. ಈ ಕ್ಷೇತ್ರಗಳಲ್ಲಿ ಕೌಶಲ ಮತ್ತು ತರಬೇತಿ ಅಗತ್ಯವಿದೆ ಎಂದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ ಜಾಲತಾಣಗಳಲ್ಲಿ ಸುಳ್ಳಿನ 'ಯುದ್ಧ'

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,429 ▲	24,924 ▲	₹1 ಲಕ್ಷ (ಬೆಂಗಳೂರು) ▼	₹1.01 ಲಕ್ಷ (ಬೆಂಗಳೂರು) ▼	84.93

ದಾಳಿ ನಿಲ್ಲಿಸುವಂತೆ ಅಂಗಲಾಚಿದ ಪಾಕಿಸ್ತಾನ: ದೇಶವನ್ನು ಉದ್ದೇಶಿಸಿ ಮಾತನಾಡಿದ ಮೋದಿ

'ಅಣ್ವಸ್ತ್ರ ಬೆದರಿಕೆ ನಡೆಯದು'

ನವದೆಹಲಿ (ಪಿಟಿಐ): 'ಅಣ್ವಸ್ತ್ರ ಬೆದರಿಕೆ' ಭಾರತದ ಮುಂದೆ ನಡೆಯುವುದಿಲ್ಲ ಎಂದು ಪಾಕಿಸ್ತಾನಕ್ಕೆ ಸೋಮವಾರ ಎಚ್ಚರಿಕೆ ನೀಡಿದ ಪ್ರಧಾನಿ ನರೇಂದ್ರ ಮೋದಿ, 'ಭಯೋತ್ಪಾದನೆ –ವ್ಯಾಪಾರ ಮತ್ತು ಭಯೋತ್ಪಾದನೆ– ಶಾಂತಿ ಮಾತುಕತೆ ಜತೆಯಾಗಿ ಸಾಗದು' ಎಂಬ ಸಂದೇಶವನ್ನು ಜಗತ್ತಿಗೆ ಸಾರಿದರು.

'ಆಪರೇಷನ್ ಸಿಂಧೂರ' ಬಳಿಕ ಇದೇ ಮೊದಲ ಬಾರಿ ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಿದ ಪ್ರಧಾನಿ, 'ಆಪರೇಷನ್ ಸಿಂಧೂರ' ಭಯೋತ್ಪಾದನೆಯ ವಿರುದ್ಧ ಭಾರತದ ಹೊಸ ನೀತಿಯಾಗಿದೆ. ನಾವು ಪಾಕಿಸ್ತಾನ ವಿರುದ್ಧದ ಕಾರ್ಯಾಚರಣೆಯನ್ನು ಸದ್ಯ ತಡೆಹಿಡಿದಿದ್ದೇವೆಯಷ್ಟೆ. ಭವಿಷ್ಯವು ಆ ದೇಶದ ನಡವಳಿಕೆಯನ್ನು ಅವಲಂಬಿಸಿರಲಿದೆ' ಎಂದು ಸ್ಪಷ್ಟಪಡಿಸಿದರು.

'ಪಾಕಿಸ್ತಾನವು ಸೇನಾ ದಾಳಿಯನ್ನು ನಿಲ್ಲಿಸುವಂತೆ ಭಾರತವನ್ನು ಪರಿಪರಿಯಾಗಿ ಬೇಡಿಕೊಂಡಿತು. ತಮ್ಮ ದುಸ್ಸಾಹಸವನ್ನು ನಿಲ್ಲಿಸುವುದಾಗಿ ಭರವಸೆ ನೀಡಿದ ನಂತರವೇ ಭಾರತವು ಅವರ ಬೇಡಿಕೆಯನ್ನು ಪರಿಗಣಿಸಿತು' ಎಂದು ಕದನ ವಿರಾಮವನ್ನು ಉಲ್ಲೇಖಿಸಿ ಹೇಳಿದರು.

ಪಹಲ್ಗಾಮ್ ದಾಳಿಯನ್ನು ಭಯೋತ್ಪಾದನೆಯ ಅತ್ಯಂತ 'ಬರ್ಬರ ಮುಖ' ಎಂದ ಪ್ರಧಾನಿ, 26 ಮುಗ್ಧರ ಸಾವಿಗೆ ಕಾರಣವಾದ ಆ ಘಟನೆಯು ವೈಯಕ್ತಿಕವಾಗಿ ತುಂಬಾ ನೋವು ಉಂಟುಮಾಡಿದೆ ಎಂದರು. ಆದರೆ, ನಮ್ಮ ಮಹಿಳೆಯರ ಹಣೆಯಿಂದ 'ಸಿಂಧೂರ' ಅಳಿಸಿದರೆ ಉಂಟಾಗುವ ಪರಿಣಾಮ ಏನೆಂಬುದನ್ನು ಶತ್ರುಗಳ ಅರಿತುಕೊಂಡಿದ್ದಾರೆ ಎಂದರು.


ಸಿಂಧೂ ಜಲ ಒಪ್ಪಂದ ರದ್ದುಗೊಳಿಸಿರುವುದನ್ನು ಪ್ರಸ್ತಾಪಿಸಿ, 'ನೀರು ಮತ್ತು ರಕ್ತ ಜತೆಯಾಗಿ ಹರಿಯದು' ಎಂದರು. ತಮ್ಮ 22 ನಿಮಿಷಗಳ ಭಾಷಣದಲ್ಲಿ ಭದ್ರತಾ ಪಡೆಗಳಿಗೆ ಗೌರವ ಸಲ್ಲಿಸಿದ ಪ್ರಧಾನಿ, ಅವರ ಶೌರ್ಯವನ್ನು ದೇಶದ ತಾಯಂದಿರು, ಸಹೋದರಿಯರು ಮತ್ತು ಹೆಣ್ಣುಮಕ್ಕಳಿಗೆ ಅರ್ಪಿಸಿದರು.

'ನಮ್ಮ ಸೇನಾ ಶಕ್ತಿಯಿಂದ ಪಾಕಿಸ್ತಾನದ ಡ್ರೋನ್‌ಗಳನ್ನು ಹೇಗೆ ಹೊಡೆದುರುಳಿಸಲಾಯಿತು ಎಂಬುದನ್ನು ಇಡೀ ಜಗತ್ತು ನೋಡಿದೆ. ನಮ್ಮ ಸೇನೆಯು ಪಾಕಿಸ್ತಾನದ ಹೃದಯ ಭಾಗದ ಮೇಲೆ ದಾಳಿ ಮಾಡಿದೆ. ನಮ್ಮ ಕ್ಷಿಪಣಿಗಳು ಅವರ ವಾಯುನೆಲೆಗಳನ್ನು ಹಾನಿಗೊಳಿಸಿವೆ' ಎಂದು ಹೇಳಿದರು.

'ಇಷ್ಟು ವರ್ಷಗಳಿಂದ ನೀವು ಪೋಷಿಸುತ್ತಿರುವ ಭಯೋತ್ಪಾದಕರು ಪಾಕಿಸ್ತಾನವನ್ನೇ ನುಂಗುತ್ತಾರೆ. ನಿಮ್ಮ ದೇಶ ಉಳಿಯಬೇಕಾದರೆ ಭಯೋತ್ಪಾದನೆಯನ್ನು ಬೇರುಸಹಿತ ಕಿತ್ತೊಗೆಯಿರಿ' ಎಂದು ಪಾಕಿಸ್ತಾನದ ಆಡಳಿತಗಾರರಿಗೆ ಸಲಹೆ ನೀಡಿದರು.

ಮೋದಿ ಮಾತು....

- ಆಪರೇಷನ್ ಸಿಂಧೂರ ಕೇವಲ ಹೆಸರಲ್ಲ, ಅದರ ಮೂಲಕ ಭಾರತದ ಸಂಕಲ್ಪ ಕಾರ್ಯರೂಪಕ್ಕೆ ಬರುವುದನ್ನು ಇಡೀ ಜಗತ್ತು ನೋಡಿದೆ. ಭಾರತದ ದಾಳಿಯಲ್ಲಿ 100ಕ್ಕೂ ಹೆಚ್ಚು ಭಯೋತ್ಪಾದಕರು ಹತರಾದರು
- ನಾವು ಇನ್ನು ಮುಂದೆ ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸುವುದಾದರೆ, ಅದು ಭಯೋತ್ಪಾದನೆ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಬಗ್ಗೆ ಮಾತ್ರ
- ಇದು ಯುದ್ಧದ ಯುಗವಲ್ಲ. ಹಾಗೆಂದ ಮಾತ್ರಕ್ಕೆ, ಭಯೋತ್ಪಾದನೆಯ ಯುಗವೂ ಅಲ್ಲ





ಭಾರತ–ಪಾಕ್ ಸಂಘರ್ಷದಲ್ಲಿ ಅಮೆರಿಕ ಮಧ್ಯಪ್ರವೇಶಿಸಿದ್ದರೂ ಪ್ರಧಾನಿ ತಮ್ಮ ಭಾಷಣದಲ್ಲಿ ಟ್ರಂಪ್ ಹೆಸರು ಏಕೆ ಉಲ್ಲೇಖಿಸಲಿಲ್ಲ?
ಕಪಿಲ್ ಸಿಬಲ್, ರಾಜ್ಯಸಭಾ ಸದಸ್ಯ



ಪ್ರಧಾನಿಯವರ ಭಾಷಣ ಮೋಡಿ ಮಾಡುವಂತಿತ್ತು. ಆದರೆ ಜನರನ್ನು ಕಾಡುತ್ತಿರುವ ಪ್ರಶ್ನೆಗಳಿಗೆ ಅವರಲ್ಲಿ ಉತ್ತರ ಇರಲಿಲ್ಲ
ಪೃಥ್ವಿರಾಜ್ ಚವಾಣ್, ಕಾಂಗ್ರೆಸ್ ನಾಯಕ

ಮೊದಲ ಸುತ್ತಿನ ಡಿಜಿಎಂಒ ಮಾತುಕತೆ

ಭಾರತ ಹಾಗೂ ಪಾಕಿಸ್ತಾನದ ಕದನ ವಿರಾಮದ ಕುರಿತು ಇದೇ 10ರಂದು ಮಾಡಿಕೊಂಡ ಒಪ್ಪಂದದ ವಿವಿಧ ಅಂಶಗಳ ಕುರಿತು ಉಭಯ ದೇಶಗಳ ಸೇನಾ ಕಾರ್ಯಾಚರಣೆಗಳ ಮಹಾನಿರ್ದೇಶಕರು (ಡಿಜಿಎಂಒ) ಸೋಮವಾರ ಚರ್ಚಿಸಿದರು.

ಪಾಕಿಸ್ತಾನದ ಡಿಜಿಎಂಒ ಮೇಜರ್ ಜನರಲ್ ಕಾಶಿಫ್ ಅಬ್ದುಲ್ಲಾ ಮತ್ತು ಭಾರತದ ಲೆಫ್ಟಿನೆಂಟ್ ಜನರಲ್ ರಾಜೀವ್ ಘಯಿ ಅವರು ಹಾಟ್‌ಲೈನ್ ಮೂಲಕ ಮೊದಲ ಸುತ್ತಿನ ಮಾತುಕತೆ ನಡೆಸಿದ್ದಾರೆ.

'ಎರಡೂ ಕಡೆಯವರು ಗಡಿಯಲ್ಲಿ ಒಂದೇ ಒಂದು ಗುಂಡು ಹಾರಿಸಬಾರದು ಅಥವಾ ಪರಸ್ಪರ ಆಕ್ರಮಣಕಾರಿ ಮತ್ತು ಪ್ರತಿಕೂಲ ಕ್ರಮ ಕೈಗೊಳ್ಳಬಾರದು ಎಂಬ ಬದ್ಧತೆ ಮುಂದುವರಿಸಬೇಕು. ಗಡಿಗಳಿಂದ ಸೈನ್ಯ ಕಡಿಮೆ ಮಾಡುವುದನ್ನು ಖಚಿತ ಪಡಿಸಿಕೊಳ್ಳಲು ಎರಡೂ ಕಡೆಯವರು ತಕ್ಷಣ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಚರ್ಚೆ ನಡೆಯಿತು' ಎಂದು ಮೂಲಗಳು ತಿಳಿಸಿವೆ.

'ಮಹಾನಿರ್ದೇಶಕರ ಮಾತುಕತೆ ಮುಕ್ತಾಯಗೊಂಡಿದೆ. ಹೆಚ್ಚಿನ ವಿವರಗಳನ್ನು ಸೂಕ್ತ ಸಮಯದಲ್ಲಿ ನೀಡಲಾಗುವುದು' ಎಂದು ಭಾರತೀಯ ಸೇನೆ ತಿಳಿಸಿದೆ.

ಯಾವುದಕ್ಕೂ ಸಿದ್ಧ: ಸೇನೆ

ಭಾರತದ ಬಹು-ಪದರದ ವಾಯು ರಕ್ಷಣಾ ವ್ಯವಸ್ಥೆ ಭೇದಿಸಲು ಪಾಕಿಸ್ತಾನಕ್ಕೆ ಯಾವುದೇ ಅವಕಾಶ ಇಲ್ಲ. ಅಗತ್ಯ ಬಿದ್ದಲ್ಲಿ ಪ್ರತಿದಾಳಿಗೆ ಸಿದ್ಧ ಎಂದು ಭಾರತೀಯ ಸೇನೆಯ ಅಧಿಕಾರಿಗಳು ಸೋಮವಾರ ಹೇಳಿದರು.

'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಕುರಿತು ಸೋಮವಾರ ಸುದ್ದಿಗೋಷ್ಠಿ ನಡೆಸಿದ ಮಿಲಿಟರಿ ಕಾರ್ಯಾಚರಣೆಗಳ ಮಹಾ ನಿರ್ದೇಶಕ (ಡಿಜಿಎಂಒ) ಲೆಫ್ಟಿನೆಂಟ್ ಜನರಲ್ ರಾಜೀವ್ ಘಯಿ, ಏರ್‌ಮಾರ್ಷಲ್ ಎ.ಕೆ. ಭಾರ್ತಿ ಹಾಗೂ ವೈಸ್ ಆಡ್ಮಿರಲ್ ಎ.ಎನ್. ಪ್ರಮೋದ್ ಅವರು ಈ ಮಾತನ್ನು ಹೇಳಿದರು. 'ಉಗ್ರರ ಪರ ಪಾಕಿಸ್ತಾನ ನಿಂತಿದ್ದೇ ಸಂಘರ್ಷಕ್ಕೆ ಕಾರಣ. ತಾನು ಅನುಭವಿಸಿದ ನಷ್ಟಕ್ಕೆ ಆ ದೇಶವೇ ಹೊಣೆ' ಎಂದು ಸ್ಪಷ್ಟಪಡಿಸಿದರು.

ಪಾಕಿಸ್ತಾನದ ಯಾವೆಲ್ಲ ಪ್ರದೇಶಗಳ ಮೇಲೆ ದಾಳಿ ನಡೆಸಲಾಗಿದೆ ಎಂಬ ಪಟ್ಟಿಯನ್ನು ಅವರು ಹಂಚಿಕೊಂಡರು. ಆ ಪಟ್ಟಿಯಲ್ಲಿ ಕರಾಚಿಯೂ ಸೇರಿದೆ. ಭಾರತದ ಮೇಲೆ ದಾಳಿ ಮಾಡುವಾಗ ಪಾಕಿಸ್ತಾನವು ಚೀನಾ ನಿರ್ಮಿತ ಕ್ಷಿಪಣಿಗಳು, ಟರ್ಕಿ ಡ್ರೋನ್‌ಗಳನ್ನು ಹೇಗೆ ಬಳಸಿದೆ ಎಂಬುದನ್ನು ತೋರಿಸುವ ಪುರಾವೆಗಳನ್ನು ಪ್ರಸ್ತುತಪಡಿಸಿದರು.

ಕಿರಾನಾ ಬೆಟ್ಟದ ಮೇಲೆ ದಾಳಿ ನಡೆಸಿಲ್ಲ: ಪಾಕಿಸ್ತಾನದ ಕಿರಾನಾ ಬೆಟ್ಟದ ಮೇಲೆ ವಾಯುಪಡೆಯು ದಾಳಿ ನಡೆಸಿದೆ ಎಂಬ ವದಂತಿಗಳನ್ನು ವಾಯುಪಡೆ ಕಾರ್ಯಾಚರಣೆಗಳ ಮುಖ್ಯಸ್ಥ ಏರ್ ಮಾರ್ಷಲ್ ಎ.ಕೆ. ಭಾರ್ತಿ ತಳ್ಳಿಹಾಕಿದ್ದಾರೆ.

ಸಾಂಬಾ ಗಡಿಯಲ್ಲಿ ಡ್ರೋನ್ ದಾಳಿ

ಜಮ್ಮು (ಪಿಟಿಐ): ಸಾಂಬಾ ಜಿಲ್ಲೆಯ ಗಡಿ ಪ್ರದೇಶದಲ್ಲಿ ಸೋಮವಾರ ಡ್ರೋನ್‌ಗಳು ಕಾಣಿಸಿಕೊಂಡಿದ್ದು, ಭದ್ರತಾ ಪಡೆಗಳು ಅವುಗಳನ್ನು ನಿಷ್ಕ್ರಿಯಗೊಳಿಸಿವೆ. ಪಂಜಾಬ್‌ನ ಜಲಂಧರ್‌ನಲ್ಲಿ ಬೇಹುಗಾರಿಕಾ ಡ್ರೋನ್‌ವೊಂದನ್ನು ಹೊಡೆದುರುಳಿಸಲಾಗಿದೆ ಎಂದು ಸೇನಾ ಮೂಲಗಳು ತಿಳಿಸಿವೆ.

ಪ್ರಧಾನಿ ಮೋದಿ ಅವರು ಭಾಷಣ ಮಾಡಿದ ಸ್ವಲ್ಪ ಸಮಯದ ನಂತರ ಡ್ರೋನ್ ದಾಳಿ ನಡೆದಿದೆ ಎಂದೂ ಹೇಳಿವೆ. ಮುನ್ನೆಚ್ಚರಿಕೆ ಕ್ರಮವಾಗಿ ಸಾಂಬಾ, ಕಠುವಾ, ರಾಜೌರಿ ಹಾಗೂ ಜಮ್ಮುವಿನಲ್ಲಿ ಬ್ಲ್ಯಾಕ್‌ಔಟ್ ಮಾಡಲಾಯಿತು. ಮಾತಾ ವೈಷ್ಣೋದೇವಿ ಗುಹಾಂತರ ದೇವಾಲಯದ ಬಳಿಯೂ ವಿದ್ಯುತ್ ದೀಪಗಳನ್ನು ಆರಿಸಲಾಯಿತು ಎಂದು ಮೂಲಗಳು ತಿಳಿಸಿವೆ.



ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

ಟೆಸ್ಟ್ ಕ್ರಿಕೆಟ್ ಸಾಧನೆ

123 ಪಂದ್ಯ	210 ಇನಿಂಗ್ಸ್
9,230 ರನ್	254 ಶ್ರೇಷ್ಠ
30 ಶತಕ, 31 ಅರ್ಧಶತಕ	7 ದ್ವಿಶತಕ

ಟೆಸ್ಟ್‌ಗೆ ವಿರಾಟ್ ವಿದಾಯ

ನವದೆಹಲಿ (ಪಿಟಿಐ): ಕ್ರಿಕೆಟ್‌ನ ಮೆಗಾಸ್ಟಾರ್ ಆಗಿರುವ ವಿರಾಟ್ ಕೊಹ್ಲಿ ಅವರು ಟೆಸ್ಟ್ ಕ್ರಿಕೆಟ್ ಮಾದರಿಗೆ ಸೋಮವಾರ ವಿದಾಯ ಘೋಷಿಸಿದರು.

ಇತ್ತೀಚೆಗಷ್ಟೇ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಮುಂದಿನ ತಿಂಗಳು ಭಾರತ ತಂಡವು ಇಂಗ್ಲೆಂಡ್‌ಗೆ ಪ್ರವಾಸ ಮಾಡಲಿದ್ದು, ಅಲ್ಲಿ ಟೆಸ್ಟ್ ಸರಣಿಯಲ್ಲಿ ಆಡಲಿದೆ. ಆಯ್ಕೆಗಾರರು ಶೀಘ್ರದಲ್ಲಿಯೇ ತಂಡ ಪ್ರಕಟಿಸಲು ಸಿದ್ಧತೆ ನಡೆಸಿದ್ದಾರೆ. ಇದೇ ಹೊತ್ತಿನಲ್ಲಿ 36 ವರ್ಷದ ವಿರಾಟ್ ಅವರು ನಿವೃತ್ತಿ ಪಡೆದಿದ್ದಾರೆ. ಆದರೆ ಏಕದಿನ ಕ್ರಿಕೆಟ್‌ನಲ್ಲಿ ಮುಂದುವರಿಯಲಿದ್ದಾರೆ. 2024ರಲ್ಲಿ ಅವರು ಟಿ20 ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದರು. ವಿರಾಟ್ ಅವರು 2011ರಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. 2014 ರಿಂದ 2022ರವರೆಗೆ ಭಾರತ ತಂಡದ ನಾಯಕತ್ವ ವಹಿಸಿದ್ದರು. ಆಸ್ಟ್ರೇಲಿಯಾದಲ್ಲಿ ಬಾರ್ಡರ್–ಗಾವಸ್ಕರ್ ಟ್ರೋಫಿ ಜಯಿಸಿದ ಭಾರತ ತಂಡದ ಮೊದಲ ನಾಯಕನೆಂಬ ಹೆಗ್ಗಳಿಕೆ ಅವರದ್ದಾಗಿದೆ.

ಟೆಸ್ಟ್ ಕ್ರಿಕೆಟ್‌ನ ಯುಗವೊಂದು ಅಂತ್ಯಗೊಂಡಿದೆ. ಆದರೆ ಪರಂಪರೆ ಸದಾ ಮುಂದುವರಿಯಲಿದೆ! ಭಾರತದ ಮಾಜಿ ನಾಯಕ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದಾರೆ. ಭಾರತ ತಂಡಕ್ಕೆ ನಿಮ್ಮ ಕೊಡುಗೆ ಚಿರಸ್ಥಾಯಿಯಾದುದು
ಬಿಸಿಸಿಐ, 'ಎಕ್ಸ್'ನಲ್ಲಿ ಪೋಸ್ಟ್

770
ಟೆಸ್ಟ್ ಮಾದರಿಯಲ್ಲಿ ಹತ್ತು ಸಾವಿರ ರನ್ ಪೂರೈಸಲು ಕೊಹ್ಲಿಗೆ ಬೇಕಿದ್ದ ರನ್‌ಗಳು

4
ಟೆಸ್ಟ್ ಕ್ರಿಕೆಟ್‌ನಲ್ಲಿ ಸತತ ನಾಲ್ಕು ಸರಣಿಗಳಿಂದ ಗಳಿಸಿದ ದ್ವಿಶತಕಗಳು

5,864 ರನ್
ವಿರಾಟ್ ಅವರು ನಾಯಕರಾಗಿ ಗಳಿಸಿದ ರನ್‌ಗಳು. ಅತಿ ಹೆಚ್ಚು ರನ್ ಸೇರಿಸಿದ ಭಾರತದ ನಾಯಕ



ಸಿಂಹದಂಥ ಕೆಚ್ಚು ಹೊಂದಿರುವ ವ್ಯಕ್ತಿ! ಮಿಸ್ ಯೂ ಚೀಕ್ಸ್
ಗೌತಮ್ ಗಂಭೀರ್, ಭಾರತದ ಹೆಡ್ ಕೋಚ್ (ಎಕ್ಸ್‌ನಲ್ಲಿ)



ನಿಮ್ಮ ನಾಯಕತ್ವದಲ್ಲೇ ನನ್ನ ಟೆಸ್ಟ್ ಪದಾರ್ಪಣೆ ಆಯಿತು. ದೇಶಕ್ಕಾಗಿ ಜೊತೆಯಾಗಿಯೇ ಆಡಿ, ಹೊಸ ಎತ್ತರಕ್ಕೇರಿದೆವು. ಆಟದ ಬಗೆಗಿನ ನಿಮ್ಮ ಉತ್ಕಟ ಪ್ರೇಮ ಮತ್ತು ದಣಿವರಿಯದ ಗುಣ ಇನ್ನು ನಮಗೆ ಟೆಸ್ಟ್‌ನಲ್ಲಿ ಸಿಗದು. ನಿಮ್ಮ ಶ್ರೇಷ್ಠತೆಗೆ ಸಾಟಿ ಇಲ್ಲ. ಟೆಸ್ಟ್‌ನಲ್ಲಿನ ಅಸಾಧಾರಣ ಪಯಣಕ್ಕೆ ಅಭಿನಂದನೆಗಳು
ಜಸ್‌ಪ್ರೀತ್ ಬೂಮ್ರಾ, ಭಾರತ ತಂಡದ ವೇಗಿ

ಟೆಸ್ಟ್ ಕ್ರಿಕೆಟ್‌ನಲ್ಲಿ ಮೊದಲ ಬಾರಿಗೆ ಬ್ಯಾಗಿ ಬ್ಲ್ಯೂ ಧರಿಸಿ 14 ವರ್ಷಗಳು ಸಂದಿವೆ. ಪ್ರಾಮಾಣಿಕವಾಗಿ ಹೇಳುತ್ತೇನೆ, ಈ ಮಾದರಿಯಲ್ಲಿ ನಾನು ಇಷ್ಟು ದೂರ ಪ್ರಯಾಣಿಸುತ್ತೇನೆಂದು ಅಂದುಕೊಂಡಿರಲಿಲ್ಲ. ಇದು ನನ್ನನ್ನು ಪರೀಕ್ಷೆಗೊಡ್ಡಿತು, ರೂಪಿಸಿತು ಮತ್ತು ಜೀವನಪಾಠವನ್ನೂ ಕಲಿಸಿತು. ಬಿಳಿಯ ದಿರಿಸಿನಲ್ಲಿ ಆಡುವಾಗಿನ ನೆನಪುಗಳು ಮನದಾಳದಲ್ಲಿರಲಿವೆ. ಟೆಸ್ಟ್‌ಗೆ ವಿದಾಯ ಹೇಳುವುದು ಸುಲಭವಾಗಿರಲಿಲ್ಲ. ಆದರೆ ಇದು ಸರಿಯಾದ ನಿರ್ಣಯ. ನಾನೆಲ್ಲವನ್ನೂ ಇದಕ್ಕೆ ಕೊಟ್ಟಿದ್ದೇನೆ. ಈ ಮಾದರಿ ಕೂಡ ನನಗೆ ಸರ್ವಸ್ವವನ್ನೂ ಮರಳಿ ನೀಡಿದೆ. ಈ ಆಟಕ್ಕೆ, ನನ್ನೊಂದಿಗೆ ಆಡಿದವರಿಗೆ ಮತ್ತು ನನ್ನ ಪಯಣದುದ್ದಕ್ಕೂ ಜೊತೆಯಿದ್ದ ಪ್ರತಿಯೊಬ್ಬರಿಗೂ ಕೃತಜ್ಞನಾಗಿರುವೆ. ನನ್ನ ಟೆಸ್ಟ್ ಪಯಣವನ್ನು ಸದಾ ಸಂತಸದ ನಗುವಿನೊಂದಿಗೆ ನೆನಪಿಸಿಕೊಳ್ಳುವೆ
ವಿರಾಟ್ ಕೊಹ್ಲಿ, ಇನ್‌ಸ್ಟಾಗ್ರಾಮ್ ಸಂದೇಶ

ಮೂಲ: ಬಿಸಿಸಿಐ, ಸ್ಟಾರ್ ಸ್ಪೋರ್ಟ್ಸ್

ಇನ್ನಷ್ಟು ಸುದ್ದಿಗಳು 10

17ರಿಂದ ಮತ್ತೆ ಐಪಿಎಲ್

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪರಿಷ್ಕೃತ ಪಟ್ಟಿ ಸೋಮವಾರ ಬಿಡುಗಡೆಯಾಗಿದೆ. ಇದೇ 17ರಿಂದ ಮರುಆರಂಭವಾಗಲಿದೆ. ಜೂನ್ 3ರಂದು ಫೈನಲ್ ಪಂದ್ಯ ನಡೆಯಲಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಮೊಬೈಲ್‌ನಲ್ಲೇ ಸಿಇಟಿ ಸೀಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಇಟಿ ಮೂಲಕ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಶಿಕ್ಷಣ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆಯನ್ನು ಅತ್ಯಂತ ಸುಲಭ ಹಾಗೂ ತ್ವರಿತಗೊಳಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದೆ.

ವಿದ್ಯಾರ್ಥಿಗಳು ತಾವು ಪಡೆದ ರ‍್ಯಾಂಕಿಂಗ್‌ಗೆ ಅನುಗುಣವಾಗಿ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳುವ ಮೊದಲು ಕೆಇಎ ಕಾಲೇಜು ಪೋರ್ಟಲ್‌ಗೆ ಭೇಟಿ ನೀಡಿದರೆ ಆಯಾ ಕಾಲೇಜುಗಳ ಚಿತ್ರಸಹಿತ ಸಂಪೂರ್ಣ ಮಾಹಿತಿ ಸಿಗಲಿದೆ. 'ಕೆಇಎ ಮೊಬೈಲ್ ಆ್ಯಪ್' ಅಪ್ಲಿಕೇಷನ್ ಡೌನ್‌ಲೋಡ್ ಮಾಡಿಕೊಂಡರೆ ಸಿಇಟಿ ಅರ್ಜಿ ಸಲ್ಲಿಕೆಯಿಂದ ಕಾಲೇಜುಗಳ ಆಯ್ಕೆ, ಪ್ರವೇಶದವರೆಗೂ ಅಂಗೈನಲ್ಲಿರುವ ಮೊಬೈಲ್‌ನಲ್ಲೇ ನಿರ್ವಹಣೆ ಮಾಡಬಹುದು.

8ನೇ ಪುಟ ನೋಡಿ

ಕೌಶಲ ಶುಲ್ಕ ಪರಿಷ್ಕರಣೆ

ಎಂಜಿನಿಯರಿಂಗ್ ಕಾಲೇಜುಗಳು ನೀಡುವ ವಿವಿಧ ರೀತಿಯ ಕೌಶಲ ಆಧಾರಿತ ತರಬೇತಿಗೆ ನಿಗದಿತ ಶುಲ್ಕಕ್ಕಿಂತ ಗರಿಷ್ಠ ₹20 ಸಾವಿರದವರೆಗೆ ಹೆಚ್ಚುವರಿ ಶುಲ್ಕ ಪಡೆಯಲು ಹಿಂದೆ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ ಅವಕಾಶ ಕಲ್ಪಿಸಿದೆ. ಈ ವರ್ಷವೂ ಅವಕಾಶ ನೀಡಲಾಗಿದೆ ಎಂದು ಸಚಿವ ಸುಧಾಕರ್ ಹೇಳಿದರು.

ಪ್ರತಿ ಕಾಲೇಜಿನಲ್ಲೂ ತಪಾಸಣೆ ನಡೆಸಿದ ನಂತರ ಮುಂದಿನ ವರ್ಷ ಕೌಶಲ ತರಬೇತಿ ಶುಲ್ಕ ಪರಿಷ್ಕರಣೆ ಮಾಡಲಾಗುವುದು ಎಂದರು.

ಕ್ಯಾಂಪಸ್ ಆಯ್ಕೆಗೂ ಕೆಲ ಕಾಲೇಜುಗಳು ಹೆಚ್ಚುವರಿ ಶುಲ್ಕ ಪಡೆಯುತ್ತಿರುವ ದೂರುಗಳು ಬಂದಿವೆ. ಅಂತಹ ಕಾಲೇಜುಗಳಿಗೆ ನೋಟಿಸ್ ನೀಡಿ, ಕ್ರಮ ಕೈಗೊಳ್ಳಲಾಗುವುದು ಎಂದರು.

ಎಸ್‌ಇಪಿ ಜಾರಿಗೆ ಅಂತಿಮ ಸಿದ್ಧತೆ

ರಾಜ್ಯ ಶಿಕ್ಷಣ ನೀತಿ ವರದಿ ಸಿದ್ಧವಾಗಿದ್ದು, 2025–26ನೇ ಸಾಲಿನಿಂದಲೇ ಜಾರಿಗೊಳಿಸಲು ಚರ್ಚೆ ನಡೆದಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ಆಯೋಗ ಅಂತಿಮ ವರದಿಯನ್ನು ಈಗಾಗಲೇ ಸಿದ್ಧಪಡಿಸಿದೆ. ಕನ್ನಡ ಅನುವಾದವೂ ಮುಕ್ತಾಯದ ಹಂತಕ್ಕೆ ಬಂದಿದೆ. ಮೇ 25ರಂದು ನಡೆಯುವ ಸಭೆಯಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಕಠಿಣ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ

ವ್ಹೀಲಿ ತಡೆಗಟ್ಟಿ: ಹೈಕೋರ್ಟ್ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪಾಯಕಾರಿ ವ್ಹೀಲಿಯಂತಹ (ಮೋಟಾರ್ ಬೈಕ್‌ನ ಮುಂದಿನ ಗಾಲಿಯನ್ನು ಎತ್ತಿ ಓಡಿಸುವುದು) ದುಸ್ಸಾಹಸ ಚಟುವಟಿಕೆಗಳನ್ನು ತಡೆಗಟ್ಟಲು ರಾಜ್ಯ ಸರ್ಕಾರ ಕಠಿಣ ಕ್ರಮಕ್ಕೆ ಮುಂದಾಗಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದೆ.

ವ್ಹೀಲಿ ನಡೆಸು ವುದನ್ನು ಮಾಮೂಲಿ ಪ್ರವೃತ್ತಿಯನ್ನಾಗಿಸಿಕೊಂಡು ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಆರೋಪಿಯಾದ ಕೊಪ್ಪಳ ಜಿಲ್ಲೆ ಗಂಗಾವತಿಯ ಅಬ್ರಾಜ್ ಖಾನ್ ಅಲಿಯಾಸ್ ಅಬ್ರಾಜ್ (29) ಸಲ್ಲಿಸಿದ್ದ ಜಾಮೀನು ಕೋರಿಕೆಯನ್ನು ತಿರಸ್ಕರಿಸಿರುವ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಈ ಕುರಿತಂತೆ ಆದೇಶಿಸಿದೆ.

'ವಿವೇಚನಾರಹಿತ ವಾಹನ ಚಾಲನೆಯನ್ನು ನಿಯಂತ್ರಿಸಲು ಹಾಲಿ ಇರುವ ಕಾನೂನಿನ ನಿಬಂಧನೆಗಳು ಸಾಕಾಗುವುದಿಲ್ಲ ಎಂಬುದನ್ನು ಶಾಸಕಾಂಗ ಮನಗಾಣಬೇಕು. ಈ ದಿಸೆಯಲ್ಲಿ, ಸರ್ಕಾರ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023 (ಬಿಎನ್‌ಎಸ್‌ಎಸ್) ಮತ್ತು ಭಾರತೀಯ ಮೋಟಾರು ವಾಹನ ಕಾಯ್ದೆ–1988ಕ್ಕೆ ಕಠಿಣ ನಿಬಂಧನೆಗಳನ್ನು ಅಡಕಗೊಳಿಸುವ ಮೂಲಕ ಅಗತ್ಯ ತಿದ್ದುಪಡಿ ತರಬೇಕು' ಎಂದು ನಿರ್ದೇಶಿಸಿದೆ.

'ಅರ್ಜಿದಾರನ ವಿರುದ್ಧದ ಆರೋಪಗಳಿಗೆ ಜಾಮೀನು ನೀಡಬಹುದಾಗಿದೆ ಎಂಬುದೇನೊ ನಿಜ. ಆದರೆ, ಈತನಿಗೆ ವ್ಹೀಲಿ ಮಾಡುವುದು ಹವ್ಯಾಸವಾಗಿದೆ ಎಂಬುದು ಪ್ರಾಸಿಕ್ಯೂಷನ್ ವಾದದಿಂದ ದೃಢಪಟ್ಟಿದೆ. ಹಾಗಾಗಿ, ಆರೋಪಿ ವಿರುದ್ಧ ಸಕ್ಷಮ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ ಎಂದ ಮಾತ್ರಕ್ಕೆ ಜಾಮೀನು ನೀಡಬೇಕು ಎಂದೇನಿಲ್ಲ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: 'ಗಂಗಾವತಿಯ ಹೇಮಗುಡ್ಡ ದುರ್ಗಮ್ಮ ದೇವಸ್ಥಾನದ ಬಳಿ 2024ರ ಅಕ್ಟೋಬರ್ 9ರಂದು ಸಂಜೆ 4.30ರ ಸಮಯದಲ್ಲಿ ದಸರಾ ಉತ್ಸವ ನಡೆಯುತ್ತಿದ್ದಾಗ, ಮೂವರು ಯುವಕರು ಯಮಹಾ ಆರ್‌ಎಕ್ಸ್–135 ಬೈಕಿನಲ್ಲಿ ವ್ಹೀಲಿ ಮಾಡುತ್ತಿದ್ದರು. ಪೊಲೀಸರು ಇವರನ್ನು ಹಿಡಿಯಲು ಮುಂದಾದಾಗ ವ್ಹೀಲಿ ಮಾಡುತ್ತಿದ್ದವರು ಆಯತಪ್ಪಿ ನೆಲಕ್ಕೆ ಬಿದ್ದಿದ್ದರು. ಆಗ ಪೊಲೀಸರು ನೆರವಿಗೆ ಧಾವಿಸಿದ್ದರು. ಆದರೆ, ನೆಲಕ್ಕೆ ಬಿದ್ದವರು ಪೊಲೀಸರನ್ನು ಅವಾಚ್ಯ ಪದಗಳಿಂದ ನಿಂದಿಸಿ, ಅವರ ಮೇಲೆಯೇ ಹಲ್ಲೆ ನಡೆಸಿ, ಅವರ ಮೊಬೈಲ್ ಫೋನ್‌ಗಳನ್ನೂ ಕಸಿದುಕೊಂಡು ತುಂಗಭದ್ರಾ ನಾಲೆಗೆ ಎಸೆದಿದ್ದರು' ಎಂದು ಆರೋಪಿಸಿ ದೂರು ದಾಖಲಿಸಲಾಗಿತ್ತು.

ವಿಚಾರಣಾ ನ್ಯಾಯಾಲಯಗಳು ಆರೋಪಿಯ ಜಾಮೀನು ಕೋರಿಕೆಯನ್ನು ತಿರಸ್ಕರಿಸಿದ್ದವು. ಅಬ್ರಾಜ್ ಪರ ಹೈಕೋರ್ಟ್ ವಕೀಲ ಸಾದಿಕ್ ಎನ್. ಗೂಡ್‌ವಾಲಾ ಹಾಗೂ ಪ್ರಾಸಿಕ್ಯೂಷನ್ ಪರ ಗಿರಿಜಾ ಎಸ್.ಹಿರೇಮಠ ವಾದ ಮಂಡಿಸಿದ್ದರು.


ಮುಖ್ಯಾಂಶಗಳು

- ಆರೋಪಿ ಜಾಮೀನು ಕೋರಿಕೆ ತಿರಸ್ಕೃತ
- ಕಾಯ್ದೆಗಳ ತಿದ್ದುಪಡಿಗೆ ನ್ಯಾಯಪೀಠದ ನಿರ್ದೇಶನ

ಸಾರ್ವಜನಿಕ ಸುವ್ಯವಸ್ಥೆ ಮತ್ತು ಜನರ ರಕ್ಷಣೆ, ಭದ್ರತೆಯ ಮೇಲೆ ಪರಿಣಾಮ ಉಂಟುಮಾಡುವ ಕೆಲವು ನಿರ್ಲಜ್ಜ ಶಕ್ತಿಗಳ ಹುಟ್ಟಡಗಿಸಬೇಕಿದೆ
ವಿ.ಶ್ರೀಶಾನಂದ, ನ್ಯಾಯಮೂರ್ತಿ

ಗ್ರಾಮಗಳಿಗೂ ಹಬ್ಬಿರುವ ದುಸ್ಸಾಹಸ...

'ಈ ಮೊದಲಿಗೆ ವ್ಹೀಲಿ ಎಂಬುದು ನಗರ ಪ್ರದೇಶಗಳಿಗೆ ಸೀಮಿತ ಎಂಬಂತಿತ್ತು. ಆದರೆ, ಈ ಅಪಾಯಕಾರಿ ಚಟುವಟಿಕೆ ಈಗ ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಿದೆ. ಯುವ ಸಮುದಾಯ ವ್ಹೀಲಿ ಮಾಡುವುದನ್ನು ಎದೆಗಾರಿಕೆ ಎಂದು ನಂಬಿದಂತಿದೆ. ಇಂತಹ ಚಟುವಟಿಕೆಯಿಂದ ಆಗಬಹುದಾದ ಗಂಭೀರ ಹಾನಿಯ ಬಗ್ಗೆ ಅವರಿಗೆ ಅರಿವೇ ಇಲ್ಲ. ವ್ಹೀಲಿ ಚಾಲನೆಯು ಚಾಲಕ, ಹಿಂಬದಿಯ ಸವಾರರಿಗೆ ಮಾತ್ರವಲ್ಲದೇ ಸಾಮಾನ್ಯ ಜನರಿಗೂ ಗಂಭೀರ ಬೆದರಿಕೆ ಒಡ್ಡುವ ದುಸ್ಸಾಹಸವಾಗಿದೆ. ಈ ಕೃತ್ಯದಲ್ಲಿ ತೊಡಗುವ ಕೆಲವು ವಿವೇಚನಾರಹಿತರು ನಿಸ್ಸಂಶಯವಾಗಿ ಸಮಾಜದ ಸ್ವಾಸ್ಥ್ಯ ಮತ್ತು ನೆಮ್ಮದಿಗೆ ಭಂಗ ಉಂಟು ಮಾಡುತ್ತಿದ್ದಾರೆ' ಎಂದು ನ್ಯಾಯಪೀಠ ಕಳವಳ ವ್ಯಕ್ತಪಡಿಸಿದೆ.





2ನೇ ಸ್ಥಾನ ಪಡೆದ ಪಿಇಎಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಏವಿಯನ್ಸ್ ತಂಡ

ಡ್ರೋನ್ ಸ್ಪರ್ಧೆ: ಪಿಇಎಸ್‌ಗೆ 2ನೇ ಸ್ಥಾನ

ಬೆಂಗಳೂರು: ಇತ್ತೀಚೆಗೆ ಚೆನ್ನೈನಲ್ಲಿ ನಡೆದ 'ಎಸ್‌ಎಇ ಡ್ರೋನ್ ಡೆವಲಪ್‌ಮೆಂಟ್ ಚಾಲೆಂಜ್-2025' ಅಂಗವಾಗಿ ಆಯೋಜಿಸಿದ್ದ ರಾಷ್ಟ್ರ ಮಟ್ಟದ ಫಿಕ್ಸ್‌ಡ್ ವಿಂಗ್ ಡ್ರೋನ್ ಸ್ಪರ್ಧೆಯಲ್ಲಿ ಎಲ್ಲ ವಿಭಾಗಗಳಲ್ಲಿ ಪಿಇಎಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಏವಿಯನ್ಸ್ ತಂಡವು ಎರಡನೇ ಸ್ಥಾನದೊಂದಿಗೆ ₹45 ಸಾವಿರ ಬಹುಮಾನ ಪಡೆದುಕೊಂಡಿದೆ.

ಪ್ರಾಧ್ಯಾಪಕ ಎಸ್.ವಿ. ಸತೀಶ್ ಅವರ ಮಾರ್ಗದರ್ಶನದಲ್ಲಿ ತಂಡವು ಸ್ಪರ್ಧೆಯಲ್ಲಿ ಪಾಲ್ಗೊಂಡಿತ್ತು. ಗುರುರಾಮ್ ಶ್ರೇಯಾ (ತಂಡದ ನಾಯಕ), ಬಿ.ಎಸ್. ಅನುರಾಗ್ ರಾವ್, ಗೀತೇಶ್ ನಾಯ್ಡು, ಶುಭಾಂಗಿ ಶ್ರೀವಾಸ್ತವ, ಉದಯ್ ಗೋಪನ್, ಆದರ್ಶ್ ಡಿ., ಜಾನ್ವಿ ಅಶ್ವಿನ್ ಖೇರ್, ಆ್ಯಂಡೆ ಹೇಮಂತ್, ಉದಿತಿ ಮೌರ್ಯಾಂದ್, ಹೇಮಾಕ್ಷ ಬ್ರೆಜಾ ತಂಡದಲ್ಲಿದ್ದರು.

ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಜವಾಹರ್ ದೊರೆಸ್ವಾಮಿ, ಕುಲಪತಿ ಜೆ. ಸೂರ್ಯ ಪ್ರಸಾದ್ ಅವರು ಸ್ಪರ್ಧೆಯಲ್ಲಿ ಎರಡನೇ ಸ್ಥಾನ ಪಡೆದ ತಂಡಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ ಎಂದು ವಿಶ್ವವಿದ್ಯಾಲಯದ ಪ್ರಕಟಣೆಯಲ್ಲಿ ತಿಳಿಸಿದೆ.

ಸೈಬರ್ ವಂಚನೆ ಸಾಧ್ಯತೆ: ಎಚ್ಚರಿಕೆ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಗಡಿಯಲ್ಲಿ ಉದ್ಭವಿಸಿರುವ ಸಂಘರ್ಷದ ಸನ್ನಿವೇಶವನ್ನು ಬಳಸಿಕೊಂಡು ಸೈಬರ್ ಕಳ್ಳರು ವಂಚನೆ ಎಸಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಎಚ್ಚರಿಕೆ ವಹಿಸುವಂತೆ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಮನವಿ ಮಾಡಿದ್ದಾರೆ.

ಸುಳ್ಳು ಸುದ್ದಿ, ಫಿಶಿಂಗ್, ನಕಲಿ ಲಿಂಕ್‌ಗಳ ಮೂಲಕ ಸೈಬರ್ ವಂಚಕರು ವಂಚನೆ ನಡೆಸುವ ಸಾಧ್ಯತೆಗಳು ಇವೆ ಎಂದು ಅವರು ಎಚ್ಚರಿಸಿದ್ದಾರೆ.

ತಮ್ಮ ವಾಟ್ಸ್‌ಆ್ಯಪ್ ಖಾತೆಗೆ ಎಪಿಕೆ ಫೈಲ್ ಬಂದರೆ ಅದನ್ನು ತೆರೆಯಬೇಡಿ. ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಲು ಪ್ಲೇ-ಸ್ಟೋರ್ ಅನ್ನೇ ಬಳಸಬೇಕು ಎಂದು ಪೊಲೀಸರು ಮನವಿ ಮಾಡಿದ್ದಾರೆ.

ಸೇನೆಗೆ ತುರ್ತಾಗಿ ನೇಮಕಾತಿ ನಡೆಸಲಾಗುತ್ತಿದೆ ಎಂದು ನಕಲಿ ಲಿಂಕ್ ಕಳುಹಿಸಿ ಸಾರ್ವಜನಿಕರ ವೈಯಕ್ತಿಕ ಮಾಹಿತಿ ಕದಿಯುವ ಸಾಧ್ಯತೆ ಇದೆ. ನಕಲಿ ಲಿಂಕ್‌ಗಳು ಬಂದರೆ ತಕ್ಷಣವೇ ಡಿಲೀಟ್ ಮಾಡಿ. ಸೈಬರ್ ದಾಳಿಗೆ ಒಳಗಾದರೆ ಆತಂಕ ಪಡುವುದು ಬೇಡ. ತಕ್ಷಣವೇ ಸಹಾಯವಾಣಿ 1930ಗೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದು ಕೋರಲಾಗಿದೆ.

ಮಲ್ಲೇಶ್ವರದ ಪಬ್‌ನಲ್ಲಿ ₹60 ಸಾವಿರ ದೋಚಿ ಪರಾರಿ

ಪಿಸ್ತೂಲು ತೋರಿಸಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಮಿಲ್ಕ್ ಕಾಲೊನಿ ರಸ್ತೆಯಲ್ಲಿ ಜೊಮೆಟ್ರಿ ಬ್ರೆವರಿ ಆ್ಯಂಡ್ ಚಿಕನ್ ಪಬ್‌ಗೆ ಸೋಮವಾರ ಮುಂಜಾನೆ ಪಿಸ್ತೂಲು ಹಿಡಿದು ವ್ಯಕ್ತಿಯೊಬ್ಬ ನುಗ್ಗಿ ಹಣ ದೋಚಿ ಪರಾರಿ ಆಗಿದ್ದಾನೆ.

ಪಬ್‌ನ ಕ್ಯಾಶ್ ಕೌಂಟರ್‌ನಲ್ಲಿದ್ದ ₹60 ಸಾವಿರವನ್ನು ಕಳ್ಳ ಹೊತ್ತೊಯ್ದಿದ್ದಾನೆ.

ಭದ್ರತಾ ಸಿಬ್ಬಂದಿ ದೂರಿನ ಮೇರೆಗೆ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 309 (ದರೋಡೆ) ಹಾಗೂ 331 (ಅಕ್ರಮ ಪ್ರವೇಶ) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಸಹಾಯವಾಣಿಗೆ ಕರೆ: 'ಪಬ್ ಅನ್ನು ಭಾನುವಾರ ರಾತ್ರಿ ಬಂದ್ ಮಾಡಿಕೊಂಡು ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ಮನೆಗೆ ತೆರಳಿದ್ದರು. ಭದ್ರತಾ ಸಿಬ್ಬಂದಿ ಮಾತ್ರ ಕಾವಲು ಕಾಯುತ್ತಿದ್ದರು. ಸೋಮವಾರ ಮುಂಜಾನೆ ಪಿಸ್ತೂಲು ಹಿಡಿದುಕೊಂಡಿದ್ದ ವ್ಯಕ್ತಿಯೊಬ್ಬ ಪಬ್‌ಗೆ ನುಗ್ಗಿದ್ದಾನೆ. ಬಳಿಕ ಮೂರನೇ ಮಹಡಿಗೆ ತೆರಳಿ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಬಂದ್ ಮಾಡಿ, ಕಳ್ಳತನ ಮಾಡಿ ಪರಾರಿ ಆಗಿದ್ದಾನೆ' ಎಂದು ಮೂಲಗಳು ತಿಳಿಸಿವೆ.



ಕಾರ್ಯಾಚರಣೆಗೆ ಬಂದಿದ್ದ ಪೊಲೀಸ್ ಸಿಬ್ಬಂದಿ

ಕಳ್ಳ ಪಿಸ್ತೂಲ್ ಹಿಡಿದುಕೊಂಡು ಪಬ್ ಒಳಕ್ಕೆ ನುಗ್ಗಿದ್ದಾನೆ ಎಂದು ಭದ್ರತಾ ಸಿಬ್ಬಂದಿ ಮಾಹಿತಿ ನೀಡಿದ್ದರಿಂದ ಶಸ್ತ್ರಾಸ್ತ್ರ ಸಜ್ಜಿತರಾಗಿ ಸ್ಥಳಕ್ಕೆ ಪೊಲೀಸರು ಬಂದು ಕಾರ್ಯಾಚರಣೆ ನಡೆಸಿದರು. ಆರಂಭದಲ್ಲಿ ಡ್ರೋನ್ ಸಹಾಯದಿಂದ ಪಬ್ ಒಳಗೆ ಕಳ್ಳನಿದ್ದ ಸ್ಥಳವನ್ನು ಪತ್ತೆಹಚ್ಚುವ ಪ್ರಯತ್ನ ಮಾಡಲಾಯಿತು. ಆದರೆ, ಆತನ ಸುಳಿವು ಸಿಗಲಿಲ್ಲ. ನಂತರ ಶಸ್ತ್ರಾಸ್ತ್ರ ಸಹಿತ ಪೊಲೀಸರು ಪಬ್ ಒಳಕ್ಕೆ ನುಗ್ಗಿ ಕಾರ್ಯಾಚರಣೆ ನಡೆಸಿದರು. ಅವರಿಗೂ ಕಳ್ಳ ಸಿಗಲಿಲ್ಲ. ಅಷ್ಟರಲ್ಲಿ ಕಳ್ಳ ಹಣ ದರೋಡೆ ನಡೆಸಿ ಪರಾರಿ ಆಗಿರುವುದು ಗೊತ್ತಾಗಿತ್ತು.

ಮಾಹಿತಿ ತಿಳಿದು ಅಕ್ಕಪಕ್ಕದ ನೂರಾರು ಮಂದಿ ಪಬ್ ಎದುರು ಜಮಾಯಿಸಿದ್ದರು.

'ಭದ್ರತಾ ಸಿಬ್ಬಂದಿ ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಲಾಯಿತು. ಪಬ್ ಒಳಗೆ ಯಾವುದೇ ವ್ಯಕ್ತಿ ಪತ್ತೆಯಾಗಿಲ್ಲ. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ತನಿಖೆಯ ಬಳಿಕ ಕಳ್ಳತನ ಮಾಡಿದ್ದ ವ್ಯಕ್ತಿಯ ಕೈಯಲ್ಲಿ ಪಿಸ್ತೂಲ್ ಇತ್ತೇ ಇಲ್ಲವೇ ಎಂಬುದು ಗೊತ್ತಾಗಲಿದೆ' ಎಂದು ಉತ್ತರ ವಿಭಾಗದ ಡಿಸಿಪಿ ಸೈದುಲ್ಲಾ ಅಡಾವತ್ ಅವರು ತಿಳಿಸಿದರು.

ಅಪರಾಧ ಸುದ್ದಿ

ಡ್ರಗ್ಸ್: ನೈಜೀರಿಯಾ ಪ್ರಜೆಗೆ 15 ವರ್ಷ ಶಿಕ್ಷೆ

ಬೆಂಗಳೂರು: ಮಾದಕ ವಸ್ತು ಮಾರಾಟ ಮಾಡುವ ವೇಳೆ ಸಿಕ್ಕಿಬಿದ್ದ ನೈಜೀರಿಯಾ ಪ್ರಜೆಗೆ 15 ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ ಸಿಸಿಎಚ್ 33ನೇ ನ್ಯಾಯಾಲಯ (ಎನ್‌ಡಿಪಿಎಸ್ ವಿಶೇಷ ನ್ಯಾಯಾಲಯ) ಆದೇಶಿಸಿದೆ.

ಹಾರ್ಲಿ ಒಕನೊವ ಶಿಕ್ಷೆಗೆ ಗುರಿಯಾದ ಅಪರಾಧಿ. ಕೆ.ಆರ್.ಪುರದ ಚಂದ್ರವದನಾ ಲೇಔಟ್‌ನ ಕಲ್ಕೆರೆ ಮುಖ್ಯ ರಸ್ತೆಯಲ್ಲಿ ಸಾರ್ವಜನಿಕರಿಗೆ ಮಾದಕ ವಸ್ತು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದ ವೇಳೆ ಸಿಸಿಬಿ ಪೊಲೀಸರು ಆತನನ್ನು ಬಂಧಿಸಿ, 200 ಗ್ರಾಂ ಎಂಡಿಎಂಎ ಕ್ರಿಸ್ಟೆಲ್ ವಶಪಡಿಸಿಕೊಂಡಿದ್ದರು.

ಪೊಲೀಸರು ತನಿಖೆ ನಡೆಸಿ, ಆರೋಪಿ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ವಿವಿಧ ಕಲಂನ ವಿದೇಶಿ ಕಾಯ್ದೆ ಅಡಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಆರೋಪ ಸಾಬೀತಾದ ಕಾರಣ 15 ವರ್ಷ ಜೈಲು ಹಾಗೂ ₹1.75 ಲಕ್ಷ ದಂಡ ವಿಧಿಸಿ ನ್ಯಾಯಾಧೀಶ ವಿಜಯ ದೇವರಾಜ ಅರಸು ಆದೇಶಿಸಿದ್ದಾರೆ. ಅಭಿಯೋಜಕ ಕೆ.ವಿ.ಅಶ್ವಥ್‌ನಾರಾಯಣ ವಾದ ಮಂಡಿಸಿದರು.

ನಗರದಲ್ಲಿ ಇಂದು


ಡಾ.ಬಿ.ಆರ್. ಅಂಬೇಡ್ಕರ್ ಅವರು ಬರೆದಿರುವ 'ಥಾಟ್ಸ್ ಆನ್ ಪಾಕಿಸ್ತಾನ್' ಪುಸ್ತಕದ ಕುರಿತು ಸಂವಾದ: ಉದ್ಘಾಟನೆ: ಎನ್. ಮಹೇಶ್, ಆಶಯ ಭಾಷಣ: ಜಿ. ಗೋವಿಂದಯ್ಯ, ವಿಷಯ ಮಂಡನೆ: ಜಿ.ಬಿ. ಹರೀಶ್, ಚಕ್ರವರ್ತಿ ಸೂಲಿಬೆಲೆ, ಅಧ್ಯಕ್ಷತೆ: ವೆಂಕಟೇಶ್, ಆಯೋಜನೆ: ರಾಷ್ಟ್ರೀಯ ಅಂಬೇಡ್ಕರ್ ಸೇನೆ, ಸ್ಥಳ: ವಿದ್ವತ್ ಸಭಾಂಗಣ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಯನಗರ, ಬೆಳಿಗ್ಗೆ 11

'ಸತ್ಯಾಂತರಂಗ' ಯಕ್ಷಗಾನ ಪ್ರದರ್ಶನ: ಆಯೋಜನೆ: ಕೋದಂಡರಾಮ ಕೃಪಾಪೋಷಿತ ಯಕ್ಷಗಾನ ಮಂಡಳಿ, ಸ್ಥಳ: ಸೌಂದರ್ಯ ಶಾಲೆಯ ಆವರಣ, ಹಾವನೂರು ಬಡಾವಣೆ, ಹೆಸರಘಟ್ಟ ಮುಖ್ಯರಸ್ತೆ, ಸಂಜೆ 5

'ಭಾಗವತ ಸಾರೋದ್ಧಾರ' ಪ್ರವಚನ: ಬಿ.ವಿ. ಕೃಷ್ಣಮೂರ್ತಿ, ಭವಜನೆ: ಸುಶಮೀಂದ್ರ ಭಜನಾ ಮಂಡಳಿ, ಸ್ಥಳ: ರಾಯರ ಮಠ, ಸುಧೀಂದ್ರನಗರ, ಸಂಜೆ 6

'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಕಾಸಾಗ್ರ್ಯಾಂಡ್‌ನಿಂದ ಅದ್ದೂರಿ 'ಪ್ರೊಮೆನೇಡ್' ಯೋಜನೆ ಘೋಷಣೆ



ಬೆಂಗಳೂರು: ಐಷಾರಾಮಿ ಜೀವನದ ಹೊಸ ಆಯಾಮ ಸೃಷ್ಟಿಸುವ ದಕ್ಷಿಣ ಭಾರತದ ಪ್ರಮುಖ ರಿಯಲ್ ಎಸ್ಟೇಟ್ ಡೆವಲಪರ್ ಕಾಸಗ್ರ್ಯಾಂಡ್, ಬೆಂಗಳೂರಿನಲ್ಲಿ ನೂತನ ಕಾಸಗ್ರ್ಯಾಂಡ್ 'ಪ್ರೊಮೆನೇಡ್' ಅಪಾರ್ಟ್‌ಮೆಂಟ್ ಆರಂಭಿಸುವುದಾಗಿ ಘೋಷಿಸಿದೆ.

ಯಲಹಂಕದ ಹೃದಯ ಭಾಗದ 3.89 ಎಕರೆ ಪ್ರದೇಶದಲ್ಲಿ ಚಿಂತನಶೀಲವಾಗಿ ಯೋಜಿಸಲಾದ ವಸತಿ ಎನ್‌ಕ್ಲೇವ್ 223 ಫ್ಲ್ಯಾಟ್‌ಗಳುಳ್ಳ ಪ್ರೀಮಿಯಂ ದರ್ಜೆಯ 2, 3 ಮತ್ತು 4 BHK ಮನೆಗಳನ್ನು ಹೊಂದಲಿದೆ. ನಗರ ಜೀವನಕ್ಕೆ ಪೂರಕವಾಗಿ ವಿನ್ಯಾಸಗೊಳಿಸಲಿರುವ ಅತ್ಯಾಧುನಿಕ ಹಾಗೂ ಪ್ರಶಾಂತ ಸ್ಥಳದ ಪ್ರೊಮೆನೇಡ್‌ನಲ್ಲಿ 65 ಕ್ಕೂ ಹೆಚ್ಚು ಸೌಲಭ್ಯಗಳು ಇರಲಿವೆ. ಸುಸಜ್ಜಿತ ಒಳಾಂಗಣ ಮತ್ತು ಹೊರಾಂಗಣ ಸೌಲಭ್ಯಗಳೊಂದಿಗೆ 13,000 ಚ.ಅಡಿಗಳ ಗ್ರ್ಯಾಂಡ್ ಕ್ಲಬ್‌ಹೌಸ್ ಹೊಂದಲಿದೆ.

ಹೆಬ್ಬಾಳದಿಂದ 15 ನಿಮಿಷಗಳ ದೂರದಲ್ಲಿ ದೊಡ್ಡಬೆಟ್ಟಹಳ್ಳಿ, ಜಕ್ಕೂರು, ಥಣಿಸಂದ್ರ, ಜಾಲಹಳ್ಳಿ, ಸಹಕಾರ ನಗರ, ಕೋಗಿಲು, ಚಿಕ್ಕಜಾಲ, ಸಿಂಗನಾಯಕನಹಳ್ಳಿ, ಮಾವಳ್ಳಿಪುರ ಮತ್ತು ದೇವನಹಳ್ಳಿಯಂತಹ ಪ್ರಮುಖ ಪ್ರದೇಶಗಳನ್ನು ಕೇವಲ 10-15 ನಿಮಿಷದಲ್ಲಿ ತಲುಪಬಹುದಾಗಿದೆ.

ವಿಶ್ವ ದರ್ಜೆಯ ಆರೋಗ್ಯ ಕೇಂದ್ರಗಳು, ಶಿಕ್ಷಣ ಸಂಸ್ಥೆಗಳು, ಮಾನ್ಯತಾ ಟೆಕ್ ಪಾರ್ಕ್ ರಸ್ತೆ, ಕಿರ್ಲೋಸ್ಕರ್ ಬ್ಯುಸಿನೆಸ್ ಪಾರ್ಕ್, ಬ್ರಿಗೇಡ್ ಮ್ಯಾಗ್ನಮ್ ಮತ್ತು RMZ ಲ್ಯಾಟಿಟ್ಯೂಡ್ ಸೇರಿದಂತೆ ಪ್ರಮುಖ ಐಟಿ ಮತ್ತು ವ್ಯಾಪಾರ ಕೇಂದ್ರಗಳು, ಮನರಂಜನೆಯ ಮಾಲ್‌ಗಳು ಹಾಗೂ ಡೈನಿಂಗ್ ಹಾಟ್‌ಸ್ಪಾಟ್‌ಗಳು ಪ್ರೊಮೆನೇಡ್‌ಗೆ ಸಮೀಪದಲ್ಲಿವೆ.


ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ಯಲಹಂಕ ರೈಲು, ಬಸ್ ನಿಲ್ದಾಣ , ಪೀಣ್ಯ ಮೆಟ್ರೋ ನಿಲ್ದಾಣ ಸೇರಿದಂತೆ ಉತ್ತಮ ಸಂಪರ್ಕವಿದೆ.

ಐಷಾರಾಮಿ ಸೌಲಭ್ಯಗಳು: ಪ್ರೊಮೆನೇಡ್ ಯೋಜನೆಯ 2.6 ಎಕರೆ ಪ್ರದೇಶದ ಒಂದು ಭಾಗದ 32,000 ಚದರ ಅಡಿ ವಿಸ್ತೀರ್ಣವನ್ನು ತೆರೆದ ಸ್ಥಳಗಳಿಗೆ ಮೀಸಲಿಡಲಾಗಿದೆ. ಇದರಲ್ಲಿ 13 ಸಾವಿರ ಚ.ಅಡಿ ವಿಸ್ತೀರ್ಣದ ಕ್ಲಬ್‌ಹೌಸ್ ಸೇರಿದೆ. 3,400 ಚದರ ಅಡಿ ವಿಸ್ತೀರ್ಣದ ಈಜುಕೊಳ, ಜಕುಝಿ, ವಾಟರ್ ಜೆಟ್‌ಗಳು ಮತ್ತು ಪೂಲ್‌ಸೈಡ್ ಕ್ಯಾಬಾನಾ, ಫಿಟ್‌ನೆಸ್ ಉತ್ಸಾಹಿಗಳಿಗೆ ಸಾಕರ್, ಬ್ಯಾಸ್ಕೆಟ್‌ಬಾಲ್ ಕೋರ್ಟ್, ಕ್ರಾಸ್‌ಫಿಟ್ ಮತ್ತು ಸುಸಜ್ಜಿತ ಜಿಮ್ ಸೌಲಭ್ಯ. ಮನರಂಜನೆಗಾಗಿ, ಓಪನ್-ಏರ್ ಆಂಫಿಥಿಯೇಟರ್, ಸ್ಕೈ ಸಿನೆಮಾ ಮತ್ತು ಮಿನಿ ಥಿಯೇಟರ್. ಪಾರ್ಟಿ ಡೆಕ್, ಗ್ರಿಲ್ಲಿಂಗ್ ಪೆವಿಲಿಯನ್ ಹಾಗೂ ಸಾಮಾಜಿಕ ಕೂಟಗಳಿಗೆ ಸ್ಥಳ ನಿಗದಿಪಡಿಸಲಾಗಿದೆ.

ಮಕ್ಕಳಿಗಾಗಿ ಆಟದ ಮೈದಾನ, ಹಿರಿಯರಿಗೆ ಉದ್ಯಾನ, ಏರ್ ಫಿಲ್ಲಿಂಗ್ ಸ್ಟೇಷನ್, ಕಾರ್-ವಾಶ್ ಬೇ ಮತ್ತು ಎಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಪಾಯಿಂಟ್, ವಾಹನ ಪಾರ್ಕಿಂಗ್, 24x7 ಭದ್ರತೆ, ನಿಯಂತ್ರಿತ ಪ್ರವೇಶ ಮತ್ತು ಸಿಸಿಟಿವಿ ಕ್ಯಾಮೆರಾ ವ್ಯವಸ್ಥೆ.

ಕಾಸಾಗ್ರ್ಯಾಂಡ್ ಪ್ರೊಮೆನೇಡ್ ಯೋಜನೆ ಆರಂಭ ದರ ₹ 1.30 ಕೋಟಿಯಾಗಿದ್ದು ನಿವಾಸಿಗಳಿಗೆ ಐಷಾರಾಮಿ ಮತ್ತು ಅನುಕೂಲಕರ ಜೀವನಶೈಲಿ ಕಲ್ಪಿಸುವತ್ತ ಹೆಜ್ಜೆ ಹಾಕಿದೆ.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್





ಹೊರ ವರ್ತುಲ ರಸ್ತೆಯಿಂದ ನಗರದ ಕೇಂದ್ರ ಭಾಗಕ್ಕೆ ಸಂಪರ್ಕ ಕಲ್ಪಿಸುವ ಮೂರು ರಸ್ತೆಗಳು ಅತಂತ್ರ • ಮಣ್ಣಿನಲ್ಲಿ ಹೂತುಕೊಳ್ಳುವ ವಾಹನಗಳು

ಕಾಮಗಾರಿ ಆಮೆಗತಿ; ವಾಹನ ಸವಾರರ ದುಃಸ್ಥಿತಿ

• ಆರ್. ಮಂಜುನಾಥ್

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 'ನಮ್ಮ ಮೆಟ್ರೊ' ಸಂಪರ್ಕ ಕಲ್ಪಿಸುವ ಕಾಮಗಾರಿಯಿಂದಾಗಿ ನಾಲ್ಕು ವರ್ಷದಿಂದ ಆ ಭಾಗದ ವಾಹನ ಸವಾರರು ಬಸವಳಿದಿದ್ದಾರೆ. ಹೊರ ವರ್ತುಲ ರಸ್ತೆಯಿಂದ ನಗರದ ಕೇಂದ್ರ ಭಾಗಕ್ಕೆ ಸಂಪರ್ಕ ಕಲ್ಪಿಸುವ ಮೂರು ರಸ್ತೆಗಳ ಅವ್ಯವಸ್ಥೆಯಿಂದಾಗಿ ನಿತ್ಯವೂ ಗಂಟೆಗಟ್ಟಲೆ ರಸ್ತೆಯಲ್ಲೇ ಪರದಾಡುತ್ತಿದ್ದಾರೆ.


ಹೊರವರ್ತುಲ ರಸ್ತೆಗೆ ಪರ್ಯಾಯವಾಗಿ ವೀರಣ್ಣಪಾಳ್ಯ, ನಾಗವಾರ ಮುಖ್ಯರಸ್ತೆ, ಹೆಣ್ಣೂರು ಮುಖ್ಯರಸ್ತೆ ಬಳಿಯ 80 ಅಡಿ ರಸ್ತೆ ಮೂಲಕ ನಗರದ ಕೇಂದ್ರ ಭಾಗವನ್ನು ಸಂಪರ್ಕಿಸಬಹುದು. ಆದರೆ, ಈ ಮೂರು ರಸ್ತೆಗಳಲ್ಲಿ ವರ್ಷಗಳಿಂದ ನಡೆಯುತ್ತಿರುವ ಕಾಮಗಾರಿಗಳಿಂದ ವಾಹನ ಸಂಚಾರ ದುಸ್ತರವಾಗಿದೆ. ಹೀಗಾಗಿ ಹೊರವರ್ತುಲ ರಸ್ತೆ, ಹೆಬ್ಬಾಳ ಜಂಕ್ಷನ್ ಮೂಲಕವೇ ವಾಹನಗಳು ಸಂಚರಿಸುತ್ತಿರುವುದರಿಂದ ತಾಸುಗಟ್ಟಲೆ ವಾಹನ ದಟ್ಟಣೆ ಉಂಟಾಗುತ್ತಿದೆ. 'ರಸ್ತೆ ಗುಂಡಿಗಳನ್ನಾದರೂ ಮುಚ್ಚಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರೆ ದಟ್ಟಣೆ ಸುಧಾರಿಸುತ್ತದೆ' ಎಂದು ಹೊರ ವರ್ತುಲ ಹಾಗೂ ಸಂಪರ್ಕ ರಸ್ತೆಗಳಲ್ಲಿ ಸಂಚಾರ ನಿಯಂತ್ರಿಸುವ ಪೊಲೀಸರು ಹೇಳಿದರು.

'ಬಿಬಿಎಂಪಿಗೆ ಕಾಯದೇ, ಕಾಂಕ್ರೀಟ್ ತುಂಬಿರುವ ಲಾರಿಗಳು ಬಂದಾಗ ಅವರಲ್ಲಿ ಮನವಿ ಮಾಡಿಕೊಂಡು ನಾವೇ ಗುಂಡಿಗಳನ್ನು ಮುಚ್ಚುತ್ತೇವೆ' ಎಂದು ಸಂಚಾರ ಪೊಲೀಸರು ತಿಳಿಸಿದರು. ಸಂಪರ್ಕ ರಸ್ತೆಗಳ ಅಕ್ಕಪಕ್ಕದಲ್ಲಿ ವಾಸಿಸುವ ಜನರಂತೂ ಬಿಬಿಎಂಪಿ ಅಧಿಕಾರಿಗೆ ಶಾಪ ಹಾಕುತ್ತಾರೆ. ಆದರೆ ಬಿಬಿಎಂಪಿ ಎಂಜಿನಿಯರ್‌ಗಳು, 'ವೈಟ್ ಟಾಪಿಂಗ್ ಕಾಮಗಾರಿ ನಡೆಯುವಾಗ ಸ್ವಲ್ಪ ದಿನ ತೊಂದರೆ ಆಗುತ್ತದೆ' ಎನ್ನುತ್ತಾರೆ.

ಸಂಪರ್ಕ ರಸ್ತೆ 1: ಹೊರ ವರ್ತುಲ ರಸ್ತೆಯ ವೀರಣ್ಣಪಾಳ್ಯದ 3ನೇ ಮುಖ್ಯರಸ್ತೆಯಿಂದ ಪ್ರಾರಂಭವಾಗುವ ರಸ್ತೆ, ಗುಂಡಿಗಳಿಂದ ಹದಗೆಟ್ಟಿದೆ. ಅಲ್ಲಲ್ಲಿ ಪೈಪ್ ಅಳವಡಿಸಲು ಅಗೆಯಲಾಗಿದ್ದು, ಅದನ್ನು ಮುಚ್ಚಿಲ್ಲ. ಕನಕನಗರದ ಬಳಿ ರೈಲ್ವೆ ಲೆವೆಲ್ ಕ್ರಾಸಿಂಗ್ ಇದ್ದು, ಆಗಾಗ ರೈಲು ಸಂಚರಿಸುವ ಸಮಯದಲ್ಲಿ ಗೇಟ್ ಹಾಕಲಾಗುತ್ತದೆ. ಆ ಸಂದರ್ಭದಲ್ಲಿ ಅರ್ಧ ಕಿ.ಮೀ ವಾಹನಗಳು ನಿಲ್ಲುತ್ತವೆ. ಗೇಟ್ ತೆಗೆದಾಗ, ಎರಡೂ ಬದಿಯಿಂದ ವಾಹನಗಳು ಬರುವಾಗ ದಟ್ಟಣೆಯಾಗುತ್ತದೆ. ಕೆಎಚ್‌ಬಿ ಕಾಲೊನಿ ಮುಖ್ಯರಸ್ತೆಯಲ್ಲಿ ಸಾಗುವ ಈ ರಸ್ತೆ 50 ಮೀ. ಕೂಡ ಉತ್ತಮವಾಗಿಲ್ಲ. ಪುಷ್ಪಾಂಜಲಿ ಚಿತ್ರಮಂದಿರದ ಬಳಿ ದಿಣ್ಣೂರು ಮುಖ್ಯರಸ್ತೆ ಸೇರಿಕೊಳ್ಳುವ ಈ ಸಂಪರ್ಕ ರಸ್ತೆ ಕಿರಿದಾಗಿದ್ದು, ಏಕಕಾಲಕ್ಕೆ ಎರಡು ವಾಹನಗಳು ಓಡಾಡದಂತಹ ಸ್ಥಿತಿ ಇದೆ.

ಸಂಪರ್ಕ ರಸ್ತೆ 2: ಹೊರ ವರ್ತುಲ ರಸ್ತೆಯ ಥಣಿಸಂದ್ರ–ನಾಗವಾರ ಜಂಕ್ಷನ್‌ನಿಂದ ನಾಗವಾರ ಮುಖ್ಯರಸ್ತೆ ಮೂಲಕ ಅರೇಬಿಕ್ ಕಾಲೇಜು, ಕಾಡುಗೊಂಡನಹಳ್ಳಿ ಮೂಲಕ ಟ್ಯಾನರಿ ರಸ್ತೆಗೆ ಸಂಪರ್ಕ ಕಲ್ಪಿಸುವ ಈ ಸಂಪರ್ಕ ರಸ್ತೆಯಲ್ಲಿ ಬಿಎಂಟಿಸಿ ಬಸ್ ಸಂಚಾರವೂ ಇದೆ. ಆದರೆ, ವೈಟ್‌ಟಾಪಿಂಗ್, ನಮ್ಮ ಮೆಟ್ರೊ ಕಾಮಗಾರಿಯ ನಡುವೆ ರಸ್ತೆಯನ್ನು ಹುಡುಕಬೇಕಾಗಿದೆ. ಇಲ್ಲೂ ರೈಲ್ವೆ ಲೆವೆಲ್ ಕ್ರಾಸಿಂಗ್ ಸಮಸ್ಯೆ ಇದೆ. ರಸ್ತೆಯಲ್ಲಿ ಪೈಪ್‌ಗಳನ್ನು ಅಳವಡಿಸಲು ಅಗೆದಿರುವ ಜೊತೆಗೆ, ಎರಡೂ ಬದಿ ಪಾದಚಾರಿ ಮಾರ್ಗಗಳಲ್ಲಿ, ಡಕ್ಟ್ ಅಳವಡಿಸುವ ಕೆಲಸ ನಡೆಯುತ್ತಿದೆ. ಯಾವ ಭಾಗದಲ್ಲೂ ಕೆಲಸ ಪೂರ್ಣಗೊಂಡಿಲ್ಲ. ಹಸಿ ಮಣ್ಣಿನಲ್ಲಿ ವಾಹನಗಳು ಇಳಿದು ನಿಂತುಕೊಳ್ಳುತ್ತವೆ. ಅವುಗಳನ್ನು ತೆರವು ಮಾಡುವ ವೇಳೆಗೆ ವಾಹನಗಳು ಸಾಲುಗಟ್ಟುತ್ತವೆ. ಟ್ಯಾನರಿ ರಸ್ತೆಯಲ್ಲಿ ವೆಂಕಟೇಶಪುರ, ಅರೇಬಿಕ್ ಕಾಲೇಜು ಸೇರಿದಂತೆ ಎರಡು ಕಡೆ ನಮ್ಮ ಮೆಟ್ರೊ ನಿಲ್ದಾಣದ ಕೆಲಸ ನಡೆಯುತ್ತಿದ್ದು, ರಸ್ತೆ ಕಿರಿದಾಗಿದೆ. ಇಲ್ಲೇ ತ್ಯಾಜ್ಯ ಸಂಗ್ರಹಿಸುವ ಆಟೊಗಳು ನಿಲ್ಲುತ್ತಿದ್ದು, ದುರ್ವಾಸನೆ ಬೀರುತ್ತಿರುತ್ತವೆ. ಫ್ರೇಜರ್‌ಟೌನ್‌ಗೆ ಸಂಪರ್ಕಿಸುವ ಮುನ್ನ ಬಿಲಾಲ್‌ನಗರದ ಸಮೀಪ ರಸ್ತೆ ಕಿರಿದಾಗಿ, ಬಸ್ ಸಂಚಾರವೂ ಸಾಧ್ಯವಿಲ್ಲ.

ಸಂಪರ್ಕ ರಸ್ತೆ 3: ಹೊರವರ್ತುಲ ರಸ್ತೆಯಿಂದ ಹೊಸ ವಿಮಾನ ನಿಲ್ದಾಣ ರಸ್ತೆಗೆ ಸಂಪರ್ಕ ಕಲ್ಪಿಸುವ ಹೆಣ್ಣೂರು ಮುಖ್ಯರಸ್ತೆ, ಸರ್ವಿಸ್ ರಸ್ತೆ ಮೂಲಕ ಎಚ್‌ಆರ್‌ಬಿಆರ್ ಬಡಾವಣೆಯ 3ನೇ ಬ್ಲಾಕ್ 80 ಅಡಿ ರಸ್ತೆಯಿಂದ ಲಿಂಗರಾಜಪುರಂನಿಂದ ನಗರ ತಲುಪುವ ರಸ್ತೆಗಳಲ್ಲಿ ವರ್ಷದಿಂದ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಲೇ ಇದೆ. ಒಂದು ಬದಿ ವೈಟ್‌ಟಾಪಿಂಗ್ ಮುಗಿದಿದೆ, ಆದರೆ ಸಂಚಾರಕ್ಕೆ ಅನುವು ಮಾಡಿಕೊಟ್ಟಿಲ್ಲ. ಇನ್ನೊಂದು ಬದಿ ರಸ್ತೆ ಅಗೆಯಲಾಗಿದ್ದು, ವಾಹನಗಳ ಸಂಚಾರಕ್ಕೆ ಅಡ್ಡಿಯಾಗಿದೆ. ಪಾದಚಾರಿ ಮಾರ್ಗದಲ್ಲಿ ನಿರ್ಮಾಣ ತ್ಯಾಜ್ಯವನ್ನು ತುಂಬಿದ್ದು, ಜನ ಓಡಾಡಲು ಸಾಧ್ಯವಿಲ್ಲ. ಎರಡು–ಮೂರು ಅಡಿ ಆಳದ ಡಕ್ಟ್‌ಗಳು ತೆರೆದುಕೊಂಡಿದ್ದು, ವಾಹನ ಹಾಗೂ ನಡೆದಾಡುವವರೂ ಬೀಳುವಂತಾಗಿದೆ.



ಟ್ಯಾನರಿ ರಸ್ತೆಯಲ್ಲಿ ವೆಂಕಟೇಶಪುರ ಮೆಟ್ರೊ ನಿಲ್ದಾಣದ ಜೊತೆಗೆ ವೈಟ್ ಟಾಪಿಂಗ್ ಚರಂಡಿ ಕಾಮಗಾರಿ ನಡೆಯುತ್ತಿದ್ದು ವಾಹನ ಸಂಚಾರಕ್ಕೆ ಸ್ಥಳವೇ ಇಲ್ಲದಂತಾಗಿದೆ ಪ್ರಜಾವಾಣಿ ಚಿತ್ರಗಳು: ಎಂ.ಎಸ್.ಮಂಜುನಾಥ್

ತುರ್ತಾಗಿ ಏನಾಗಬೇಕು?

ಹೊರ ವರ್ತುಲ ರಸ್ತೆಯಿಂದ ಕೇಂದ್ರ ಭಾಗಕ್ಕೆ ವೀರಣ್ಣಪಾಳ್ಯ, ನಾಗವಾರ ಮುಖ್ಯರಸ್ತೆ– ಟ್ಯಾನರಿ ರಸ್ತೆ ಹಾಗೂ ಎಚ್‌ಆರ್‌ಬಿಆರ್ ಬಡಾವಣೆಯ 80 ಅಡಿ ರಸ್ತೆಗಳಲ್ಲಿರುವ ಗುಂಡಿಗಳನ್ನಾದರೂ ಮುಚ್ಚಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಕಾಮಗಾರಿ ಮುಗಿದ ಮೇಲೆ ಅಗೆದಿರುವ ಗುಂಡಿಯನ್ನು ಮುಚ್ಚುವ ಬದಲು, 100 ಮೀಟರ್ ವ್ಯಾಪ್ತಿಯಲ್ಲಿ ಕಾಮಗಾರಿಯನ್ನು ಮುಗಿಸಿ, ಸಂಚಾರಕ್ಕೆ ಅನುವು ಮಾಡಿಕೊಡಬೇಕು. ನಂತರ ಮುಂದಿನ 100 ಮೀಟರ್ ವ್ಯಾಪ್ತಿಯಲ್ಲಿ ಕಾಮಗಾರಿ ಆರಂಭಿಸಬೇಕು. ಜಲಮಂಡಳಿ, ಬೆಸ್ಕಾಂ, ಬಿಬಿಎಂಪಿ ಹಾಗೂ ಇತರೆ ಸಂಸ್ಥೆಗಳು ಸಮನ್ವಯ ಸಾಧಿಸಿ ಕಾಮಗಾರಿಯನ್ನು ಒಂದೇ ವೇಗದಲ್ಲಿ ಮುಗಿಸಬೇಕು. ಇಲಾಖೆಗಳ ಮುಖ್ಯಸ್ಥರು ಆಗಾಗ್ಗೆ ಕಾಮಗಾರಿ ನಡೆಯುತ್ತಿರುವ ಸ್ಥಳಗಳಿಗೆ ಭೇಟಿ ನೀಡಿ, ಇರುವ ಸಮಸ್ಯೆಗಳನ್ನು ಬಗೆಹರಿಸಿ, ಕಾಮಗಾರಿಗಳು ವೇಗವಾಗಿ ಮುಗಿಸುವ ಜವಾಬ್ದಾರಿ ಹೊರಬೇಕು. ರೈಲ್ವೆ ಲೆವೆಲ್ ಕ್ರಾಸಿಂಗ್ ಬಳಿ ಮುಕ್ತ ಸಂಚಾರಕ್ಕೆ ಕಾಮಗಾರಿಗಳು ನಡೆಯಬೇಕಿವೆ.

ದೂಳು, ಆರೋಗ್ಯ ಸಮಸ್ಯೆ



ಹೊರ ವರ್ತುಲ ರಸ್ತೆಯಿಂದ ನಾಗವಾರ ಮುಖ್ಯರಸ್ತೆ ಮೂಲಕ ಟ್ಯಾನರಿ ದೊಡ್ಡಿ ರಸ್ತೆಯವರೆಗೂ ಒಂದು ವರ್ಷದಿಂದ ರಸ್ತೆ ಅಭಿವೃದ್ಧಿಪಡಿ ಸುತ್ತೇವೆ ಎಂದು ಕೆಲಸ ಮಾಡುತ್ತಿದ್ದಾರೆ. ಗುಂಡಿ ತೆಗೆಯುತ್ತಾರೆ, ಪೈಪ್ ಹಾಕುತ್ತಾರೆ. ಅದನ್ನು ಸರಿಯಾಗಿ ಮುಚ್ಚುವುದಿಲ್ಲ. ಎಲ್ಲ ಕಡೆಯೂ ಪೈಪ್ ಅಳವಡಿಸಿದ ಮೇಲೆ ವೆಟ್‌ಮಿಕ್ಸ್ ಹಾಕುತ್ತೇವೆ ಎನ್ನುತ್ತಾರೆ. ದೂಳು ಅತಿಯಾಗಿದ್ದು, ಜನರಿಗೆ ಹಲವು ರೀತಿಯ ಆರೋಗ್ಯ ಸಮಸ್ಯೆ ಉಂಟಾಗಿದೆ. ನಿತ್ಯವೂ ಇಲ್ಲಿ ಮಾಸ್ಕ್ ಹಾಕಿಕೊಂಡೇ ಇರಬೇಕಾಗುತ್ತದೆ. ಅಂಗಡಿಗಳಲ್ಲಿ ವ್ಯಾಪಾರ ಆಗುತ್ತಿಲ್ಲ, ವಸ್ತುಗಳೆಲ್ಲವೂ ದೂಳು ತುಂಬಿಕೊಂಡು ಜನರು ಖರೀದಿಸುವುದಿಲ್ಲ. ಹೋಟೆಲ್‌ಗಳ ಸ್ಥಿತಿಯಂತೂ ಬಂದ್ ಮಾಡುವಂತಾಗಿದೆ ಎಂದು ಕಾಡುಗೊಂಡನಹಳ್ಳಿ ನಿವಾಸಿ ರಾಬರ್ಟ್ ಅಳಲು ತೋಡಿಕೊಂಡರು.

'ಊಟಕ್ಕೆ ಸಾಲ ಮಾಡುವಂತಾಗಿದೆ'



'ಒಂಬತ್ತು ತಿಂಗಳಿನಿಂದ ಕೆಲಸ ಮಾಡಬೇಕೋ, ಬೇಡವೋ ಎಂಬ ರೀತಿಯಲ್ಲಿ ಕಾಂಕ್ರೀಟ್ ರಸ್ತೆ ಮಾಡುತ್ತಿದ್ದಾರೆ. ನಾವು ಬೀದಿಬದಿ ವ್ಯಾಪಾರಿಗಳು. ಇಲ್ಲಿ ವ್ಯಾಪಾರ ನಡೆದರೆ ರಾತ್ರಿ ಹೊಟ್ಟೆ ತುಂಬ ಊಟ ಮಾಡುತ್ತೇವೆ. ಆದರೆ, ಇವರು ರಸ್ತೆ ಕೆಲಸವನ್ನು ಮುಗಿಸುತ್ತಿಲ್ಲ. ಈಗ ಕೆಲವು ದಿನಗಳಿಂದ ಒಂದು ಭಾಗದಲ್ಲಿ ವಾಹನ ಸಂಚರಿಸಲು ಬಿಟ್ಟಿದ್ದಾರೆ. ಆಗಾಗ ಮುಚ್ಚುತ್ತಾರೆ. ಸಂಜೆ ವೇಳೆಯಲ್ಲಿ ಕಿಲೋಮೀಟರ್‌ಗಟ್ಟಲೆ ವಾಹನಗಳು ನಿಂತುಕೊಳ್ಳುತ್ತವೆ. ಹಣ್ಣುಗಳು ದೂಳಾಗಿ ನಮಗೆ ವ್ಯಾಪಾರ ಇಲ್ಲದಂತಾಗಿದೆ. ಸಾಲ ಮಾಡಿ ಊಟ ಮಾಡುವಂತಹ ಪರಿಸ್ಥಿತಿ ಇದೆ' ಎಂದು ಎಚ್‌ಆರ್‌ಬಿಆರ್ 2ನೇ ಬ್ಲಾಕ್‌ನ 80 ಅಡಿ ರಸ್ತೆಯಲ್ಲಿ ಹಣ್ಣಿನ ವ್ಯಾಪಾರಿ ಸೈಯ್ಯದ್ ಅವರು ಪರಿಸ್ಥಿತಿಯನ್ನು ಅರುಹಿಕೊಂಡರು.

ಪಿಳ್ಳಣ್ಣ ಗಾರ್ಡನ್‌ನಲ್ಲಿ 'ಜಲಾಗಾರ ಶಂಕುಸ್ಥಾಪನೆ'ಯಲ್ಲಿ ಡಿ.ಕೆ.ಶಿವಕುಮಾರ್ ಭರವಸೆ

ಶುದ್ಧ ಕುಡಿಯುವ ನೀರು ಪೂರೈಕೆಗೆ ಬದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಚಾರಿ ಕಾವೇರಿ, ಸರಳ ಕಾವೇರಿ'ಯಂತಹ ಯೋಜನೆಗಳ ಮೂಲಕ ಬೆಂಗಳೂರು ನಾಗರಿಕರಿಗೆ ಸಮರ್ಪಕವಾಗಿ ಶುದ್ಧ ಕುಡಿಯುವ ನೀರು ಪೂರೈಸುತ್ತಿದ್ದು, ಈಗ ಪುಲಿಕೇಶಿನಗರದಲ್ಲಿ 2.50 ಲಕ್ಷ ಜನರಿಗೆ ಹೆಚ್ಚಿನ ನೀರು ಸರಬರಾಜು ಮಾಡಲು ಜಲಾಗಾರಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿದೆ' ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ತಿಳಿಸಿದರು.

ಪುಲಕೇಶಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಗಾಯಪುರಂ ವಾರ್ಡ್ ಪಿಳ್ಳಣ್ಣ ಗಾರ್ಡನ್‌ನಲ್ಲಿ ಬೆಂಗಳೂರು ಜಲಮಂಡಳಿ ನಿರ್ಮಿಸಲಿರುವ ₹27.45 ಕೋಟಿ ಅಂದಾಜು ವೆಚ್ಚದ 4 ಎಂಎಲ್‌ಡಿ ಸಾಮರ್ಥ್ಯದ ಜಲಾಗಾರ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ, ಅವರು ಮಾತನಾಡಿದರು.

'ಈ ಯೋಜನೆಯಿಂದ ಪುಲಿಕೇಶಿನಗರದ 30 ಸಾವಿರ ಮನೆಗಳವರಿಗೆ ಶುದ್ಧ ಕುಡಿಯುವ ನೀರು ಲಭ್ಯವಾಗಲಿದೆ' ಎಂದರು.

'ಈ ಕ್ಷೇತ್ರದಲ್ಲಿ ರಸ್ತೆಗೆ ₹130 ಕೋಟಿ, ಮೇಲ್ಸೇತುವೆಗೆ ₹42 ಕೋಟಿ ಹಾಗೂ ವಾರ್ಡ್‌ಗಳ ಅಭಿವೃದ್ಧಿಗೆ ₹320 ಕೋಟಿ ವ್ಯಯಿಸಲಾಗುವುದು. ₹650 ಕೋಟಿ ವೆಚ್ಚದಲ್ಲಿ ಹೊಸ ಫ್ಲೈಓವರ್ ನಿರ್ಮಿಸಲು ನಿರ್ಧರಿಸಲಾಗಿದೆ. ಈ ಕ್ಷೇತ್ರದಲ್ಲಿ ಶಾಸಕರು ಜಾಗ ಹುಡುಕಿಕೊಟ್ಟರೆ ಅಥವಾ ಹಳೆಯ ಶಾಲೆಗಳ ಜಾಗವಿದ್ದರೆ, ಅಲ್ಲಿ ಸುಸಜ್ಜಿತ ಶಾಲೆ ನಿರ್ಮಿಸಲು ಬದ್ಧನಾಗಿದ್ದೇನೆ. ಅಲ್ಲದೆ, ಆಸ್ಪತ್ರೆ ನಿರ್ಮಾಣಕ್ಕೂ ಪಾಲಿಕೆ ವತಿಯಿಂದ ಜಾಗ ಹುಡುಕಲಾಗುತ್ತಿದೆ' ಎಂದು ಭರವಸೆ ನೀಡಿದರು.

ಈಗಾಗಲೇ ಈ ಕ್ಷೇತ್ರಕ್ಕೆ ₹1,055 ಕೋಟಿ ಅನುದಾನಗಳ ಕಾಮಗಾರಿಗೆ ಮಂಜೂರಾತಿ ನೀಡಿದ್ದೇವೆ. ಇಡೀ ಬೆಂಗಳೂರಿನ ತ್ಯಾಜ್ಯ ನಿರ್ವಹಣೆಗೆ ಒಂದು ವ್ಯವಸ್ಥಿತ 'ಸ್ವಚ್ಛ ಬೆಂಗಳೂರು' ಸಹಾಯವಾಣಿ ಸಂಖ್ಯೆ ಆರಂಭಿಸುತ್ತಿದ್ದೇವೆ ಎಂದು ಹೇಳಿದರು.

ಪುಲಿಕೇಶಿನಗರದ ಶಾಸಕ ಎ.ಸಿ ಶ್ರೀನಿವಾಸ್ ಮಾತನಾಡಿ, 'ನಾಲ್ಕು ದಶಲಕ್ಷ ಲೀಟರ್ ಸಾಮರ್ಥ್ಯದ ಜಲಾಗಾರದಲ್ಲಿ ಎರಡು ಅಂತಸ್ತುಗಳು ಇರಲಿವೆ. ಮೊದಲ ಅಂತಸ್ತು 2.48 ದಶಲಕ್ಷ ಲೀಟರ್ ಹಾಗೂ ಎರಡನೇ ಅಂತಸ್ತು 1.52 ದಶಲಕ್ಷ ಲೀಟರ್ ಸಾಮರ್ಥ್ಯ ಹೊಂದಿರಲಿವೆ' ಎಂದು ವಿವರಿಸಿದರು.



ಜಲಾಗಾರಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶಂಕುಸ್ಥಾಪನೆ ನೆರವೇರಿಸಿದರು

ಜಲಮಂಡಳಿ ಅಧ್ಯಕ್ಷ ವಿ.ರಾಮ್ ಪ್ರಸಾತ್ ಮನೋಹರ್ ಮಾತನಾಡಿ, 'ಪುಲಕೇಶಿನಗರ ವಿಧಾನಸಭಾ ಕ್ಷೇತ್ರಕ್ಕೆ ನಿತ್ಯ 20 ದಶಲಕ್ಷ ಲೀಟರ್ ನೀರು ಸರಬರಾಜು ಆಗುತ್ತಿದೆ. ಪ್ರತಿಯೊಬ್ಬರಿಗೂ ಸರಾಸರಿ 70 ಲೀಟರ್ ನೀರು ಲಭ್ಯವಾಗುತ್ತಿದೆ. ಹೊಸ ಜಲಾಗಾರ ಮತ್ತು ಹೊಸ ಕೊಳವೆ ಮಾರ್ಗದಿಂದ ಹೆಚ್ಚುವರಿಯಾಗಿ ನಿತ್ಯ 10 ದಶಲಕ್ಷ ಲೀಟರ್ ಶುದ್ದ ಕಾವೇರಿ ನೀರು ಲಭ್ಯವಾಗಲಿದೆ' ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಬಿಬಿಎಂಪಿ ಆಯುಕ್ತ ಮಹೇಶ್ವರರಾವ್, ಶಾಸಕರಾದ ರಿಜ್ವಾನ್ ಅರ್ಷದ್, ವಿಧಾನಪರಿಷತ್ ಸದಸ್ಯರಾದ ನಾಗರಾಜ ಯಾದವ್, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಸಂಪತ್‌ರಾಜ್ ಸೇರಿದಂತೆ ಸ್ಥಳೀಯ ನಾಯಕರು ಉಪಸ್ಥಿತರಿದ್ದರು.

'ಸಂಚಾರಿ ಕಾವೇರಿ'ಗೆ ಉತ್ತಮ ಪ್ರತಿಕ್ರಿಯೆ

ಬೆಂಗಳೂರು: 'ಗ್ರಾಹಕರ ಮನೆ ಬಾಗಿಲಿಗೆ ಕಡಿಮೆ ಬೆಲೆಯಲ್ಲಿ ಶುದ್ಧ ಕುಡಿಯುವ ನೀರು ಪೂರೈಸುವ 'ಸಂಚಾರಿ ಕಾವೇರಿ' ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಯೋಜನೆ ಆರಂಭವಾದ ಎರಡು ದಿನಗಳಲ್ಲಿ ಸಾವಿರಕ್ಕೂ ಹೆಚ್ಚು ಜನರು ಮೊಬೈಲ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡಿದ್ದಾರೆ' ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

'ಟ್ಯಾಂಕರ್ ಬುಕ್ಕಿಂಗ್ ಮಾಡಿರುವ ಜನರಿಗೆ ನೀರು ಪೂರೈಕೆ ಮಾಡಲಾಗಿದೆ. ಟ್ಯಾಂಕರ್‌ಗಳಿಗೆ ಆರ್‌ಎಫ್‌ಐಡಿ ಹಾಗೂ ಜಿಪಿಎಸ್ ಟ್ರ್ಯಾಕಿಂಗ್ ಅಳವಡಿಸಲಾಗಿದೆ. ನಿಯೋಜಿತ ಟ್ಯಾಂಕರ್‌ಗಳು ಜಲಮಂಡಳಿಯ ನಿಗದಿತ ಕಾವೇರಿ ಸಂಪರ್ಕ ಕೇಂದ್ರಗಳಿಂದ ನೀರು ತುಂಬಿಸಿಕೊಂಡು, ಅವುಗಳನ್ನು ನೇರವಾಗಿ ಗ್ರಾಹಕರಿಗೆ ತಲುಪಿಸುವುದನ್ನು ನಾಗರಿಕರು ಖಾತರಿಪಡಿಸಿಕೊಳ್ಳಬಹುದು' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಬಿಐಎಸ್ ಪ್ರಮಾಣಿತ ಶುದ್ಧ ಕುಡಿಯುವ ನೀರನ್ನು ಗ್ರಾಹಕರಿಗೆ ಪೂರೈಸಲಾಗುತ್ತಿದೆ. ಸರಬರಾಜು ಆಗುವ ನೀರಿನ ಬಗ್ಗೆ ಅನುಮಾನಗಳಿದ್ದಲ್ಲಿ ಪರೀಕ್ಷೆಗೆ ಜಲಮಂಡಳಿ ಸಿದ್ಧವಿದೆ' ಎಂದು ಸ್ಪಷ್ಟಪಡಿಸಿದ್ದಾರೆ.

'ಮಳೆಗಾಲದ ಪರಿಸ್ಥಿತಿ ನಿರ್ವಹಿಸಲು ಸಿದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಳೆಗಾಲದಲ್ಲಿ ನಗರದಲ್ಲಿ ಉಂಟಾಗುವ ಸಮಸ್ಯೆಗಳನ್ನು ಎದುರಿಸಲು ನಾನೂ ಸಿದ್ಧನಾಗಿದ್ದೇನೆ. ನಮ್ಮ ಅಧಿಕಾರಿಗಳೂ ಸಿದ್ಧರಾಗಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಟ್ಯಾನರಿ ರಸ್ತೆಯ ವೈಟ್ ಟಾಪಿಂಗ್ ಕಾಮಗಾರಿ ಸೇರಿ ನಗರದ ವಿವಿಧ ಕಾಮಗಾರಿಗಳನ್ನು ಸೋಮವಾರ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಮಳೆಗಾಲದಪರಿಸ್ಥಿತಿನಿರ್ವಹಣೆಗೆಬೇಕಾದಎಲ್ಲತೀರ್ಮಾನಗಳನ್ನು ಈಗಾಗಲೇ ಕೈಗೊಂಡಿದ್ದೇವೆ' ಎಂದು ಪ್ರತಿಕ್ರಿಯಿಸಿದರು.

'ವೈಟ್ ಟಾಪಿಂಗ್ ನಡೆಯುತ್ತಿರುವ ರಸ್ತೆಗಳ ಗುಣಮಟ್ಟ ಚೆನ್ನಾಗಿರಬೇಕು. ಈ ರಸ್ತೆಗಳು 30 ವರ್ಷಗಳ ಕಾಲ ಬಾಳಿಕೆ ಬರಬೇಕು. ಹೀಗಾಗಿ ನಾನು ಆಗಾಗ್ಗೆ ಕಾಮಗಾರಿಗಳ ಪರಿಶೀಲನೆ ಮಾಡುತ್ತಿದ್ದೇನೆ. ಅಧಿಕಾರಿಗಳು ತೋರಿಸುವ ಜಾಗದಲ್ಲಿ ಪರಿಶೀಲನೆ ಮಾಡುವುದಿಲ್ಲ, ನಾನು ಎಲ್ಲಿ ಹೇಳುತ್ತೇನೋ ಅಲ್ಲಿ ನಿಲ್ಲಿಸಿ ಪರಿಶೀಲನೆ ಮಾಡಲಾಗುವುದು. ಈಗ ಪರಿಶೀಲನೆ ಮಾಡಿದಾಗ ಅರ್ಧ ಅಡಿ ರಸ್ತೆ ಇದೆ. ಈ ರಸ್ತೆಯಲ್ಲಿ ನೀರು, ಕೇಬಲ್‌ಗಳಿಗೆ ಪ್ರತ್ಯೇಕವಾಗಿ ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ ಎಲ್ಲ ಸ್ಥಳೀಯ ಶಾಸಕರು ಸಹಕಾರ ನೀಡುತ್ತಿದ್ದಾರೆ' ಎಂದು ತಿಳಿಸಿದರು.

'ಕಸ ವಿಲೇವಾರಿ ಟೆಂಡರ್ ಕರೆಯಲು ಇದ್ದ ತಡೆಯಾಜ್ಞೆಯನ್ನು ನ್ಯಾಯಾಲಯ ವಜಾಗೊಳಿಸಿದೆ. ನಾಲ್ಕು ತಿಂಗಳ ಒಳಗೆ ಟೆಂಡರ್ ಕರೆಯಬೇಕು ಎಂದು ನ್ಯಾಯಾಲಯ ಅವಕಾಶ ನೀಡಿದ್ದು, ನಾವು ಟೆಂಡರ್ ಕರೆದು ಕಸ ವಿಲೇವಾರಿ ಕೆಲಸ ಮಾಡುತ್ತೇವೆ. ಒಂದೇ ಮನೆಯಲ್ಲಿ ಕೂತು ಕೆಲವರು ಟೆಂಡರ್ ಹಾಕಿರುವ ದಾಖಲೆಗಳು ನಮಗೆ ಸಿಕ್ಕಿವೆ. ಅವರು ವಿರೋಧ ಪಕ್ಷದವರ ಬಳಿ ಹೋಗಿ ದೂರು ನೀಡಿದ್ದರು. ಈಗಲೂ ಏನೇನೋ ತಂತ್ರ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.


'ನಾವು ಶುದ್ಧ ಆಡಳಿತ ಕೊಟ್ಟು ಸ್ವಚ್ಛ ಬೆಂಗಳೂರು ನಿರ್ಮಾಣ ಮಾಡುತ್ತೇವೆ. ಒಂದೇ ದಿನ ಎಲ್ಲ ಬದಲಾವಣೆ ಉಂಟಾಗುವುದಿಲ್ಲ.ಸುರಂಗಮಾರ್ಗ,ಮೇಲ್ಸೇತುವೆ,ಕೆಳಸೇತುವೆಗಳನ್ನು ಹಂತಹಂತವಾಗಿ ಮಾಡಲಾಗುವುದು'ಎಂದು ಅವರು ಹೇಳಿದರು.

ಐಪಿಎಲ್ ರದ್ದು: 13ರಂದು ಮೆಟ್ರೊ ವಿಸ್ತರಣೆ ಇಲ್ಲ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಕ್ರಿಕೆಟ್ ಪಂದ್ಯ ನಿಗದಿಪಡಿಸಿದ್ದರಿಂದ ಮೇ 13ರಂದು ನಮ್ಮ ಮೆಟ್ರೊ ಅವಧಿಯನ್ನು ವಿಸ್ತರಿಸಲಾಗಿತ್ತು. ಪಂದ್ಯ ರದ್ದಾಗಿರುವುದರಿಂದ ಮೆಟ್ರೊ ಅವಧಿ ವಿಸ್ತರಣೆಯನ್ನು ರದ್ದುಪಡಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಐಪಿಎಲ್ ಕ್ರಿಕೆಟ್ ಇರುವ ದಿನಗಳಲ್ಲಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಲು ರಾತ್ರಿ 1.30ರವರೆಗೆ ರೈಲು ಸಂಚಾರ ವಿಸ್ತರಿಸಲು ನಿರ್ಧರಿಸಲಾಗಿತ್ತು. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಐಪಿಎಲ್ ಪಂದ್ಯಗಳನ್ನು ಮುಂದೂಡಿರುವುದರಿಂದ ನೇರಳೆ ಮತ್ತು ಹಸಿರು ಮಾರ್ಗಗಳಲ್ಲಿ ಎಂದಿನಂತೆ ಕೊನೇ ಮೆಟ್ರೊ ರೈಲುಗಳು ರಾತ್ರಿ 11.30ಕ್ಕೆ ಮೆಜೆಸ್ಟಿಕ್‌ನಿಂದ ನಾಲ್ಕು ಟರ್ಮಿನಲ್‌ಗಳ ಕಡೆಗೆ ಸಂಚರಿಸಲಿವೆ ಎಂದು ನಮ್ಮ ಮೆಟ್ರೊ ಅಧಿಕಾರಿಗಳು ತಿಳಿಸಿದ್ದಾರೆ.

ಖಗೋಳ ವೀಕ್ಷಣಾಲಯ ಉದ್ಘಾಟನೆ



ಉದ್ಘಾಟನಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಖಗೋಳ ವೀಕ್ಷಣಾಲಯದಲ್ಲಿದ್ದ ಟೆಲಿಸ್ಕೋಪ್ ವೀಕ್ಷಿಸಿದರು. ಗೋಕುಲ ಶಿಕ್ಷಣ ಪ್ರತಿಷ್ಠಾನದ (ಜಿಇಎಫ್)ಅಧ್ಯಕ್ಷ ಎಂ.ಆರ್. ಸೀತಾರಾಮ್ ಮತ್ತಿತರರು ಹಾಜರಿದ್ದರು

ಬೆಂಗಳೂರು: ನಗರದ ಎಂ.ಎಸ್. ರಾಮಯ್ಯ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿರುವ ಎಂ.ಎಸ್. ರಾಮಯ್ಯ ವಿದ್ಯಾನಿಕೇತನದಲ್ಲಿ 'ರಾಮಯ್ಯ ಖಗೋಳ ವೀಕ್ಷಣಾಲಯ' ವನ್ನು ಆರಂಭಿಸಲಾಗಿದ್ದು, ಇತ್ತೀಚೆಗೆ ಅದನ್ನು ಉದ್ಘಾಟಿಸಲಾಯಿತು.

ಇದು ಐದು ಮೀಟರ್ ಎತ್ತರದ ಬಾಹ್ಯಾಕಾಶ ವೀಕ್ಷಣಾಲಯವಾಗಿದೆ. ಇದರಲ್ಲಿ 12-ಇಂಚಿನ ಪ್ರತಿಫಲಕ (ರಿಫ್ಲೆಕ್ಟರ್) ಟೆಲಿಸ್ಕೋಪ್ ಇದೆ.

ಇತ್ತೀಚೆಗೆ ನಡೆದ ಖಗೋಳ ವೀಕ್ಷಣಾಲಯದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಗೋಕುಲ ಶಿಕ್ಷಣ ಪ್ರತಿಷ್ಠಾನದ (ಜಿಇಎಫ್) ಮುಖ್ಯ ಶೈಕ್ಷಣಿಕ ಸಲಹೆಗಾರ ಕರಿಸಿದ್ದಪ್ಪ, 'ವಿದ್ಯಾರ್ಥಿಗಳಿಗೆ ಬಾಹ್ಯಾಕಾಶದ ಬಗೆಗೆ ಅರಿವು ಮೂಡಿಸುತ್ತದೆ. ಮಾತ್ರವಲ್ಲ, ಖಗೋಳ ಕುರಿತು ಹೊಸ ವಿಚಾರ ತಿಳಿಯುವ ಉತ್ಸಾಹ ಮೂಡಿಸುತ್ತದೆ' ಎಂದರು.

ರಾಮಯ್ಯ ಖಗೋಳ ವೀಕ್ಷಣಾಲಯವು ಕೇವಲ ರಾಮಯ್ಯ ವಿದ್ಯಾನಿಕೇತನದ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಇತರ ಶಿಕ್ಷಣ ಸಂಸ್ಥೆಗಳೊಂದಿಗೆ ಸಂವಹನ ಕಾರ್ಯಕ್ರಮಗಳು ಮತ್ತು ಸಹಯೋಗಗಳಿಗೆ ಸಂಪನ್ಮೂಲವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಸಹ ಹೊಂದಿದೆ ಎಂದು ಶಾಲೆಯ ಪ್ರಾಚಾರ್ಯರಾದ ಶಾಂತಿ ಹೇಳಿದರು.

ಕಾರ್ಯಕ್ರಮದಲ್ಲಿ ಜಿಇಎಫ್ ಅಧ್ಯಕ್ಷ ಡಾ. ಎಂ.ಆರ್. ಸೀತಾರಾಮ್, ಉಪಾಧ್ಯಕ್ಷ ಎಂ.ಆರ್. ಜಾನಕಿರಾಮ್, ಕಾರ್ಯದರ್ಶಿ ಎಂ.ಆರ್. ಆನಂದ ರಾಮ್, ಸಿಎಫ್‌ಒ ಜಿ ರಾಮಚಂದ್ರ ಮತ್ತು ಸಿಇಒ ಪಾರ್ಶ್ವನಾಥ್ ಎಚ್.ವಿ. ಹಾಜರಿದ್ದರು.

ಎಸ್‌ಇಸಿಐ ಸಿಎಂಡಿ ಗುಪ್ತಾ ವಜಾ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಕೇಂದ್ರ ಸರ್ಕಾರವು ನಿವೃತ್ತ ಐಎಎಸ್ ಅಧಿಕಾರಿ ರಾಮೇಶ್ವರ ಪ್ರಸಾದ್ ಗುಪ್ತಾ ಅವರನ್ನು ಭಾರತೀಯ ಸೌರ ಶಕ್ತಿ ನಿಗಮದ (ಎಸ್‌ಇಸಿಐ) ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಹುದ್ದೆಯಿಂದ ವಜಾಗೊಳಿಸಿದೆ.

ಉದ್ಯಮಿ ಗೌತಮ್ ಅದಾನಿ ವಿರುದ್ಧ ಅಮೆರಿಕದಲ್ಲಿ ದಾಖಲಾಗಿರುವ ಲಂಚ ಪ್ರಕರಣಕ್ಕೂ ಈ ವಜಾಕ್ಕೂ ಸಂಬಂಧ ಇದೆ ಎಂದು ಕಾಂಗ್ರೆಸ್ ಹೇಳಿದೆ. ಅದಾನಿ 'ಹಗರಣ'ವನ್ನು ಮುಚ್ಚಿ ಹಾಕಲು ಸಾಧ್ಯವಿಲ್ಲ ಎಂದು ಹೇಳಿದೆ.

ಗುಪ್ತಾ ಅವರನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ವಜಾಗೊಳಿಸಲು ನೇಮಕಾತಿ ಕುರಿತ ಸಂಪುಟ ಸಮಿತಿಯು (ಎಸಿಸಿ) ಅನುಮೋದನೆ ನೀಡಿದೆ ಎಂದು ಕೇಂದ್ರ ಸಿಬ್ಬಂದಿ ಸಚಿವಾಲಯ ಆದೇಶದಲ್ಲಿ ಶನಿವಾರ ತಿಳಿಸಿದೆ. ಗುಪ್ತಾ ಅವರ ಅಧಿಕಾರಾವಧಿ ಪೂರ್ಣಗೊಳ್ಳಲು ಒಂದು ತಿಂಗಳು ಇರುವಾಗ ಈ ಬೆಳವಣಿಗೆ ನಡೆದಿದೆ.

'ಗೌತಮ್ ಅದಾನಿ ಮತ್ತು ಅವರ ಆಪ್ತರ ವಿರುದ್ಧದ ಆರೋಪ ಪಟ್ಟಿಯಲ್ಲಿ ಅಮೆರಿಕದ ಅಧಿಕಾರಿಗಳು ಎಸ್‌ಇಸಿಐ ವಿರುದ್ಧವೂ ದೋಷಾರೋಪಣೆ ಮಾಡಿದ್ದರು. ವಿವಿಧ ರಾಜ್ಯಗಳು ಅದಾನಿ ಜೊತೆ ಖರೀದಿ ಒಪ್ಪಂದ ಮಾಡಿಕೊಂಡಿದ್ದವು. ನಂತರ ಈ ಒಪ್ಪಂದಗಳಿಗೆ ಬದಲಾಗಿ ಭಾರತದ ಸರ್ಕಾರಿ ಅಧಿಕಾರಿಗಳಿಗೆ ₹2,029 ಕೋಟಿ ಲಂಚದ ಭರವಸೆ ನೀಡಲಾಗಿತ್ತು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಹೇಳಿದ್ದಾರೆ.

ಸೋಮನಹಳ್ಳಿ ಟೋಲ್: ಶುಲ್ಕ ವಸೂಲಿಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಿಂದ ಕನಕಪುರಕ್ಕೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ (948)ಯಲ್ಲಿನ ಸೋಮನಹಳ್ಳಿ ಟೋಲ್ ಪ್ಲಾಜಾದಲ್ಲಿ ಸ್ಥಳೀಯರಿಂದ ಶುಲ್ಕ ವಸೂಲು ಮಾಡಲಾಗುತ್ತಿದೆ ಎಂದು ರಾಜ್ಯ ರೈತ ಸಂಘ ಆರೋಪಿಸಿದೆ.

ಟೋಲ್‌ನಿಂದ 5 ಕಿ.ಮೀ.ಅಂತರದಲ್ಲಿರುವ ಸ್ಥಳೀಯರಿಂದ 60 ಕಿ.ಮೀ. ದೂರದ ಶುಲ್ಕವನ್ನೇ ವಸೂಲಿ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸೋಮನಹಳ್ಳಿ ಟೋಲ್ ಗೇಟ್‌ಗೆ ಹೊಂದಿಕೊಂಡಿರುವ ಕಗ್ಗಲೀಪುರ, ಸೋಮನಹಳ್ಳಿ, ನೆಲಗುಳಿ, ತರಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 15ಕ್ಕೂ ಹೆಚ್ಚು ಗ್ರಾಮಗಳಿದ್ದು, ಈ ಎಲ್ಲ ಗ್ರಾಮಸ್ಥರಿಗೆ ಕಗ್ಗಲೀಪುರ ಪ್ರಮುಖ ಕೇಂದ್ರವಾಗಿದೆ. ಗೂಡ್ಸ್ ವಾಹನಗಳೂ ಸೇರಿದಂತೆ ಸ್ಥಳೀಯರು ನಿತ್ಯದ ಕೆಲಸಕ್ಕಾಗಿ ಬೆಂಗಳೂರಿಗೆ ಬರುತ್ತಾರೆ. ಅವರಿಂದಲೂ ಟೋಲ್ ಪಡೆಯಲಾಗುತ್ತಿದ್ದು, ಹೊರೆಯಾಗಿ ಪರಿಣಮಿಸಿದೆ. ಸುತ್ತಮುತ್ತಲಿನ ಗ್ರಾಮಗಳು ಟೋಲ್ ಗೇಟ್‌ನಿಂದ 5 ಕಿ.ಮೀ. ದೂರದಲ್ಲಿವೆ. ಆಸ್ಪತ್ರೆ, ಪೊಲೀಸ್ ಠಾಣೆ, ಬ್ಯಾಂಕ್‌ಗಳು, ಪೆಟ್ರೋಲ್ ಬಂಕ್, ಮಾರುಕಟ್ಟೆ ಇದೆ. ಈ ಭಾಗದ ಗ್ರಾಮಸ್ಥರು ನಿತ್ಯ ಕೆಲಸಕ್ಕಾಗಿ ಕಗ್ಗಲೀಪುರಕ್ಕೆ ಬರುತ್ತಾರೆ. ರೈತರು ತಾವು ಬೆಳೆದ ತರಕಾರಿಗಳನ್ನು ಮಾರಾಟ ಮಾಡಲು ಕಗ್ಗಲೀಪುರ ಇಲ್ಲವೇ ಬೆಂಗಳೂರು ಮಾರುಕಟ್ಟೆ ಅವಲಂಬಿಸಿದ್ದಾರೆ. ಆದರೀಗ, ಇವರು ಟೋಲ್ ಶುಲ್ಕ ಪಾವತಿಸಬೇಕಿದೆ.

ನಡುರಸ್ತೆಯಲ್ಲೇ ಕಿರಿಕ್, ಎದುರಾಳಿಯ ಮೇಲೆ ಹಲ್ಲೆ • ವಾಹನಗಳ ಗಾಜು ಪುಡಿ

ರಸ್ತೆ ರಂಪಾಟ ಪ್ರಕರಣಗಳು ಹೆಚ್ಚಳ

• ಆದಿತ್ಯ ಕೆ.ಎ.

ಬೆಂಗಳೂರು: ರಾಜಧಾನಿಯಲ್ಲಿ ನಿತ್ಯ ರಸ್ತೆಗೆ ಇಳಿಯುತ್ತಿರುವ ವಾಹನಗಳ ಸಂಖ್ಯೆ ಹೆಚ್ಚಾದಂತೆಯೇ ರಸ್ತೆರಂಪಾಟ ಪ್ರಕರಣಗಳೂ ಏರಿಕೆ ಆಗಿವೆ.

ಸಣ್ಣಪುಟ್ಟ ವಿಚಾರಕ್ಕೂ ರಸ್ತೆಯಲ್ಲಿ ವಾಹನ ಸವಾರರ ನಡುವೆ ಗಲಾಟೆಗಳು ನಡೆಯುತ್ತಿವೆ. ಸಂಚಾರ ದಟ್ಟಣೆ, ಸ್ವಪ್ರತಿಷ್ಠೆಗಾಗಿ ರಸ್ತೆಯಲ್ಲಿ ವಾಹನ ಸವಾರರ ಮಧ್ಯೆ ಸಂಘರ್ಷಗಳು ನಡೆದು ಪ್ರಕರಣಗಳು ಪೊಲೀಸ್ ಠಾಣೆಯ ಮೆಟ್ಟಿಲೇರುತ್ತಿವೆ.

ಏಪ್ರಿಲ್ 21ರಂದು ಬೆಳಿಗ್ಗೆ 6 ಗಂಟೆಯ ಸುಮಾರಿಗೆ ಕೆಲಸಕ್ಕೆ ತೆರಳುತ್ತಿದ್ದ ವಾಹನ ಸವಾರ, ಕನ್ನಡಿಗ ಎಸ್.ಜೆ.ವಿಕಾಸ್ ಕುಮಾರ್ ಅವರ ಮೇಲೆ ವಾಯಪಡೆ ಕೋಲ್ಕತ್ತ ನೆಲೆಯ ವಿಂಗ್ ಕಮಾಂಡರ್ ಶಿಲಾದಿತ್ಯ ಬೋಸ್ ಅವರು ರಸ್ತೆಯಲ್ಲಿ ಹಲ್ಲೆ ನಡೆಸಿದ್ದ ಪ್ರಕರಣವು ರಾಜ್ಯದಲ್ಲಿ ದೊಡ್ಡ ಸದ್ದು ಮಾಡಿತ್ತು. ದ್ವಿಚಕ್ರ ವಾಹನ ಸವಾರನ ಮೇಲೆ ಶಿಲಾದಿತ್ಯ ಬೋಸ್ ಹಲ್ಲೆ ನಡೆಸಿದ್ದ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ಇದೇ ರೀತಿ ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳೆದ ತಿಂಗಳು 10ಕ್ಕೂ ಹೆಚ್ಚು ರಸ್ತೆ ರಂಪಾಟ ಪ್ರಕರಣಗಳು ವರದಿಯಾಗಿವೆ.

ಹೊರವಲಯದ ರಸ್ತೆಗಳು ಹಾಗೂ ಜಂಕ್ಷನ್‌ಗಳಲ್ಲಿ ರಾತ್ರಿ ವೇಳೆ ಪುಂಡರ ಹಾವಳಿ ಮಿತಿಮೀರಿದೆ.

ಉದ್ದೇಶಪೂರ್ವಕವಾಗಿಯೇ ಬೇರೆ ವಾಹನಗಳಿಗೆ ಬೈಕ್ ತಾಗಿಸಿ ಹಲ್ಲೆ ನಡೆಸಲಾಗುತ್ತಿದೆ. ಹಲ್ಲೆ ನಡೆಸಿದ ಬಳಿಕ ಕಾರು ಚಾಲಕರಿಂದ ಹಣ ಹಾಗೂ ಮೊಬೈಲ್ ಕಸಿದು ಕಿಡಿಗೇಡಿಗಳು ಪರಾರಿ ಆಗುತ್ತಿದ್ದಾರೆ. ಹಣ ದರೋಡೆ ಮಾಡುವ ಉದ್ದೇಶದಿಂದಲೇ ಏಕಮುಖ ಸಂಚಾರ ಮಾರ್ಗದಲ್ಲಿ ಬಂದು, ಎದುರಿನ ವಾಹನಕ್ಕೆ ತಾಗಿಸಿ ದರೋಡೆ ನಡೆಸಲಾಗುತ್ತಿದೆ.

ಈ ರೀತಿಯ ಘಟನೆಗಳಿಂದ ರಾತ್ರಿ ಪಾಳಿಯ ಉದ್ಯೋಗಸ್ಥರು, ವ್ಯಾಪಾರಿಗಳು, ಫುಡ್ ಡೆಲಿವರಿ ಮಾಡುವವರು, ಸ್ವಂತ ವಾಹನಗಳಲ್ಲಿ ಹೊರ ಊರುಗಳಿಂದ ರಾತ್ರಿ ವೇಳೆ ನಗರಕ್ಕೆ ಬರುವ ಪ್ರಯಾಣಿಕರು ಭೀತಿಗೆ ಒಳಗಾಗಿದ್ದಾರೆ.

'ರಸ್ತೆಯಲ್ಲಿ ಕರ್ಕಶ ಹಾರ್ನ್ ಮಾಡಿಕೊಂಡು ವಾಹನಗಳನ್ನು ಹಿಂದಿಕ್ಕುವುದು, ಮುಂದೆ ಚಲಿಸುತ್ತಿದ್ದ ವಾಹನದ ಸವಾರರು ಜಾಗ ಬಿಡದಿದ್ದರೆ ಅಂತಹ ವಾಹನವನ್ನು ಅಡ್ಡಗಟ್ಟಿ ಸವಾರರ ಮೇಲೆ ಹಲ್ಲೆ ಮಾಡುವುದು, ವಾಹನಕ್ಕೆ ಹಾನಿ ಮಾಡುವ ಪ್ರಕರಣಗಳು ನಗರದಲ್ಲಿ ನಡೆಯುತ್ತಿವೆ' ಎಂದು ಚಾಲಕರು ಆತಂಕ ವ್ಯಕ್ತಪಡಿಸಿದ್ದಾರೆ.

ಹಲ್ಲೆಗೆ ಕಾರಣಗಳು?

- ದಟ್ಟಣೆಯ ಪರಿಣಾಮ ದೀರ್ಘ ಸಮಯ ರಸ್ತೆಯಲ್ಲೇ ಕಳೆಯುವ ಸವಾರರು ತಾಳ್ಮೆ ಕಳೆದುಕೊಳ್ಳುತ್ತಾರೆ, ಎದುರು ವಾಹನದ ಚಾಲಕ ಸಣ್ಣತಪ್ಪು ಮಾಡಿದರೂ ಹಲ್ಲೆ ನಡೆಸುತ್ತಾರೆ
- ಬೇಗನೆ ಗಮ್ಯ ಸ್ಥಳಗಳಿಗೆ ತಲುಪಲು ವೇಗವಾಗಿ ವಾಹನ ಚಾಲನೆ ಮಾಡುತ್ತಾರೆ. ಆಗ ಹಾರ್ನ್ ಮಾಡುವುದು ಹಾಗೂ ಏಕಮುಖ ಸಂಚಾರ ಮಾರ್ಗದಲ್ಲಿ ವಾಹನ ಚಾಲನೆ ಮಾಡುವುದು ಸಹ ಗಲಾಟೆಗೆ ಕಾರಣ ಆಗುತ್ತಿದೆ
- ಅಪಘಾತದ ನೆಪವೊಡ್ಡಿ ಅಡ್ಡಗಟ್ಟಿ ಬೆದರಿಸಿ ಹಣ ದೋಚುತ್ತಾರೆ
- ಕೌಟುಂಬಿಕ ಸಮಸ್ಯೆ ಇದ್ದವರು ಅದೇ ಆಲೋಚನೆಯಲ್ಲಿ ವಾಹನ ಚಾಲನೆ ಮಾಡುತ್ತಿದ್ದಾಗ ಆಗುವ ಎಡವಟ್ಟಿನಿಂದಲೂ ರಂಪಾಟ ನಡೆಯುತ್ತಿದೆ



ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದಿದ್ದ ರಸ್ತೆ ರಂಪಾಟ ಪ್ರಕರಣದ ದೃಶ್ಯ

ಗಲಾಟೆ ದೃಶ್ಯವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕುವ ಬದಲು ಪೊಲೀಸ್ ಸಹಾಯವಾಣಿಗೆ ಕರೆ ಮಾಡಿದರೆ, ಹೊಯ್ಸಳ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ತಕ್ಷಣವೇ ಕ್ರಮ ಕೈಗೊಳ್ಳಲಿದ್ದಾರೆ

ಬಿ.ದಯಾನಂದ, ನಗರ ಪೊಲೀಸ್ ಕಮಿಷನರ್

ಕ್ಷೇಮ ಕುಶಲ



ಎದೆಯುರಿ, ಕಹಿ ಅಥವಾ ಹುಳಿತೇಗು, ಕೊಂಚ ಶ್ರಮದಿಂದಲೇ ಆಯಾಸ, ಸದಾಕಾಲ ಕಿರಿಕಿರಿ, ಕೆಡುವ ಬಾಯಿರುಚಿ, ಕುಗ್ಗುವ ಹಸಿವೆ - ಇವು ಆ್ಯಸಿಡಿಟಿಯ ಪ್ರಧಾನ ಲಕ್ಷಣಗಳು. ಜೀವನಶೈಲಿಯಲ್ಲಿ ಬದಲಾವಣೆ ಮಾಡಿಕೊಂಡರೆ ಇದನ್ನು ನಿಯಂತ್ರಿಸಲು ಸಾಧ್ಯ.

ಆಯುರ್ವೇದದಲ್ಲಿ ‘ಆ್ಯಸಿಡಿಟಿ’

ಡಾ. ಗೀತಾ ಸತ್ಯ

ಸುರೇಶ ಹೆತ್ತವರ ಅತಿ ಮುದ್ದು ಕಂದ. ಕೇವಲ ಐದರ ಹರೆಯ. ಕೊಂಚ ಸ್ಥೂಲಕಾಯ. ಮನೆತಿಂಡಿಗಳಿಗಿಂತ ಹೊರಗಿನ ತಿಂಡಿಗಳತ್ತ ಬಾಯಿ ಚಪಲ. ಬಿಡುವಿಲ್ಲದ ನಾಲಗೆ ಚಪಲ. ಅಪ್ಪ ಅಮ್ಮನಷ್ಟೆ ಅಲ್ಲ. ಅಜ್ಜಿ ತಾತನ ಕಾಳಜಿ ಬೇರೆ. ಹೀಗಾಗಿ ಬೆಳೆದ ಮೈ. ಮಲಪ್ರವೃತ್ತಿಗೆ ಮಾತ್ರ ಬಹಳ ಸಮಸ್ಯೆ. ವೈದ್ಯರ ಬಳಿಗೆ ಹೋದಾಗಲೆಲ್ಲ ಒಂದೇ ಉತ್ತರ. ಆತನ ನಾಲಗೆ ಚಪಲಕ್ಕೆ ಕಡಿವಾಣವಿರಲಿ. ತೂಕ ಇಳಿಸಿ. ಸರಿ ಹೋಗುವನು. ಇಷ್ಟು ಕಿರಿಹರೆಯದಲ್ಲಿಯೇ ಸುರೇಶನಿಗೆ ‘ಗ್ಯಾಸ್ಟ್ರಿಕ್’ (ಆ್ಯಸಿಡಿಟಿ) ಕಾಯಿಲೆ ಎಂಬ ಪಟ್ಟ. ಇಂದು ಇದು ಮನೆ ಮನೆ ಕತೆ.

ಆಯುರ್ವೇದವು ತ್ರಿದೋಷಗಳ ಸಿದ್ಧಾಂತದ ಅಸ್ತಿಭಾರದಲ್ಲಿ ನಿಂತ ಪ್ರಾಚೀನ ವೈದ್ಯಶಾಸ್ತ್ರ. ದೇಹದ ಹುಟ್ಟು, ಬೆಳವಣಿಗೆ, ದೇಹರಚನೆ ಮತ್ತು ಕ್ರಿಯಾವಿಜ್ಞಾನಗಳೆಲ್ಲ ಇದೇ ತಳಹದಿಯ ಮೇಲೆ ನಿಂತಿವೆ. ಪಿತ್ತವು ಎರಡನೆಯದು. ವಿಶ್ವದ ಸೂರ್ಯಶಕ್ತಿ, ಅಗ್ನಿತತ್ವದ ಪ್ರತೀಕ. ಸಕಲ ಜೀವಕೋಶಗಳ ಮೂಲತತ್ವ. ಹಸಿವೆ, ಜೀರ್ಣಪ್ರಕ್ರಿಯೆ ಮತ್ತು ರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜೆ ಹಾಗೂ ಶುಕ್ರ (ಸ್ತ್ರೀ ಬೀಜ ಆರ್ತವ) ಧಾತು, ಅಂದರೆ ಅಂಗಾಂಶಗಳ ಪೂರಣ, ನಿರ್ಮಿತಿ ಮತ್ತು ವಿನಾಶಗಳಿಗೂ ಮೂರು ತತ್ವಗಳೇ ಆಧಾರ. ಪಿತ್ತವು ಕೊಂಚ ಆಮ್ಲ ಅಂದರೆ ‘ಆ್ಯಸಿಡಿಕ್ ಪಿಎಚ್’ ಉಳ್ಳದ್ದು. ಅದು ಅತೀವ ಹೆಚ್ಚಿನ ಪಿಎಚ್ ಹೊಂದಿದರೆ ದೇಹದ ದಿನನಿತ್ಯದ ಕೆಲಸಕಾರ್ಯಗಳಿಗೆ ವ್ಯತ್ಯಯ; ಕಾಯಿಲೆಗಳತ್ತ ದಾರಿ.

ಈಗ ಸುರೇಶನ ಮೈಯಲ್ಲಿ ಮೇದೋಧಾತು ಮಾತ್ರ ಸಂಚಯ. ಅನಂತರದ ಮೂಳೆ, ಮಜ್ಜೆ ಮತ್ತು ಅಂತಿಮ ಧಾತು ಉತ್ಪತ್ತಿಗೆ ಸಂಚಕಾರ.

ತನ್ನನ್ನು ತಾನೇ ಹೆಚ್ಚು ಸುಡುವ ಗುಣದ ಪಿತ್ತವೇ ಆಮ್ಲಪಿತ್ತ. ಎದೆಯುರಿ, ಕಹಿ ಅಥವಾ ಹುಳಿತೇಗು, ಕೊಂಚ ಶ್ರಮದಿಂದಲೇ ಆಯಾಸ, ಸದಾಕಾಲ ಕಿರಿಕಿರಿ, ಕೆಡುವ ಬಾಯಿರುಚಿ, ಕುಗ್ಗುವ ಹಸಿವೆಗಳಂತಹವು ಪ್ರಧಾನ ಲಕ್ಷಣಗಳು. ಮಲಪ್ರವೃತ್ತಿಗೆ ತುಂಬ ಸಮಸ್ಯೆ. ಆದರೂ ಒಂದೇ ಬಾರಿಗೆ ಹೊರ ಹಾಕಲಾಗದ ಸ್ಥಿತಿ. ಪದೇ ಪದೇ ತೆರಳುವ ಸಮಸ್ಯೆ.

ಸುರೇಶನದು ಕುರುಕು ತಿಂಡಿಯನ್ನು ಪದೇ ಪದೇ ತಿನ್ನುವ ಚಪಲವೇ ಕಾರಣ ಎಂದಾಯಿತು. ತಂಬಾಕುಸೇವನೆಯ ಯಾವುದೇ ಪ್ರಕಾರವೂ ಆಮ್ಲಪಿತ್ತದ ಮೂಲಕಾರಣ. ಪದೇ ಪದೇ ಹತ್ತಾರು ಬಾರಿ ಕುಡಿಯುವ ಕಾಫಿ ಚಹಾದಂಥ ಉತ್ತೇಜಕ ಪಾನೀಯಗಳು, ಬಾಟಲೀಕರಿಸಿದ ದ್ರವಗಳು, ಮದ್ಯದ ಚಟವೂ ಆಮ್ಲಪಿತ್ತಕ್ಕೆ ಕಾರಣ. ಎಲ್ಲಕ್ಕಿಂತ ಮಿಗಿಲಾಗಿ ತಾಸುಗಟ್ಟಲೆ ಕುಳಿತು ಮಾಡುವ ಕಾಯಕವೂ ಈ ಸಮಸ್ಯೆಗೆ ಕಾರಣ. ಕಚೇರಿಗಳಲ್ಲಿ ಮತ್ತು ಅಹರ್ನಿಶಿ ಗಣಕಯಂತ್ರದ ಮುಂದೆ ತಾಸುಗಟ್ಟಲೆ ಕುಳಿತ ದುಡಿಮೆ ಹೊಸಪೀಳಿಗೆಯ ಕಾಯಿಲೆಯ ರಹದಾರಿ. ತಾಸುಗಟ್ಟಲೆ ‘ಜಿಮ್’ ಕೈಗೊಳ್ಳುವುದೂ ಕಾಯಿಲೆಯ ಕಾರಣವಾದೀತು. ಒಂದೇ ಮಾತಿನ ಚಿಕಿತ್ಸೆ ಎಂದರೆ ರೋಗದ ಕಾರಣಗಳನ್ನು ದೂರ ಮಾಡಿರಿ. ಮೇಲಿನ ಉದ್ದನೆಯ ಪಟ್ಟಿಯಲ್ಲಿ ನಿಮ್ಮ ಸಮಸ್ಯೆಯ ಮೂಲ ತಿಳಿಯಿರಿ. ಅದರಿಂದ ದೂರವಾಗಿರಿ. ಇದೇ ಜೀವನಶೈಲಿಯ ಬದಲಾವಣೆ.

ಬಸಳೆಸೊಪ್ಪು, ಬಾಳೆಹಣ್ಣು ಪಿಎಚ್ ಕೊಂಚ ಕ್ಷಾರೀಯತೆಯದು. ಇವು ರೋಗದ ತಡೆಗೆ ಪೂರಕ. ಬೆಣ್ಣೆಯನ್ನು ತೆಗೆದ ಮಜ್ಜಿಗೆಯನ್ನು ಧಾರಾಳ ಬಳಸಿರಿ. ಆಯುರ್ವೇದವು ಇದನ್ನು ಅಮೃತ ಎನ್ನುತ್ತದೆ. ಸಪ್ಪೆ ಇರಲಿ, ಹುಳಿ ಬೇಡ; ಶೀತಲೀಕರಿಸಿದ್ದೂ ಸಲ್ಲದು. ಈರುಳ್ಳಿಯ ಸತತ ಸೇವನೆಯಿಂದ ಮಲಪ್ರವೃತ್ತಿಗೆ ಉಪಕಾರ. ಬೂದುಗುಂಬಳ, ಸೋರೆಕಾಯಿ, ಸಂಬಾರ ಸೌತೆಯಂತಹ ತರಹೇವಾರಿ ಬಳ್ಳಿಯ ತರಕಾರಿಗಳ ಸೇವನೆಯಿಂದ ಸಹಕಾರ. ಒತ್ತಡರಹಿತ ಜೀವನ ನಿಮ್ಮದಾಗಲಿ. ಕಾಲಕ್ಕೆ ಸರಿಯಾದ ವಿಶ್ರಾಂತಿ–ನಿದ್ರೆಗಳು ಬೇಕು. ಶಿಸ್ತುಬದ್ಧ ಆಹಾರಕಾಲದ ಪಾಲನೆ ಕೂಡ ಅತ್ಯಗತ್ಯ. ‘ಹಸಿದು ಹಸಿದಿರ ಬೇಡ, ಹಸಿಯದಿರೆ ಉಣಬೇಡ, ಬಿಸಿ ಬೇಡ, ತಂಗೂಳನುಣಬೇಡ, ವೈದ್ಯನಾ ಬೇಸನವೆ ಬೇಡ ಸರ್ವಜ್ಞ’!



ಆ್ಯಂಟಿಬಯಾಟಿಕ್ ತಪ್ಪು –ಒಪ್ಪು

ಡಾ. ಕಿರಣ್ ವಿ. ಎಸ್.

ಆರೋಗ್ಯಕ್ಷೇತ್ರದಲ್ಲಿ ಇಪ್ಪತ್ತನೆಯ ಶತಮಾನದ ಅತ್ಯಂತ ಮಹತ್ವದ ಸಾಧನೆ ಎಂದರೆ ಆ್ಯಂಟಿಬಯಾಟಿಕ್ ಔಷಧಗಳ ಆವಿಷ್ಕಾರ. ಎರಡನೆಯ ಮಹಾಯುದ್ಧದ ಸಮಯದಲ್ಲಿ ಸೋಂಕುಗಳ ಚಿಕಿತ್ಸೆಗೆ ಪ್ರಾಯೋಗಿಕವಾಗಿ ಲಭ್ಯವಾದ ‘ಪೆನಿಸಿಲಿನ್’ ಎಂಬ ಆ್ಯಂಟಿಬಯಾಟಿಕ್, ಔಷಧವಿಜ್ಞಾನದ ಮಹಾಸಂಕ್ರಮಣವೊಂದಕ್ಕೆ ನಾಂದಿ ಹಾಡಿತು. ನೂರಾರು ಬಗೆಯ ಆ್ಯಂಟಿಬಯಾಟಿಕ್ ಔಷಧಗಳು ಈಗ ಲಭ್ಯವಿವೆ. ಇಂದಿಗೂ ಪ್ರತಿದಿನವೂ ಸಾವಿರಾರು ಪ್ರಾಣಗಳು ಆ್ಯಂಟಿಬಯಾಟಿಕ್ ಔಷಧಗಳ ನೆರವಿನಿಂದ ಉಳಿಯುತ್ತಿವೆ.

ಆ್ಯಂಟಿಬಯಾಟಿಕ್ ಔಷಧಗಳಿಗೆ ವ್ಯತಿರಿಕ್ತ ಪರಿಣಾಮಗಳೂ ಇವೆ. ಶರೀರದ ಮೇಲೆ ಅವುಗಳ ದುಷ್ಪರಿಣಾಮಗಳೂ ಸಾಕಷ್ಟಿವೆ. ಹೊಟ್ಟೆ ತೊಳಸುವುದು, ವಾಂತಿ, ಭೇದಿ, ತಲೆಸುತ್ತು, ರಕ್ತಕೋಶಗಳ ವ್ಯತ್ಯಯ, ಸುಸ್ತು, ಹಸಿವಾಗದಿರುವುದು ಮೊದಲಾದ ಅಡ್ಡಪರಿಣಾಮಗಳು ಆ್ಯಂಟಿಬಯಾಟಿಕ್ ಔಷಧಗಳನ್ನು ಸೇವಿಸುವ ಬಹಳಷ್ಟು ಜನರಲ್ಲಿ ಕಾಣುತ್ತವೆ. ಕೆಲವು ಆ್ಯಂಟಿಬಯಾಟಿಕ್ ಔಷಧಗಳು ಕೆಲವು ನಿರ್ದಿಷ್ಟ ವ್ಯಕ್ತಿಗಳಲ್ಲಿ ತೀವ್ರವಾದ ಅಲರ್ಜಿ ಪ್ರತಿಕ್ರಿಯೆಯ ಮೂಲಕ ಪ್ರಾಣಾಪಾಯವನ್ನೂ ಉಂಟುಮಾಡಬಲ್ಲವು. ಎಗ್ಗಿಲ್ಲದೆ ಬಳಸುವ ಆ್ಯಂಟಿಬಯಾಟಿಕ್ ಔಷಧಗಳ ವಿರುದ್ಧ ಬ್ಯಾಕ್ಟೀರಿಯಾದಂಥ ಸೋಂಕುಕಾರಕ ಜೀವಿಗಳು ಪ್ರತಿರೋಧ ಬೆಳೆಸಿಕೊಳ್ಳಬಲ್ಲವು. ಇದರಿಂದ ಆ್ಯಂಟಿಬಯಾಟಿಕ್ ಔಷಧದ ಪರಿಣಾಮ ಕುಗ್ಗಿ, ಕೆಲಸಕ್ಕೆ ಬಾರದಂತಾಗುತ್ತದೆ. ಹೀಗಾಗಿ, ಆ್ಯಂಟಿಬಯಾಟಿಕ್ ಔಷಧಗಳ ಬಳಕೆಯ ಬಗ್ಗೆ ಕಟ್ಟೆಚ್ಚರ ಇರಬೇಕು. ಆ್ಯಂಟಿಬಯಾಟಿಕ್ ಔಷಧಗಳ ವಿರುದ್ಧ ಬ್ಯಾಕ್ಟೀರಿಯಾಗಳು ಪ್ರತಿರೋಧ ಬೆಳೆಸಿಕೊಳ್ಳುವುದು ನಮ್ಮ ಕಾಲಘಟ್ಟದ ಅತ್ಯಂತ ಗಂಭೀರ ಸಮಸ್ಯೆಯಾಗುತ್ತಿದೆ. ಜಗತ್ತಿನ ಯಾವ ದೇಶವೂ ಇದನ್ನು ನಿರ್ಲಕ್ಷ್ಯ ಮಾಡುವಂತಿಲ್ಲ. ಇಂಥ ಪ್ರತಿರೋಧದ ಬಗ್ಗೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳದಿದ್ದರೆ 2050ರ ವೇಳೆಗೆ ವಾರ್ಷಿಕವಾಗಿ ಸುಮಾರು ಒಂದು ಕೋಟಿ ಮಂದಿ ಚಿಕಿತ್ಸೆಯ ನಿಯಂತ್ರಣಕ್ಕೆ ಸಿಗದ ಸೋಂಕುಗಳಿಗೆ ಬಲಿಯಾಗುತ್ತಾರೆ ಎಂಬ ಆಘಾತಕಾರಿ ಅಂಶ ವ್ಯವಸ್ಥಿತ ಅಧ್ಯಯನಗಳ ಮೂಲಕ ಬೆಳಕಿಗೆ ಬಂದಿದೆ.



ಪರಿಣಾಮಕಾರಿ ಕ್ರಮಗಳು

ತಾರ್ಕಿಕ ಆಲೋಚನೆಯ ಪ್ರಕಾರ ನಿರುಪಯುಕ್ತ ಔಷಧದ ಸ್ಥಾನದಲ್ಲಿ ಹೊಸ ಆ್ಯಂಟಿಬಯಾಟಿಕ್ ಔಷಧದ ಆವಿಷ್ಕಾರ ಆಗಬೇಕು. ಇದು ಸುಲಭದ ಮಾತಲ್ಲ. ಔಷಧ ಆವಿಷ್ಕರಣದ ನಿಯಮಗಳು ವಿಪರೀತ ಕಠಿಣ. ಸುರಕ್ಷತೆಯ ದೃಷ್ಟಿಯಿಂದ ಕಟ್ಟುನಿಟ್ಟಿನ ವಿಷಯದಲ್ಲಿ ರಾಜಿಯಾಗುವ ಮಾತಿಲ್ಲ. ಹೀಗಾಗಿ ಆ್ಯಂಟಿಬಯಾಟಿಕ್ ಔಷಧಗಳ ಆವಿಷ್ಕರಣದ ಪ್ರಕ್ರಿಯೆ ಬಹಳ ದುಬಾರಿಯೂ ದೀರ್ಘಕಾಲಿಕವೂ ಆಗುತ್ತದೆ. ಹೊಸದೊಂದು ಆ್ಯಂಟಿಬಯಾಟಿಕ್ ಔಷಧವನ್ನು ಪತ್ತೆ ಮಾಡಲು ಸುಮಾರು 10-15 ವರ್ಷಗಳ ಕಾಲ ಹಿಡಿಯುತ್ತದೆ. ಇದಕ್ಕೆ ಆಗುವ ಖರ್ಚು ಸುಮಾರು ಒಂದು ಬಿಲಿಯನ್ ಡಾಲರ್ (ಸುಮಾರು ₹ 8500 ಕೋಟಿ). ಇಷ್ಟು ಖರ್ಚು ಮತ್ತು ಕಾಲವನ್ನು ವ್ಯಯಿಸುವುದು ಕೆಲವೇ ದೈತ್ಯ ಔಷಧ ಕಂಪನಿಗಳಿಗೆ ಮಾತ್ರ ಸಾಧ್ಯ. ಹೀಗಿರುವಾಗ, ಇನ್ನು ಇಪ್ಪತ್ತೈದು ವರ್ಷಗಳಲ್ಲಿ ಎಷ್ಟು ಹೊಸ ಆ್ಯಂಟಿಬಯಾಟಿಕ್ ಔಷಧಗಳು ಮಾರುಕಟ್ಟೆಯಲ್ಲಿ ಲಭ್ಯವಾಗಲು ಸಾಧ್ಯ? ದುಬಾರಿ ಬೆಲೆಯನ್ನು ತೆತ್ತು ಅವುಗಳನ್ನು ಖರೀದಿಸಲು ಎಷ್ಟು ಜನರಿಗೆ ಚೈತನ್ಯ ಇದ್ದೀತು? ಅದನ್ನು ಜನರು ದುರುಪಯೋಗ ಪಡಿಸಿಕೊಂಡು, ಪ್ರತಿರೋಧ ಬೆಳೆಯುವಂತೆ ಮಾಡಿ ಹಾಳುಗೆಡವುದಿಲ್ಲವೆಂಬ ಖಾತ್ರಿ ಏನು? ತತ್ಕಾರಣ, ತಾರ್ಕಿಕವಾದರೂ ಇದು ಸಮರ್ಥವಾದ ಆಯ್ಕೆಯಲ್ಲ.

ಆ್ಯಂಟಿಬಯಾಟಿಕ್ ಔಷಧಗಳನ್ನು ಜತನದಿಂದ ಬಳಸುವುದು ಮತ್ತೊಂದು ದಾರಿ. ಇದು ಕೇವಲ ನಿಯಮಗಳಿಂದ ಸಾಧ್ಯವಾಗುವ ಮಾತಲ್ಲ. ಪ್ರಗತಿಶೀಲ ದೇಶಗಳಲ್ಲಿ ಜನಸಾಮಾನ್ಯರಿಗೆ ಅನ್ವಯವಾಗುವ ಆರೋಗ್ಯಸಂಬಂಧಿ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದು ಬಹಳ ಕಷ್ಟ. ಇಂತಹ ನಿಯಮಗಳು ಫಲಕಾರಿಯಾಗಲು ಸಮಷ್ಟಿಯ ಶಿಸ್ತು ಅಗತ್ಯವಾಗುತ್ತದೆ. ನಮ್ಮ ದೇಶವನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ, ಔಷಧಗಳನ್ನು ಮಾರಾಟ ಮಾಡುವ ಮಳಿಗೆಗಳು ವೈದ್ಯರ ಸಲಹೆಯ ಚೀಟಿ ಇಲ್ಲದೆ ಯಾವುದೇ ಆ್ಯಂಟಿಬಯಾಟಿಕ್ ಔಷಧವನ್ನಾದರೂ ಮಾರಾಟ ಮಾಡುತ್ತವೆ. ವೈದ್ಯರು ಯಾವಾಗಲೋ ಯಾವುದೋ ಅಸೌಖ್ಯಕ್ಕೆ ಬರೆದು ಕೊಟ್ಟಿದ್ದ ಔಷಧಗಳನ್ನು ಪುನಃ ಖರೀದಿಸಿ, ಪ್ರತಿಯೊಂದು ಕಾಯಿಲೆಗೂ ಬಳಸುವ ಜನರಿದ್ದಾರೆ. ಜೊತೆಗೆ, ಆ್ಯಂಟಿಬಯಾಟಿಕ್ ಔಷಧಗಳ ಬಗ್ಗೆ ತಮ್ಮ ವ್ಯಾಸಂಗದಲ್ಲಿ ಅಧ್ಯಯನವನ್ನೇ ಮಾಡದ ವೈದ್ಯಪದ್ಧತಿಯವರೂ ಮುಕ್ತವಾಗಿ ಅವುಗಳನ್ನು ಸೇವಿಸುವ ಅಧಿಕೃತ ಸಲಹೆಗಳನ್ನು ನೀಡುತ್ತಾರೆ.

ಆಸ್ಪತ್ರೆಗಳು ರೋಗಿಗಳನ್ನು ಶೀಘ್ರವಾಗಿ ಗುಣಪಡಿಸುವ ಉದ್ದೇಶದಿಂದ ಕಡಿಮೆ ಶಕ್ತಿಯ ಆ್ಯಂಟಿಬಯಾಟಿಕ್ ಔಷಧಗಳನ್ನು ಹೆಚ್ಚು ಕಾಲ ನೀಡುವ ಬದಲಿಗೆ, ಹೆಚ್ಚು ಶಕ್ತಿಯ ಆ್ಯಂಟಿಬಯಾಟಿಕ್ ಔಷಧಗಳನ್ನು ಕಡಿಮೆ ಕಾಲ ನೀಡುವ ಅಪಾಯಕಾರಿ ಪದ್ಧತಿಗಳನ್ನು ಪಾಲಿಸುತ್ತವೆ. ಮುಂದುವರಿದ ದೇಶಗಳಲ್ಲಿ ಜನರ ಆರೋಗ್ಯದ ಹೊಣೆಯನ್ನು ಸರ್ಕಾರ ವಹಿಸುತ್ತದೆ. ಅಲ್ಲಿನ ಚಿಕಿತ್ಸೆಗಳಿಗೆ ತಜ್ಞಸಮಿತಿಗಳನ್ನು ರಚಿಸಿರುವ ಕಟ್ಟುನಿಟ್ಟಿನ ನಿಯಮಾವಳಿಗಳು ಇರುತ್ತವೆ. ಯಾವುದಾದರೂ ನಿಯಮವನ್ನು ಉಲ್ಲಂಘಿಸಿದರೆ ವಿಚಾರಣೆಗೆ ಒಳಗಾಗಬೇಕಾಗುತ್ತದೆ. ಆದರೆ ನಮ್ಮಂಥ ಬಹುತೇಕ ಅಭಿವೃದ್ಧಿಶೀಲ ದೇಶಗಳಲ್ಲಿ ಜನಸಾಮಾನ್ಯರ ಆರೋಗ್ಯದ ಬಗ್ಗೆ ಸರ್ಕಾರ ಜವಾಬ್ದಾರಿ ವಹಿಸುವುದಿಲ್ಲ. ಆರೋಗ್ಯದ ಹೊಣೆಗಾರಿಕೆ ಜನರ ಸ್ವಂತದ್ದೇ ಆಗಿರುತ್ತದೆ.

ಇದರಲ್ಲಿ ಖಾಸಗಿ ಆಸ್ಪತ್ರೆಗಳ ಪಾರುಪತ್ಯ ಹೆಚ್ಚು. ಜವಾಬ್ದಾರಿಯಿಂದ ವಿಮುಖವಾದ ವ್ಯವಸ್ಥೆಗೆ ಯಾವುದೇ ನಿಯಮವನ್ನೂ ಕಟ್ಟುನಿಟ್ಟಾಗಿ ಜಾರಿ ಮಾಡುವ ನೈತಿಕತೆ ಇಲ್ಲವಾಗುತ್ತದೆ. ಆ್ಯಂಟಿಬಯಾಟಿಕ್‌’ಗಳನ್ನು ಬೇಕಾಬಿಟ್ಟಿ ಉಪಯೋಗಿಸುವುದರ ದುಷ್ಪರಿಣಾಮಗಳನ್ನು ಇಡೀ ಪ್ರಪಂಚ ಅನುಭವಿಸಬೇಕಾಗುತ್ತದೆ. ಆ್ಯಂಟಿಬಯಾಟಿಕ್ ಬಳಕೆಯಲ್ಲಿ ಸಂಯಮ ಮತ್ತು ನಿಯಮಪಾಲನೆ ಸುರಕ್ಷೆಯ ಪ್ರಬಲವಾದ ಮಾರ್ಗವಾದರೂ, ಅದನ್ನು ಆಚರಣೆಗೆ ಯುಕ್ತವಾಗುವಂತೆ ಜಾರಿಗೊಳಿಸುವುದು ತೀರಾ ಕಷ್ಟ.

ಆಹಾರ, ನೈರ್ಮಲ್ಯ, ಶಿಸ್ತುಬದ್ಧ ಜೀವನಗಳು ಆರೋಗ್ಯರಕ್ಷಣೆಯ ಪ್ರಮುಖ ಭಾಗಗಳು. ಆರೋಗ್ಯವೆನ್ನುವುದು ಕಾಯಿಲೆ ಬಂದ ನಂತರ ಅದನ್ನು ಗುಣಪಡಿಸುವುದು ಮಾತ್ರವಲ್ಲ; ಕಾಯಿಲೆ ಬಾರದಂತೆ ಸಂರಕ್ಷಿಸಿಕೊಳ್ಳುವುದು ಕೂಡ. ಲಭ್ಯವಿರುವ ಆ್ಯಂಟಿಬಯಾಟಿಕ್‌’ಗಳ ಸತ್ಪರಿಣಾಮಗಳು ನಮ್ಮ ಮುಂದಿನ ಪೀಳಿಗೆಗೂ ಲಭ್ಯವಾಗುವಂತೆ ಮಾಡುವುದು ನಮ್ಮೆಲ್ಲರ ಸಂಘಟಿತ ಜವಾಬ್ದಾರಿ.


ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಬಹುಪದೋಕ್ತಿಗಳು

ಅಭ್ಯಾಸ 2.1

$y=P(x)$ ದ ನಕ್ಷೆಗಳನ್ನು ಕೆಳಗೆ ಚಿತ್ರ 2.10ರಲ್ಲಿ ನೀಡಿದ್ದು $P(x)$ ಇಲ್ಲಿ ಎಂಬುದು ಬಹುಪದೋಕ್ತಿಯಾಗಿದೆ. ಪ್ರತಿ ಸಂದರ್ಭದಲ್ಲಿಯೂ $P(x)$ ದ ಶೂನ್ಯತೆಗಳ ಸಂಖ್ಯೆಯನ್ನು ಕಂಡುಹಿಡಿಯಿರಿ



ಉತ್ತರ:–(1) ನಕ್ಷೆಯು x –ಅಕ್ಷವನ್ನು ಯಾವುದೇ ಬಿಂದುವಿನಲ್ಲಿ ಛೇದಿಸುವುದಿಲ್ಲ, ಆದ್ದರಿಂದ ಶೂನ್ಯತೆಗಳ ಸಂಖ್ಯೆ 0 ಆಗಿದೆ

2) ನಕ್ಷೆಯು x –ಅಕ್ಷವನ್ನು ಒಂದು ಬಿಂದುವಿನಲ್ಲಿ ಛೇದಿಸುವುದರಿಂದ ಶೂನ್ಯತೆಗಳ ಸಂಖ್ಯೆ 1 ಆಗಿದೆ

3) ನಕ್ಷೆಯು x –ಅಕ್ಷವನ್ನು 3 ಬಿಂದುಗಳಲ್ಲಿ ಛೇದಿಸುವುದರಿಂದ ಆದ್ದರಿಂದ ಶೂನ್ಯತೆಗಳ ಸಂಖ್ಯೆ 3 ಆಗಿದೆ

4) ನಕ್ಷೆಯು x –ಅಕ್ಷವನ್ನು ಎರಡು ಬಿಂದುಗಳಲ್ಲಿ ಛೇದಿಸುವುದರಿಂದ ಆದ್ದರಿಂದ ಶೂನ್ಯತೆಗಳ ಸಂಖ್ಯೆ 2 ಆಗಿದೆ

5) ನಕ್ಷೆಯು x –ಅಕ್ಷವನ್ನು 4 ಬಿಂದುಗಳಲ್ಲಿ ಛೇದಿಸುವುದರಿಂದ ಆದ್ದರಿಂದ ಶೂನ್ಯತೆಗಳ ಸಂಖ್ಯೆ 4 ಆಗಿದೆ

6) ನಕ್ಷೆಯು x –ಅಕ್ಷವನ್ನು 3 ಬಿಂದುಗಳಲ್ಲಿ ಛೇದಿಸುವುದರಿಂದ ಆದ್ದರಿಂದ ಶೂನ್ಯತೆಗಳ ಸಂಖ್ಯೆ 3 ಆಗಿದೆ

ಬಹುಪದೋಕ್ತಿಯ ಶೂನ್ಯತೆಗಳು ಹಾಗೂ ಸಹಗುಣಕಗಳ ನಡುವಿನ ಸಂಬಂಧ

*) α ಮತ್ತು β ಗಳು ax^2+bx+c ಎಂಬ ಒಂದು ವರ್ಗ ಬಹುಪದೋಕ್ತಿಯ ಶೂನ್ಯತೆಗಳಾದರೆ ಆಗ $\alpha+\beta=\frac{-b}{a}$ ಮತ್ತು $\alpha\beta=\frac{c}{a}$ ಆಗಿರುತ್ತದೆ.

*) ಸಾಮಾನ್ಯವಾಗಿ, α, β, γ ಗಳು ax^3+bx^2+cx+d ಎಂಬ ಘನ ಬಹುಪದೋಕ್ತಿಯ ಶೂನ್ಯತೆಗಳಾದರೆ, ಆಗ,

$$\alpha+\beta+\gamma=\frac{-b}{a},$$
$$\alpha\beta+\beta\gamma+\gamma\alpha=\frac{c}{a},$$
$$\alpha\beta\gamma=\frac{-d}{a}.$$

ಸಮಸ್ಯೆ ಮತ್ತು ಪರಿಹಾರ

1) $x^2+7x+10$ ಎಂಬ ವರ್ಗ ಬಹುಪದೋಕ್ತಿಯ ಶೂನ್ಯತೆಗಳನ್ನು ಕಂಡುಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ

ಪರಿಹಾರ: $x^2+7x+10 = x^2+5x+2x+10$
$= x(x+5)+2(x+5)$
$= (x+2)(x+5)$

$\therefore x+2=0$ ಅಥವಾ $x+5=0$ ಆದಾಗ, ಅಂದರೆ $x=-2$ ಅಥವಾ $x=-5$ ಆದಾಗ $x^2+7x+10$ ರ ಬೆಲೆಯು ಸೊನ್ನೆಯಾಗುತ್ತದೆ. ಆದ್ದರಿಂದ, -2 ಮತ್ತು -5 ಇವು $x^2+7x+10$ ರ ಶೂನ್ಯತೆಗಳಾಗಿವೆ.

ಈಗ, ಶೂನ್ಯತೆಗಳ ಮೊತ್ತ $= (-2)+(-5) = -7 = \frac{-(7)}{1} = \frac{-(x \text{ ದ ಸಹಗುಣಕ})}{x^2 \text{ ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ $= (-2)\times(-5) = 10 = \frac{10}{1} = \frac{\text{ಸ್ಥಿರಾಂಕ}}{x^2 \text{ ದ ಸಹಗುಣಕ}}$

2) x^2-3 ಎಂಬ ವರ್ಗ ಬಹುಪದೋಕ್ತಿಯ ಶೂನ್ಯತೆಗಳನ್ನು ಕಂಡುಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ

ಉದಾಹರಣೆ 3: x^2-3 ಎಂಬ ಬಹುಪದೋಕ್ತಿಯ ಶೂನ್ಯತೆಗಳನ್ನು ಕಂಡುಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ.

ಪರಿಹಾರ: $a^2-b^2=(a-b)(a+b)$ ಎಂಬ ನಿತ್ಯಸಮೀಕರಣವನ್ನು ಸ್ಮರಿಸಿಕೊಳ್ಳಿ,

$\therefore x^2-3=(x-\sqrt{3})(x+\sqrt{3})$

ಆದ್ದರಿಂದ, $x=\sqrt{3}$ ಅಥವಾ $x=-\sqrt{3}$ ಆದಾಗ x^2-3 ರ ಬೆಲೆಯು ಸೊನ್ನೆಯಾಗುತ್ತದೆ

ಆದ್ದರಿಂದ, $\sqrt{3}$ ಮತ್ತು $-\sqrt{3}$ ಇವು x^2-3 ರ ಶೂನ್ಯತೆಗಳಾಗಿವೆ.

ಈಗ, ಶೂನ್ಯತೆಗಳ ಮೊತ್ತ $= \sqrt{3}-\sqrt{3} = 0 = \frac{-(x \text{ ದ ಸಹಗುಣಕ})}{x^2 \text{ ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ $= (\sqrt{3})(-\sqrt{3}) = -3 = \frac{-3}{1} = \frac{\text{ಸ್ಥಿರಾಂಕ}}{x^2 \text{ ದ ಸಹಗುಣಕ}}$

ಅಭ್ಯಾಸ 2.2

1) ಈ ಕೆಳಗಿನ ವರ್ಗ ಬಹುಪದೋಕ್ತಿಗಳ ಶೂನ್ಯತೆಗಳನ್ನು ಕಂಡುಹಿಡಿಯಿರಿ ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ ದ ಸಹಗುಣಕ

(i) x^2-2x-8 (ii) $4s^2-4s+1$ (iii) $6x^2-3-7x$

(iv) $4u^2+8u$ (v) t^2-15 (vi) $3x^2-x-4$

ಪರಿಹಾರ:–(1) $x^2-4x+2x-8 = x(x-4)+2(x-4)$
$= (x-4)(x+2)$

$P(x)=0$

$(x-4)(x+2)=0$
$(x-4)=0 \Rightarrow x=4$
$(x+2)=0 \Rightarrow x=-2$

$x^2-4x+2x-8$ ರ ಶೂನ್ಯತೆಗಳು 4 ಮತ್ತು -2

ಶೂನ್ಯತೆಗಳ ಮೊತ್ತ $= 4+(-2) = \frac{-(-2)}{+1}$

$= \frac{-(x \text{ ದ ಸಹಗುಣಕ})}{x^2 \text{ ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ $= 4(-2) = \frac{-8}{+1}$

$= \frac{\text{ಸ್ಥಿರಾಂಕ}}{x^2 \text{ ದ ಸಹಗುಣಕ}}$

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

PUC: PHYSICS

Chapter – 1

ELECTRIC CHARGES AND FIELDS


MULTIPLE CHOICE QUESTIONS

3. A point charge +q, is placed at a distance d from an isolated conducting plane. The field at a point p on the other side of the plane is……………..

a) directed perpendicular to the plane and away from the plane.
b) directed perpendicular to the plane but towards the plane.
c) directed radially away from the point charge.
d) directed radially towards the point charge.

Ans:- (a)

4. The fig given shows electric field lines in which an electric dipole p is placed. Which of the following statements is correct?



a) The dipole will not experience force.
b) The dipole will experience a force towards right.
c) The dipole will experience a force towards left.
d) The dipole will experience a force upwards.

Ans:- C

5. A hemisphere is uniformly charged positively. The electric field at a point on a diameter away from the centre is directed -

a) perpendicular to the diameter
b) parallel to the diameter
c) at an angle tilted towards the diameter
d) at an angle tilted away from the diameter.

Ans:- a

Answer the following questions:-

1. Why can one ignore quantisation of electric charge when dealing with macroscopic i.e., large scale charges?

Ans:- At macroscopic level, the quantization of charge has no practical importance because the charge at this level is very large as compared to elementary charge ‘e’ i.e., 1.6×10^{-19} C.

Eg:- A small charge of 1μC has about 10^{13} electronic charges. In such cases the charge may be treated as continuous and not quantized.

2. What are electric field lines?

Ans:- Electric field lines are a way of pictorially mapping the electric field around a configuration of charges. An electric field line is, in general, a curve drawn in such a way that the tangent to it at each point is in the direction of the net field at that point. An arrow on the curve specifies the direction of the electric field from the two possible directions indicated by a tangent to the curve. A field line is a space curve, i.e., a curve in three dimensions.

3. An electrostatic field line is a continuous curve. That is, a field line cannot have sudden breaks. Why not?

Ans:- An electrostatic field line starts from a positive charge and ends at a negative charge, tangent to this line at any point represents the direction of the field at that point since electric field is continuous so the line has to be continuous.

4. Mention the general properties followed by the electric field lines.

Ans:- The general properties followed by the electric field lines are –

a) The field lines start from positive charges and end at negative charges. If there is a single charge, they may start or end at infinity.
b) In a charge-free region, electric field lines can be taken to be continuous curves without any breaks.
c) Two field lines can never cross each other.
d) Electrostatic field lines do not form any closed loops.

5. No two electric field lines can intersect each other. Why?

Ans:- There would be two directions of electric field intensity at the same point i.e., at the point of intersection if two electric lines of force intersect each other, which is not possible. Hence, no two electric field lines can intersect each other.

6. State the principle of superposition of electric fields.

Ans:- Net electric field strength at a point due to a group of charges is equal to the vector sum of all the electric field strength produced due to individual charges at that point.

7. Does a dipole experience a force when placed in the non-uniform electric field?

Ans:- Dipole experiences a net force, because both of its charges experience unequal forces and in different direction

Problems:-

1. A liquid drop having 6 excess electrons is kept stationary under a uniform electric field of 25.5 kVm^{-1}. The density of liquid is 1.26×10^3 kgm^{-3}. Find the radius of the drop.

Soln:- (a) When liquid drop is held stationary, net force acting on it is zero.

Forces acting on the drop –

(i) Weight of the drop vertically downward and
(ii) Force due to the electric field ($F = qE$) vertically upward.

Weight of drop, W = mg

But $m = \left(\frac{4}{3}\pi r^3\right)\rho$,

where $\left(\frac{4}{3}\pi r^3\right)$ is the volume,

ρ is the density of the liquid and
r is the radius of drop

$\therefore W = \left(\frac{4}{3}\pi r^3\right)\rho g$

And electric force, $F = qE = 6e \times E$

(b) Since the drop is stationary, so
$W - F = 0$ (or) $W = F$

(or) $\left(\frac{4}{3}\pi r^3\right)\rho g = 6eE$

(or) $r^3 = \frac{3 \times 6eE}{4\pi\rho g}$

Here, $e = 1.6 \times 10^{-19}$ C
$E = 25.5 \times 10^3$ Vm^{-1}
$\rho = 1.26 \times 10^3$ kg m^{-3}
$g = 9.8$ ms^{-2}

$$\therefore r^3 = \frac{3 \times 6 \times 1.6 \times 10^{-19} \times 25.5 \times 10^3}{4 \times 3.142 \times 1.26 \times 10^3 \times 1.26 \times 10^3}$$
$$= 0.0789 \times 10^{-18}$$

$$\therefore \text{Radius of drop, } r = \left(0.0789 \times 10^{-18}\right)^{1/3}$$
$$= 4.3 \times 10^{-7} \text{ m}$$

ಒಳಮೀಸಲಾತಿ: ಜಾತಿ, ಉಪ ಜಾತಿ ಸ್ಪಷ್ಟವಾಗಿ ಬರೆಸಲು ಸಿ.ಎಂ ಸಲಹೆ

‘ಸಮೀಕ್ಷೆ : ಗೊಂದಲ ಸೃಷ್ಟಿ ಬೇಡ’

ಪ್ರಜಾವಾಣಿ ವಾರ್ತೆ

ಎಚ್.ಡಿ. ಕೋಟೆ (ಮೈಸೂರು ಜಿಲ್ಲೆ): ‘ಪರಿಶಿಷ್ಟರಿಗೆ ಒಳ ಮೀಸಲಾತಿ ನೀಡುವ ಸಂಬಂಧ ಆರಂಭಿಸಿರುವ ಸಮೀಕ್ಷೆಯು ಚೆನ್ನಾಗಿ ನಡೆಯುತ್ತಿದೆ. ಈ ವಿಷಯದಲ್ಲಿ ಯಾರೂ ಇಲ್ಲಸಲ್ಲದ ಗೊಂದಲಗಳನ್ನು ಸೃಷ್ಟಿಸಬಾರದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿನ ಸರ್ಕಾರಿ ಪಿಯು ಕಾಲೇಜು ಆವರಣದಲ್ಲಿ ಸೋಮವಾರ ₹140 ಕೋಟಿ ಮೊತ್ತದ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

‘ಪಕ್ಕಾ ಸಮೀಕ್ಷೆ ನಡೆಸಲಾಗುತ್ತಿದೆ. ಒಳಮೀಸಲಾತಿ ಬೇಕೋ, ಬೇಡವೋ? ಯಾವ್ಯಾವ ಜಾತಿಯವರು ಎಷ್ಟಿದ್ದಾರೆ ಎಂಬುದು ಗೊತ್ತಾಗಬೇಕೋ ಬೇಡವೋ? ಯಾವ ಜಾತಿ ಹೇಳುತ್ತೀರೋ ಅದನ್ನೇ ಬರೆದುಕೊಳ್ಳುತ್ತಾರೆ. ಮಾದಿಗ, ಕೊರಮ, ಕೊರಚ, ಎಡಗೈ, ಬಲಗೈ, ಭೋವಿ... ಏನು ಹೇಳುತ್ತೀರೋ ಅದನ್ನು ನಮೂದಿಸುತ್ತಾರೆ’ ಎಂದು ಸಮರ್ಥಿಸಿಕೊಂಡರು.

‘ಸಮೀಕ್ಷೆ ಸರಿಯಾಗಿ ನಡೆಯುತ್ತಿಲ್ಲ. ನಮಗೆ ಅನ್ಯಾಯವಾಗುತ್ತದೆ’ ಎಂದು ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ, ಕೆಪಿಸಿಸಿ ವಕ್ತಾರ ಜಿ.ವಿ. ಸೀತಾರಾಂ ಅವರು ವೇದಿಕೆಯಲ್ಲೇ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದರು. ಅದಕ್ಕೆ ಪ್ರತಿಯಾಗಿ ಸಿದ್ದರಾಮಯ್ಯ, ಸಾರ್ವಜನಿಕವಾಗಿಯೇ ಪ್ರತಿಕ್ರಿಯೆ ನೀಡಿದರು. ‘ಈ ವಿಷಯದಲ್ಲಿ ಗೊಂದಲ ಉಂಟು ಮಾಡಬಾರದು. ಎಲ್ಲರೂ ಜಾತಿ, ಉಪಜಾತಿಗಳನ್ನು ಸ್ಪಷ್ಟವಾಗಿ ಬರೆಸಬೇಕು’ ಎಂದು ಬುದ್ಧಿವಾದ ಹೇಳಿದರು.

‘ಆದಿ ಕರ್ನಾಟಕ ಬದಲಿಗೆ ಬಲ ಎಂದು ಹೇಳಿಕೊಳ್ಳಬೇಕು. ಅದೇ ರೀತಿ ಎಡಗೈನವರು ಕೂಡ ಹೇಳಬೇಕು. ಇದನ್ನು ನಾನು ಹೇಳಿದರೆ ತಪ್ಪಾಗುತ್ತದೆ. ಆದರೆ, ನೀವು ಹೇಳಬೇಕು. ವೈಜ್ಞಾನಿಕವಾಗಿ ಒಳ ಮೀಸಲಾತಿ ನೀಡಲು ನ್ಯಾ.ಎಚ್.ಎನ್.ನಾಗಮೋಹನದಾಸ್ ಆಯೋಗ ರಚಿಸಲಾಗಿದೆ. ನಿಖರ ಮಾಹಿತಿ ಪಡೆದು ಕ್ರಮ ಕೈಗೊಳ್ಳಲಾಗುವುದು’ ಎಂದರು.

₹8 ಸಾವಿರ ಕೋಟಿ ಇಟ್ಟಿರುವೆ: ‘ಈ ವರ್ಷ ಕ್ಷೇತ್ರಾಭಿವೃದ್ಧಿಗೆ ಶಾಸಕರಿಗೆ ತಲಾ ₹50 ಕೋಟಿ ಕೊಡುತ್ತೇನೆ. ಅದಕ್ಕಾಗಿಯೇ ಬಜೆಟ್‌ನಲ್ಲಿ ₹8 ಸಾವಿರ ಕೋಟಿ ಇಟ್ಟುಕೊಂಡಿದ್ದೇನೆ. ಗ್ಯಾರಂಟಿಗೂ ಹಣ ಕೊಡುತ್ತಿದ್ದೇನೆ. ಅಭಿವೃದ್ಧಿ ಕೆಲಸವನ್ನೂ ಮಾಡುತ್ತಿದ್ದೇನೆ’ ಎಂದರು.

ಜೆಎಲ್‌ಆರ್ (ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್) ನಿಂದ 2024–25ನೇ ಸಾಲಿನ ಲಾಭಾಂಶ ₹12.47 ಕೋಟಿಯ ಚೆಕ್ ಅನ್ನು ಅಧ್ಯಕ್ಷರೂ ಆಗಿರುವ ಎಚ್.ಡಿ. ಕೋಟೆ ಶಾಸಕ ಅನಿಲ್ ಚಿಕ್ಕಮಾದು ಮುಖ್ಯಮಂತ್ರಿಗೆ ಹಸ್ತಾಂತರಿಸಿದರು.

ಎಚ್.ಡಿ. ಕೋಟೆ ಪಟ್ಟಣದಲ್ಲಿ ₹50 ಲಕ್ಷ ವೆಚ್ಚದಲ್ಲಿ ಪ್ರತಿಷ್ಠಾಪಿಸಿರುವ 720 ಕೆ.ಜಿ. ತೂಕದ ಪಂಚಲೋಹದ ಅಂಬೇಡ್ಕರ್ ಪ್ರತಿಮೆಯನ್ನು ಸಿದ್ದರಾಮಯ್ಯ ಅನಾವರಣಗೊಳಿಸಿದರು. ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್, ಸತೀಶ ಜಾರಕಿಹೊಳಿ ಪಾಲ್ಗೊಂಡಿದ್ದರು.

ಸಿ.ಎಂ ಗಮನಕ್ಕೆ ಬೇಡಿಕೆ: ಪೊನ್ನಣ್ಣ

ಪ್ರಜಾವಾಣಿ ವಾರ್ತೆ

ಮಡಿಕೇರಿ: ನಾಗರಹೊಳೆ ಹುಲಿ ರಕ್ಷಿತಾರಣ್ಯದೊಳಗಿನ ಕರಡಿಕಲ್ಲು ಅತ್ತೂರು ಕೊಲ್ಲಿ ಪ್ರದೇಶದಲ್ಲಿ ಅರಣ್ಯ ಹಕ್ಕು ಕಾಯ್ದೆಯಡಿ ವೈಯಕ್ತಿಕ ಹಾಗೂ ಸಮುದಾಯ ಹಕ್ಕುಗಳಿಗಾಗಿ ಮೇ 5ರಿಂದ ಪ್ರತಿಭಟನೆ ನಡೆಸುತ್ತಿರುವ ಜೇನು ಕುರುಬ ಸಮುದಾಯಕ್ಕೆ ಸೇರಿದ 52 ಕುಟುಂಬದವರನ್ನು ಸೋಮವಾರ ಶಾಸಕ ಹಾಗೂ ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಅವರು ಭೇಟಿಯಾಗಿ, ಸಮಸ್ಯೆ ಆಲಿಸಿದರು.

‘ಮುಖ್ಯಮಂತ್ರಿ ಹಾಗೂ ಅರಣ್ಯ ಸಚಿವರೊಂದಿಗೆ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

ಈ ವೇಳೆ ಪ್ರತಿಭಟನಾನಿರತರು, ‘ಶತಮಾನಗಳಿಂದ ಇಲ್ಲಿಯೇ ವಾಸವಿದ್ದ ನಮ್ಮನ್ನು ಅರಣ್ಯ ಇಲಾಖೆ ಕೆಲವು ದಶಕಗಳ ಹಿಂದೆ ಎತ್ತಂಗಡಿ ಮಾಡಿತು. ಅರಣ್ಯ ಹಕ್ಕು ಕಾಯ್ದೆಯಡಿಯ ಸೌಲಭ್ಯಕ್ಕಾಗಿ ಹೋರಾಡುತ್ತಿದ್ದೇವೆ’ ಎಂದು ತಿಳಿಸಿದರು.

‘ಎಲ್ಲ ಪ್ರಕ್ರಿಯೆಗಳೂ ಕಾನೂನು ಚೌಕಟ್ಟಿನಲ್ಲಿಯೆ ನಡೆಯಬೇಕಿದ್ದು, ಬೇಡಿಕೆಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ಅರಣ್ಯಾಧಿಕಾರಿಗಳು ಸಮಜಾಯಿಷಿ ನೀಡಿದರು.

ಹೂಳೆತ್ತುವಾಗ ಕುಸಿದು ಬಿದ್ದು ಮಹಿಳೆ ಸಾವು

ಹಟ್ಟಿ ಚಿನ್ನದ ಗಣಿ: ಗೆಜ್ಜಲಗಟ್ಟಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕನಗನೂರು ಗ್ರಾಮದ ಸುಕನ್ಯಾ ಮಹಾವೀರ ಸಿಂಗ್ (50) ನರೇಗಾ ಕೆಲಸ ಮಾಡುವಾಗ ಮೃತಪಟ್ಟಿದ್ದಾರೆ.

ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಶಿವರಾಜ ದೇಸಾಯಿ ಅವರ ಜಮೀನಿನಲ್ಲಿ ಭಾನುವಾರ ಹೂಳು ಎತ್ತುವ ಕೆಲಸ ಮಾಡುವಾಗ ಮಹಿಳೆ ಕುಸಿದು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರಿಗೆ ಪುತ್ರ, ತಾಯಿ, ಸಹೋದರರು ಇದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

‘ಕಾಮಿಡಿ ಕಿಲಾಡಿ’ ಖ್ಯಾತಿಯ ರಾಕೇಶ್

ಉಡುಪಿ: ‘ಕಾಮಿಡಿ ಕಿಲಾಡಿಗಳು’ ರಿಯಾಲಿಟಿ ಶೋ ಮೂಲಕ ಪ್ರಸಿದ್ಧಿ ಪಡೆದಿದ್ದ ನಟ ಮಲ್ಪೆ ಹೂಡೆಯ ರಾಕೇಶ್ ಪೂಜಾರಿ (33) ಹೃದಯಾಘಾತದಿಂದ ನಿಧನರಾದರು.



ರಾಕೇಶ್

ಕಾರ್ಕಳದ ನಿಟ್ಟೆ ಸಮೀಪದ ಮಿಯ್ಯಾರ್‌ನ ಸ್ನೇಹಿತನ ಮನೆಯಲ್ಲಿ ಭಾನುವಾರ ರಾತ್ರಿ ನಡೆಯುತ್ತಿದ್ದ ಮೆಹಂದಿ ಕಾರ್ಯಕ್ರಮದಲ್ಲಿ ನೃತ್ಯ ಮಾಡುತ್ತಿದ್ದಾಗ ಕುಸಿದು ಬಿದ್ದಿದ್ದರು. ಆಸ್ಪತ್ರೆಗೆ ದಾಖಲಿಸಿದರೂ ಅಷ್ಟರಲ್ಲಿ ಮೃತಪಟ್ಟಿದ್ದರು ಎಂದು ಮೂಲಗಳು ತಿಳಿಸಿವೆ. ಅವರಿಗೆ ತಾಯಿ ಮತ್ತು ತಂಗಿ ಇದ್ದಾರೆ.

ಕನ್ನಡ, ತುಳು ಚಿತ್ರಗಳಲ್ಲಿ ನಟಿಸಿದ್ದ ಅವರು, ‘ಕಾಂತಾರ ಪ್ರೀಕ್ವೆಲ್’ನಲ್ಲೂ ಅಭಿನಯಿಸುತ್ತಿದ್ದರು ಎಂದು ಅವರ ಆಪ್ತರು ತಿಳಿಸಿದ್ದಾರೆ.

ಪುಟ್ಟರಂಗಶೆಟ್ಟಿಗೆ ಪುತ್ರ ವಿಯೋಗ

ಚಾಮರಾಜನಗರ: ಅನಾರೋಗ್ಯದಿಂದ ಬಳಲುತ್ತಿದ್ದ ಚಾಮರಾಜನಗರ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ಪುತ್ರ ಚಾಮರಾಜ್ (42) ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು.



ಚಾಮರಾಜ್

ಮೃತರಿಗೆ ತಂದೆ, ತಾಯಿ, ಪತ್ನಿ, ಇಬ್ಬರು ಮಕ್ಕಳಿದ್ದಾರೆ. ಯಳಂದೂರು ತಾಲ್ಲೂಕಿನ ಸ್ವಗ್ರಾಮ ಉಪ್ಪಿನಮೋಳೆಯಲ್ಲಿ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ಇರಿಸಲಾಗಿತ್ತು.

ಮೇ 13ರಂದು ಅಲ್ಲಿಯೇ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾಜಿ ಸಂಸದ ದರೂರು ಪುಲ್ಲಯ್ಯ

ಕಂಪ್ಲಿ (ಬಳ್ಳಾರಿ ಜಿಲ್ಲೆ): ತಾಲ್ಲೂಕಿನ ಕಂಪ್ಲಿ ಕೊಟ್ಟಾಲ್ ನಿವಾಸಿ, ಅನಂತಪುರದ ಮಾಜಿ ಸಂಸದ ದರೂರು ಪುಲ್ಲಯ್ಯ (94) ಸೋಮವಾರ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ, ಆರು ಪುತ್ರಿಯರು, ಪುತ್ರ ಇದ್ದಾರೆ. ಮೃತರ ಅಂತ್ಯಕ್ರಿಯೆ ಮೇ 14ರಂದು ಬಳ್ಳಾರಿಯಲ್ಲಿ ಜರುಗಲಿದೆ.



ಪುಲ್ಲಯ್ಯ

ದರೂರು ಪುಲ್ಲಯ್ಯ ಅವರು 1977 ಮತ್ತು 1980ರಲ್ಲಿ ಕಾಂಗ್ರೆಸ್ ಸಂಸದರಾಗಿ ಆಯ್ಕೆ ಆಗಿದ್ದರು.

ಮುಡಾ ಪ್ರಕರಣ: ಮತ್ತಷ್ಟು ಮಾಹಿತಿ ಕೇಳಿದ ಇ.ಡಿ

ಮೈಸೂರು: ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) 50:50 ಅನುಪಾತದಲ್ಲಿ ಬದಲಿ ನಿವೇಶನಗಳ ಹಂಚಿಕೆಯಲ್ಲಿನ ಅಕ್ರಮ ಆರೋಪದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು (ಇ.ಡಿ) ಇನ್ನಷ್ಟು ನಿವೇಶನಗಳ ಕುರಿತು ಮಾಹಿತಿ ಕೋರಿ ಮುಡಾ ಆಯುಕ್ತರಿಗೆ ಪತ್ರ ಬರೆದಿದೆ.

ಪ್ರಕರಣದ ತನಿಖೆ ನಡೆಸುತ್ತಿರುವ ಇ.ಡಿ.ಯ ಬೆಂಗಳೂರು ಕಚೇರಿಯ ಸಹಾಯಕ ನಿರ್ದೇಶಕ ವಿ. ಮುರಳಿಕಣ್ಣನ್ ಮೇ 9ರಂದು ಮುಡಾ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

‘ಮೈಸೂರಿನ ಬಸವನಹಳ್ಳಿ ಸರ್ವೆ ಸಂಖ್ಯೆ 116/2ರಲ್ಲಿ 4 ಎಕರೆ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದ 26 ವರ್ಷಗಳ ನಂತರವೂ ಭೂಮಿ ವಶಕ್ಕೆ ಪಡೆಯದ ಕಾರಣದಿಂದ ಹೈಕೋರ್ಟ್ 2018ರಲ್ಲಿ ಅಧಿಸೂಚನೆಯನ್ನು ರದ್ದುಪಡಿಸಿತ್ತು. ಆದಾಗ್ಯೂ 2023ರಲ್ಲಿ ಮತ್ತೆ ಅದೇ ಜಮೀನನ್ನು ಸ್ವಾಧೀನಕ್ಕೆ ಪಡೆದದ್ದು ಏಕೆ ಎಂಬುದರ ದಾಖಲೆ ನೀಡಿ’ ಎಂದು ಕೇಳಿದ್ದಾರೆ.

ರಾಜ್ಯದ ವಿವಿಧೆಡೆ ಬಿರುಸಿನ ಮಳೆ

ಮಡಿಕೇರಿ/ಹುಬ್ಬಳ್ಳಿ: ರಾಜ್ಯದ ವಿವಿಧೆಡೆ ಸೋಮವಾರ ಮಳೆಯಾಗಿದೆ. ಮಡಿಕೇರಿ ನಗರವೂ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ಒಂದು ಗಂಟೆಗೂ ಅಧಿಕ ಕಾಲ ಗುಡುಗಿನಿಂದ ಕೂಡಿದ ಬಿರುಸಿನ ಮಳೆ ಸುರಿಯಿತು.




ಧಾರವಾಡ ತಾಲ್ಲೂಕಿನ ಉಪ್ಪಿನಬೆಟಗೇರಿ ಗ್ರಾಮ ಸೇರಿದಂತೆ ಸುತ್ತಲಿನ ಹಲವು ಗ್ರಾಮಗಳಲ್ಲಿ ಧಾರಾಕಾರ ಮಳೆಯಾಗಿದೆ. ಗರಗದಲ್ಲಿ ರಥೋತ್ಸವಕ್ಕೆ ಕೆಲ ಹೊತ್ತು ಅಡ್ಡಿಯಾಗಿತ್ತು.

ಸಿಡಿಲು ಬಡಿದು ಭಾನುವಾರ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹಲಕಿ ಗ್ರಾಮದಲ್ಲಿ ಹಲಕಿ ನಿವಾಸಿ ಬಾಲನಾಯ್ಕ ಮರಿನಾಯ್ಕ ನಾಯ್ಕರ (65), ಬೈಲಹೊಂಗಲ ತಾಲ್ಲೂಕಿನ ಮೇಕಲಮರಡಿ ಗ್ರಾಮದ ಶಾನೂರ್ ಹುಸೇನ್‌ಸಾಬ್ ಶಾಬಾಯಿ (28) ಮೃತರಾಗಿದ್ದಾರೆ. ಮಳೆ ಬರುತ್ತಿದ್ದ ಕಾರಣ ಇಬ್ಬರೂ ಮರದ ಕೆಳಗೆ ನಿಂತಿದ್ದ ವೇಳೆ ಸಿಡಿಲು ಬಡಿದಿದೆ. ಹರಪನಹಳ್ಳಿ ತಾಲ್ಲೂಕಿನ ಹುಣಸಿಹಳ್ಳಿ ಗ್ರಾಮದಲ್ಲಿ ಪಿ.ಕೊಟ್ರೇಶಪ್ಪ (50) ಎಂಬುವರು ಮೃತಪಟ್ಟಿದ್ದಾರೆ.

ತುಂಗಭದ್ರಾ ನದಿಯ ಅಚ್ಚುಕಟ್ಟು ಪ್ರದೇಶದಲ್ಲಿ ಕೆಲ ದಿನಗಳಿಂದ ಅಲ್ಲಲ್ಲಿ ಮಳೆಯಾಗುತ್ತಿದ್ದು, ನದಿಯಲ್ಲಿ ಒಳಹರಿವಿನ ಪ್ರಮಾಣ 1,300 ಕ್ಯುಸೆಕ್ ಇದೆ. ಜಲಾಶಯದಲ್ಲಿ ಸದ್ಯ 8 ಟಿಎಂಸಿ ಅಡಿ ನೀರಿನ ಸಂಗ್ರಹವಿದೆ.

ಕಲಬುರಗಿ ವರದಿ: ನಗರವೂ ಸೇರಿದಂತೆ ಜಿಲ್ಲೆಯ ಚಿಂಚೋಳಿ, ಜೇವರ್ಗಿ ಸೇರಿದಂತೆ ಹಲವೆಡೆ ಗುಡುಗು ಮಿಂಚು ಸಹಿತ ಜೋರು ಮಳೆ ಸುರಿಯಿತು. ಬೀದರ್ ಜಿಲ್ಲೆಯ ಚಿಟಗುಪ್ಪದಲ್ಲಿಯೂ ಕೆಲ ಹೊತ್ತು ಮಳೆ ಸುರಿದಿದೆ



ಸುಭಾಷಿತ

ಮಹತ್ವಾಕಾಂಕ್ಷೆಯುಳ್ಳ ವ್ಯಕ್ತಿ ಪ್ರೀತಿಸಲಾರ,
ವ್ಯಾಮೋಹಿಯಾದವನಲ್ಲಿ ಪ್ರೀತಿ ಇರಲು ಸಾಧ್ಯವಿಲ್ಲ,
ಅಸೂಯೆ ಇದ್ದಲ್ಲಿಯೂ ಪ್ರೀತಿ ಇರಲಾರದು.

–ಜಿಡ್ಡು ಕೃಷ್ಣಮೂರ್ತಿ

ಮಾನವ ಅಭಿವೃದ್ಧಿ ಸೂಚ್ಯಂಕ ಸ್ಥಾನ ಉತ್ತಮಪಡಿಸಿಕೊಂಡ ಭಾರತ

ಹೊಸದಾಗಿ ಬಿಡುಗಡೆ ಆಗಿರುವ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ (ಎಚ್‌ಡಿಐ) ಭಾರತದ ಸ್ಥಾನವು ತುಸು ಉತ್ತಮ ಹಂತಕ್ಕೆ ಬಂದಿದೆ. ಆದರೆ ಭಾರತವು ಸಾಧಿಸಬೇಕಿರುವುದು ಇನ್ನೂ ಬಹಳಷ್ಟಿದೆ ಎಂಬುದನ್ನು ಕೂಡ ಸೂಚ್ಯಂಕವು ಹೇಳುತ್ತಿದೆ. 2022ರಲ್ಲಿ 133ನೇ ಸ್ಥಾನ ಪಡೆದಿದ್ದ ಭಾರತವು ಈ ಬಾರಿ 130ನೇ ಸ್ಥಾನಕ್ಕೆ ಬಂದಿದೆ. ಒಟ್ಟು 193 ದೇಶಗಳ ಸಾಧನೆಯನ್ನು ಪರಿಶೀಲಿಸಿ ಈ ಸ್ಥಾನ ನೀಡಲಾಗಿದೆ. ಭಾರತದ ಸ್ಥಾನ ಸುಧಾರಿಸಿರುವುದು ನಿಜವಾದರೂ ಅದು ಬಹಳ ಕೆಳಗಿನ ಸ್ಥಾನ ಪಡೆದಿದೆ ಎಂಬುದು ವಾಸ್ತವ. ಮಾನವ ಅಭಿವೃದ್ಧಿ ವರದಿಯ ಪ್ರಕಾರ, ಭಾರತವು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 2023ರಲ್ಲಿ ಮೌಲ್ಯವನ್ನು ತುಸುಮಟ್ಟಿಗೆ ಹೆಚ್ಚಿಸಿಕೊಂಡಿದೆ. ಕೋವಿಡ್ ಸಾಂಕ್ರಾಮಿಕವು ತೀವ್ರವಾಗಿದ್ದ ವರ್ಷಗಳಲ್ಲಿ ದೇಶದ ಅಭಿವೃದ್ಧಿಯು ಒಂದಿಷ್ಟು ಹಿಂದಕ್ಕೆ ಹೋಯಿತು, ಅದೇ ರೀತಿಯಲ್ಲಿ ವಿಶ್ವದ ಇತರ ರಾಷ್ಟ್ರಗಳ ಬೆಳವಣಿಗೆ ಕೂಡ ಹಿಂದೆ ಉಳಿಯಿತು. ಹೀಗಿದ್ದರೂ ಭಾರತದ ಸಾಧನೆಯು ಶ್ಲಾಘನೀಯ ಎಂಬುದು ನಿಜ. ದೀರ್ಘಾಯಸ್ಸು ಮತ್ತು ಆರೋಗ್ಯ, ಮಾಹಿತಿಯ ಲಭ್ಯತೆ ಮತ್ತು ಉತ್ತಮ ಜೀವನಮಟ್ಟದಂತಹ ಮಾನದಂಡಗಳಲ್ಲಿ ಭಾರತವು ತನ್ನ ಸ್ಥಿತಿಯನ್ನು ಉತ್ತಮಪಡಿಸಿಕೊಂಡಿದೆ. 1990ರಲ್ಲಿ ಭಾರತದಲ್ಲಿ ಸರಾಸರಿ ಜೀವಿತಾವಧಿಯು 56.6 ವರ್ಷಗಳು ಇದ್ದಿದ್ದು 2023ರಲ್ಲಿ 72 ವರ್ಷಗಳಿಗೆ ಹೆಚ್ಚಳ ಆಗಿದೆ. ಇದೇ ಅವಧಿಯಲ್ಲಿ ಭಾರತದ ಮಕ್ಕಳು ಶಾಲೆಯಲ್ಲಿ ಕಳೆಯುವ ಅವಧಿಯು 8.2 ವರ್ಷಗಳಿಂದ 13 ವರ್ಷಗಳಿಗೆ ಹೆಚ್ಚಳ ಕಂಡಿದೆ. 1990ರಲ್ಲಿ 2,167 ಡಾಲರ್‌ನಷ್ಟು ಇದ್ದ ಭಾರತೀಯರ ತಲಾವಾರು ವರಮಾನವು 2023ರಲ್ಲಿ 9,046 ಡಾಲರ್‌ಗೆ ಏರಿಕೆ ಆಗಿದೆ. ಇದು ಸಾಧ್ಯವಾಗಿದ್ದರ ಹಿಂದೆ ನರೇಗಾ, ಶಿಕ್ಷಣ ಹಕ್ಕು ಕಾಯ್ದೆಯ ಪಾಲು ಇದೆ.



ಭಾರತ ಸಾಧಿಸಬೇಕಿರುವುದು ಇನ್ನೂ ಬಹಳಷ್ಟಿದೆ ಎಂಬುದನ್ನು ಕೂಡ ಸೂಚ್ಯಂಕವು ಹೇಳುತ್ತಿರುವುದು ಗಮನಾರ್ಹವಾಗಿದೆ

ಆದರೆ ಇತರ ಹಲವು ಕ್ಷೇತ್ರಗಳಲ್ಲಿ ಭಾರತವು ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ. ಭಾರತದಲ್ಲಿ ತೀರಾ ಎದ್ದು ಕಾಣುವಂತೆ ಇರುವ ಆದಾಯ ಅಸಮಾನತೆಯು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ದೇಶದ ಸ್ಥಾನವನ್ನು ಶೇಕಡ 30ರಷ್ಟು ಕಡಿಮೆ ಮಾಡಿದೆ. ಆರೋಗ್ಯ ಮತ್ತು ಶಿಕ್ಷಣದಲ್ಲಿನ ಅಸಮಾನತೆಯು ಕಡಿಮೆ ಆಗಿದೆ. ಆದರೆ ಲಿಂಗ ಆಧಾರಿತ ಅಸಮಾನತೆ ಮತ್ತು ಆದಾಯದಲ್ಲಿನ ಅಸಮಾನತೆಯು ಬಹಳ ತೀವ್ರ ಸ್ವರೂಪದಲ್ಲಿದೆ. ಕಾರ್ಮಿಕ ಮತ್ತು ಉದ್ಯೋಗ ವಲಯದಲ್ಲಿ ಮಹಿಳೆಯರ ಭಾಗವಹಿಸುವಿಕೆಯು ಹೆಚ್ಚಾಗಿದೆಯಾದರೂ ಅಲ್ಲಿ ದೊಡ್ಡ ಮಟ್ಟದ ಸುಧಾರಣೆ ಆಗಿಲ್ಲ. ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯ ಕೂಡ ಕಡಿಮೆ ಇದೆ. ರಾಜಕೀಯದಲ್ಲಿ ಮಹಿಳೆಯರ ಭಾಗೀದಾರಿಕೆಯನ್ನು ಹೆಚ್ಚು ಮಾಡುವ ಉದ್ದೇಶದ ಸಂವಿಧಾನ ತಿದ್ದುಪಡಿಯು ಇನ್ನಷ್ಟೇ ಜಾರಿಗೆ ಬರಬೇಕಿದೆ. ನಮ್ಮ ದೇಶದ ನೆರೆಹೊರೆಯ ಕೆಲವು ದೇಶಗಳು ಕೂಡ ಇದೇ ಬಗೆಯ ಲೋಪಗಳನ್ನು, ಕೊರತೆಗಳನ್ನು ಹೊಂದಿವೆ. ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನದ ಸಾಧನೆ ಕಳಪೆಯಾಗಿದೆ. ಆದರೆ ಚೀನಾ ಮತ್ತು ಶ್ರೀಲಂಕಾ ಹೆಚ್ಚು ಉತ್ತಮವಾದ ಸಾಧನೆ ತೋರಿವೆ. ಈ ಎರಡು ದೇಶಗಳು ಸೂಚ್ಯಂಕದಲ್ಲಿ ಉತ್ತಮ ಸ್ಥಾನ ಪಡೆದಿವೆ.

ಕೋವಿಡ್ ಸಾಂಕ್ರಾಮಿಕ ಕಾಡಿದ್ದರಿಂದಾಗಿ ಮತ್ತು ವಿಶ್ವದ ಹಲವೆಡೆ ಆರ್ಥಿಕ ಬೆಳವಣಿಗೆ ಮಂದಗತಿಯಲ್ಲಿ ಇರುವ ಕಾರಣದಿಂದಾಗಿ ಮಾನವ ಅಭಿವೃದ್ಧಿಯ ವೇಗವು 35 ವರ್ಷಗಳ ಕನಿಷ್ಠ ಮಟ್ಟಕ್ಕೆ ಕುಸಿದಿದೆ ಎಂಬುದನ್ನು ವರದಿಯು ಹೇಳುತ್ತಿದೆ. ಮಾನವ ಅಭಿವೃದ್ಧಿ ಸೂಚ್ಯಂಕದ ವಾರ್ಷಿಕ ಬೆಳವಣಿಗೆ ಪ್ರಮಾಣವು 1990ರ ನಂತರದಲ್ಲಿ 2023ರಲ್ಲಿ ಅತ್ಯಂತ ಕಡಿಮೆ ಇತ್ತು. ಆದರೆ ಕೃತಕ ಬುದ್ಧಿಮತ್ತೆಯ ಬಳಕೆಯು ಮನುಕುಲದ ಅಭಿವೃದ್ಧಿಗೆ ಇಂಬು ಕೊಡಲಿದೆ ಎಂಬ ಆಶಾಭಾವನೆಯು ವ್ಯಾಪಕವಾಗಿರುವುದನ್ನು ಈ ವರದಿ ದಾಖಲಿಸಿದೆ. ಕೃತಕ ಬುದ್ಧಿಮತ್ತೆಯ ಬಳಕೆಯು ಉತ್ಪಾದಕತೆಯನ್ನು ಹೆಚ್ಚು ಮಾಡುತ್ತದೆ, ಉದ್ಯೋಗ ಸೃಷ್ಟಿಗೆ ಕಾರಣವಾಗುತ್ತದೆ, ಶಿಕ್ಷಣ ಮತ್ತು ಆರೋಗ್ಯದಂತಹ ಕ್ಷೇತ್ರಗಳಲ್ಲಿ ಉತ್ತಮ ಫಲಿತಾಂಶಕ್ಕೆ ನೆರವಾಗುತ್ತದೆ ಎಂಬ ನಿರೀಕ್ಷೆ ಇದೆ. ಕೃತಕ ಬುದ್ಧಿಮತ್ತೆ ಕ್ಷೇತ್ರದ ಸಂಶೋಧಕರ ಪೈಕಿ ಶೇಕಡ 20ರಷ್ಟು ಮಂದಿಯನ್ನು ಉಳಿಸಿಕೊಳ್ಳಲು ಭಾರತಕ್ಕೆ ಸಾಧ್ಯವಾಗಿದೆ ಎಂದು ಕೂಡ ವರದಿಯು ಉಲ್ಲೇಖ ಮಾಡಿದೆ. ಕೃಷಿ, ಆರೋಗ್ಯ ಸೇವೆ, ಸಾರ್ವಜನಿಕರಿಗೆ ಇತರ ಅಗತ್ಯ ಸೇವೆಗಳನ್ನು ಒದಗಿಸುವ ಕ್ಷೇತ್ರಗಳಲ್ಲಿ ಭಾರತವು ಕೃತಕ ಬುದ್ಧಿಮತ್ತೆಯನ್ನು ಬಳಕೆ ಮಾಡಿಕೊಳ್ಳಬೇಕಿದೆ. ಇದೇ ಸಂದರ್ಭದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆಗೆ ನೀತಿ ನಿರೂಪಕರಿಂದ ಬೆಂಬಲ ಸಿಗಬೇಕಿದೆ, ಕೃತಕ ಬುದ್ಧಿಮತ್ತೆಯಿಂದಾಗಿಯೇ ಅಸಮಾನತೆ ಸೃಷ್ಟಿ ಆಗದಂತೆ ನೋಡಿಕೊಳ್ಳುವ ಕೆಲಸವೂ ಆಗಬೇಕಿದೆ.

ದಿನದ ಟ್ವೀಟ್

ಶಿಕ್ಷಣ ಎಲ್ಲರ ಕೈಗೆಟಕುವಂತಿರಲಿ

ಅತಿ ಸಣ್ಣ ಪಟ್ಟಣಗಳಲ್ಲೂ ಸಿಬಿಎಸ್‌ಇ/ಐಸಿಎಸ್‌ಇ ಶಾಲೆಗಳು ಈಗ ಮುಖ್ಯವಾಹಿನಿಯಲ್ಲಿವೆ ಮತ್ತು ಅದರಿಂದ ಒಟ್ಟಾರೆ ಶಾಲಾ ಶಿಕ್ಷಣ ಈಗ ದುಬಾರಿಯಾಗಿದೆ.

ಅರವಿಂದ್

ಕಿಡಿನುಡಿ



ಕಾಶ್ಮೀರ ವಿವಾದವು ಎರಡು ರಾಷ್ಟ್ರಗಳ ನಡುವಣ ವಿಚಾರವಾಗಿತ್ತೇ ಹೊರತು ಅಂತರರಾಷ್ಟ್ರೀಯ ವಿಚಾರವಾಗಿರಲಿಲ್ಲ. ಆದರೆ, ನರೇಂದ್ರ ಮೋದಿ ಅವರ ಸ್ನೇಹಿತ ಟ್ರಂಪ್ ಮಧ್ಯಸ್ಥಿಕೆ ವಹಿಸಿ ಕಾಶ್ಮೀರವನ್ನು ಅಂತರರಾಷ್ಟ್ರೀಯ ವಿಚಾರವಾಗಿಸಲು ಹೊರಟಿದ್ದಾರೆ. ನಮ್ಮ ವಿಚಾರದಲ್ಲಿ ಮಧ್ಯಪ್ರವೇಶಿಸಲು ಅವರ್‍ಯಾರು? ಹಸ್ತಕ್ಷೇಪ ಮಾಡಲು ಅವರಿಗೆ ಭಾರತ ಸರ್ಕಾರ ಯಾಕೆ ಅವಕಾಶ ನೀಡುತ್ತಿದೆ?

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ

25 ವರ್ಷಗಳ ಹಿಂದೆ

ಶನಿವಾರ, 13-5-2000

- **ಎಸ್ಮಾ ಜಾರಿ: ಇಂದಿನಿಂದ ಮೌಲ್ಯಮಾಪನ**

ಬೆಂಗಳೂರು, ಮೇ 12– ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿಯ ಸೇವೆಯನ್ನು ಅಗತ್ಯ ಸೇವಾ ನಿರ್ವಹಣಾ ಕಾಯ್ದೆಯ (ಎಸ್ಮಾ) ವ್ಯಾಪ್ತಿಗೆ ಒಳಪಡಿಸಿ ರಾಜ್ಯ ಸರ್ಕಾರ ಇಂದು ಆದೇಶ ಹೊರಡಿಸಿದ್ದು, ನಾಳೆಯಿಂದ ರಾಜ್ಯದ 22 ಕೇಂದ್ರಗಳಲ್ಲಿ ಪಿಯುಸಿ ಮೌಲ್ಯಮಾಪನಕ್ಕೆ ಪರ್ಯಾಯ ವ್ಯವಸ್ಥೆಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆ ಮಾಡಿಕೊಂಡಿದೆ.

ಸಚಿವರ ಹೇಳಿಕೆ: ಪಿಯುಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು ಬಹಿಷ್ಕರಿಸಿ ಮುಷ್ಕರ ಹೂಡಿರುವ ಅಧ್ಯಾಪಕರಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗದಿರಲು ಸಿಇಟಿ ಫಲಿತಾಂಶದ ಆಧಾರದ ಮೇಲೆ ಕಾಲೇಜುಗಳಿಗೆ ಪ್ರವೇಶ ನೀಡುವ ಬಗ್ಗೆ ಚಿಂತನೆ ನಡೆದಿದೆ ಎಂದು ಉನ್ನತ ಶಿಕ್ಷಣ ಸಚಿವ ಜಿ. ಪರಮೇಶ್ವರ ಇಂದು ಹಾಸನದಲ್ಲಿ ತಿಳಿಸಿದರು.

- **ರಾಜೀನಾಮೆ ನೀಡಲು ಜೈರಾಮ್‌ಗೆ ಸೂಚನೆ**

ಬೆಂಗಳೂರು, ಮೇ 12 (ಪಿಟಿಐ)– ಕರ್ನಾಟಕ ಯೋಜನಾ ಮಂಡಳಿಯ ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಮುಖ್ಯಮಂತ್ರಿ ಎಸ್‌.ಎಂ. ಕೃಷ್ಣ ಅವರು ಜೈರಾಮ್ ರಮೇಶ್ ಅವರಿಗೆ ತಿಳಿಸಿದ್ದಾರೆ.

‘ಏಷ್ಯಾ ವೀಕ್’ ಸಂದರ್ಶನದಲ್ಲಿ ಜೈರಾಮ್ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಟೀಕಿಸಿದ್ದಾರೆ ಎನ್ನಲಾದ ಆರೋಪದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಈ ಕ್ರಮ ಕೈಗೊಂಡಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 13-5-1975

- **ವಿದೇಶಗಳ ವ್ಯವಹಾರದಲ್ಲಿ ಭಾರತ ಕೈಹಾಕದು: ಪ್ರಧಾನಿ ಸ್ಪಷ್ಟನೆ**

ನವದೆಹಲಿ, ಮೇ 12– ನೆರೆಯ ರಾಷ್ಟ್ರಗಳು ಅಥವಾ ಬೇರೆ ಯಾವುದೇ ರಾಷ್ಟ್ರದ ವ್ಯವಹಾರದಲ್ಲಿ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಲು ಭಾರತಕ್ಕೆ ಅಪೇಕ್ಷೆ ಇಲ್ಲ ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಹೇಳಿದರು.

ನಮ್ಮ ನೀತಿಗಳ ಮೇಲೆ ಬಹಿರಂಗವಾಗಿ ಅಥವಾ ಸೂಕ್ಷ್ಮವಾಗಿ ಪ್ರಭಾವ ಬೀರುವ ಯಾವುದೇ ಪ್ರಯತ್ನಗಳನ್ನು ವಿರೋಧಿಸುವುದಾಗಿಯೂ ಅವರು ನುಡಿದರು.

- **ಕೆಪಿಸಿಸಿ ರಚಿಸಿದ ಹಿಂದುಳಿದ ವರ್ಗಗಳ ಸಮಿತಿ ವರದಿ ಸಿದ್ಧ ಜಾರಿಗೆ ತರಲು ಕರೆ**

ಬೆಂಗಳೂರು, ಮೇ 12– ಪ್ರದೇಶ ಕಾಂಗ್ರೆಸ್ ಸಮಿತಿ ರಚಿಸಿದ ಹಿಂದುಳಿದ ವರ್ಗಗಳ ಸಮಿತಿ ಒಂದು ತಿಂಗಳ ಅವಧಿಯಲ್ಲಿ ಸಿದ್ಧಗೊಳಿಸಿದ ವರದಿಯ ಸಾರಾಂಶವನ್ನು ಇಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ಕೆಪಿಸಿಸಿ ಅಧ್ಯಕ್ಷ ಕೆ.ಎಚ್. ಪಾಟೀಲ್ ಅವರು, 120 ಪುಟಗಳಷ್ಟಿರುವ ಸಮಿತಿಯ ಶಿಫಾರಸುಗಳನ್ನು ‘ತತ್‌ಕ್ಷಣ ಜಾರಿಗೆ ತರಲು’ ಸರ್ಕಾರ ಕ್ರಮ ಕೈಗೊಳ್ಳುವುದೆಂಬ ಆಶಯವನ್ನು ವ್ಯಕ್ತಪಡಿಸಿದರು.

ಎರಡೂವರೆ ವರ್ಷಗಳ ಹಿಂದೆ ಎಲ್‌.ಜಿ. ಹಾವನೂರು ಅವರ ಅಧ್ಯಕ್ಷತೆಯಲ್ಲಿ ನೇಮಿಸಲಾದ ಹಿಂದುಳಿದ ವರ್ಗಗಳ ಆಯೋಗ ತನ್ನ ಕೆಲಸವನ್ನು ಮುಗಿಸಿಲ್ಲವಾದುದರಿಂದ, ಕಳೆದ ಮಾರ್ಚ್ ತಿಂಗಳಲ್ಲಿ ನಡೆದ ಹಿಂದುಳಿದ ವರ್ಗಗಳ ತರಬೇತಿ ಶಿಬಿರದ ನಿರ್ದೇಶನದಂತೆ ತಾವೇ ಸ್ವತಃ ಸಮಿತಿಯನ್ನು ರಚಿಸಿರುವುದಾಗಿಯೂ ಪಾಟೀಲ್ ಅವರು ತಿಳಿಸಿದರು.

ದೇಶದ ಬಗ್ಗೆ ಅಂಬೇಡ್ಕರ್ ಕಂಡ ದುಃಸ್ವಪ್ನ ದಕ್ಷಿಣ ಕನ್ನಡದಲ್ಲಿ ಸತ್ಯವಾಗುತ್ತಿದೆಯೇ?

ದ್ವೇಷ ನಿಗ್ರಹಕ್ಕೆ ಪೊಲೀಸ್ ವಿಶೇಷ ಪಡೆ ಮದ್ದಲ್ಲ



ಅನುರಣನ

ನಾರಾಯಣ ಎ.

ಅದು 1980ರ ದಶಕದ ಉತ್ತರಾರ್ಧ. ಕೆಲವು ಪತ್ರಿಕೆಗಳು ನಿಷ್ಠುರ ಸತ್ಯವನ್ನು ನಿರ್ಭಯವಾಗಿ ಬರೆಯುತ್ತಿದ್ದ ಕಾಲ. ಕನ್ನಡ ಪತ್ರಿಕೆಯೊಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೊಡ್ಡ ದೇವಾಲಯ ಇರುವ ಸಣ್ಣ ಗ್ರಾಮವೊಂದರ ಬಗ್ಗೆ ಆಗ ಹೀಗೆ ಬರೆದಿತ್ತು: ‘ಅಲ್ಲಿ ಕಾಂಗ್ರೆಸ್ಸಿನ ರಾಜೀವ್ ಗಾಂಧಿಯವರ ಕೇಂದ್ರ ಸರ್ಕಾರದ ಅಧಿಕಾರವೂ ಲೆಕ್ಕಕ್ಕಿಲ್ಲ, ರಾಮಕೃಷ್ಣ ಹೆಗಡೆಯವರ ಜನತಾ ಪಕ್ಷದ ರಾಜ್ಯ ಸರ್ಕಾರವೂ ಲೆಕ್ಕಕ್ಕಿಲ್ಲ...’ ಹಾಗಾದರೆ ಆ ಗ್ರಾಮದಲ್ಲಿ ಅಬಾಧಿತವಾಗಿ ಅಧಿಕಾರ ಚಲಾಯಿಸುತ್ತಿದ್ದದ್ದು ಯಾರು?

ಆ ವಿವರಗಳು ಈ ಲೇಖನಕ್ಕೆ ಪ್ರಸ್ತುತವಲ್ಲ. ಆದರೂ ಆ ಹಳೆಯ ಪತ್ರಿಕಾ ವಾಕ್ಯವನ್ನು ಪ್ರಸ್ತಾಪಿಸಿದ್ದಕ್ಕೆ ಕಾರಣ ಇದೆ. ಮೇಲಿನ ಪ್ರಶ್ನೆಯನ್ನು ಆ ಪತ್ರಿಕೆ ಎತ್ತಿದ್ದು, ಅಂದು ಅಧಿಕಾರದಲ್ಲಿ ಇದ್ದವರು ಕಾಲೇಜು ವಿದ್ಯಾರ್ಥಿನಿಯೊಬ್ಬಳ ನಿಗೂಢ ಅಪಹರಣ ಮತ್ತು ಕೊಲೆಯ ವಿಚಾರವಾಗಿ ಸರಿಯಾಗಿ ಸ್ಪಂದಿಸಲಿಲ್ಲ ಎನ್ನುವ ಕಾರಣಕ್ಕೆ. ಒಂದು ಗ್ರಾಮಕ್ಕೆ ಸಂಬಂಧಿಸಿದಂತೆ ಎತ್ತಿದ ಆ ಪ್ರಶ್ನೆಯನ್ನು ಇಂದು ಇಡೀ ಕರಾವಳಿ ಕರ್ನಾಟಕವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಕೇಳಬೇಕಿದೆ.

ಯಾಕೆಂದರೆ ಕರಾವಳಿಯ ವಿಲಕ್ಷಣ ಅಧಿಕಾರದಾಟ ಈಚೆಗೆ ಮತ್ತೆರಡು ಹೆಣಗಳನ್ನು ಬೀಳಿಸಿದೆ. ಅಲ್ಲಿ ಹೆಣಗಳು ಉರುಳುವಂತೆ ಮಾಡುವ ನೀಚ ಕೋಮುವಾದಿ ರಾಜಕೀಯ ಶಕ್ತಿಗಳೇ ಎಲ್ಲವನ್ನೂ ನಿಯಂತ್ರಿಸುತ್ತಿರುವಂತೆ ಕಾಣಿಸುತ್ತದೆ. ಎರಡು ವರ್ಷಗಳ ಕಾಂಗ್ರೆಸ್ ಆಡಳಿತದ ಅವಧಿಯುದ್ದಕ್ಕೂ ದಕ್ಷಿಣ ಕನ್ನಡ–ಉಡುಪಿ ಜಿಲ್ಲೆಗಳಲ್ಲಿ ಯಾವ ಕ್ಷಣವಾದರೂ ಹೆಣವೊಂದು ಉರುಳೀತು, ಉರುಳಿದ ಹೆಣಗಳ ಮೇಲೆ ರಾಜಕೀಯದ ಭರ್ಜರಿ ಬೇಟೆ ನಡೆದೀತು ಎಂಬ ಸ್ಫೋಟಕ ಸ್ಥಿತಿ ಇತ್ತು. ಅಲ್ಲಿನ ಶಾಸಕರು, ವೃತ್ತಿಪರ ಕೋಮುವಿಷ ವಿತರಕರು ಪ್ರಚಂಡ ದ್ವೇಷಭಾಷಣಗಳನ್ನು ಮಾಡುತ್ತಲೇ ಇದ್ದರು. ಅಲ್ಲಿನ ಸಾಂಸ್ಕೃತಿಕ ಪರಿಕರಗಳಾದ ಭೂತಕೋಲ, ಯಕ್ಷಗಾನ, ನಾಗದರ್ಶನ, ಪ್ರವಚನ ಮತ್ತು ಕೊನೆಯೇ ಇಲ್ಲವೆಂಬಂತೆ ಜರುಗುವ ‘ಪುನರ್‌ಪ್ರತಿಷ್ಠಾಪನೆ ಬ್ರಹ್ಮಕಲಶೋತ್ಸವ’ಗಳೆಲ್ಲವೂ ದ್ವೇಷ ಪ್ರಸರಣಕ್ಕೆ ಬಳಕೆ ಆಗುತ್ತಲೇ ಇದ್ದವು. ಆದರೆ ಕೋಮುವಾದ ಸಂಹಾರದ ಶಪಥ ಮಾಡಿ ಅಧಿಕಾರಕ್ಕೇರಿದ ಕಾಂಗ್ರೆಸ್ ಮಾತ್ರ ಏನೂ ಆಗುತ್ತಿಲ್ಲ, ಏನೂ ಆಗುವುದೂ ಇಲ್ಲ ಎನ್ನುವ ಸಮಾಧಿ ಸ್ಥಿತಿಯಲ್ಲಿತ್ತು. ಮತ್ತೀಗ ಅಲ್ಲಿ ಒಂದರ ನಂತರ ಇನ್ನೊಂದರಂತೆ ಎರಡು ಹೆಣಗಳು! ಹರಿದ ನೆತ್ತರು ಸೃಷ್ಟಿಸಿದ ಕೆಸರಲ್ಲಿ ಲಂಗು ಲಗಾಮಿಲ್ಲದೆ ಕೆನೆದು ಕುಪ್ಪಳಿಸುತ್ತಿರುವ ರಾಜಕೀಯ ಕಂಬಳದ ಕೋಣಗಳು! ಹಾಗಾಗಿ ಮತ್ತದೇ ಪ್ರಶ್ನೆ. ಕರಾವಳಿ ಯಾರ ನಿಯಂತ್ರಣದಲ್ಲಿದೆ?


ಅಧಿಕಾರಕ್ಕೆ ಬಂದ ಎರಡು ವರ್ಷಗಳ ನಂತರ ಎರಡನೆಯ ಹೆಣ ಬಿದ್ದು ಎರಡು ದಿನಗಳಾದ ನಂತರ ಕೋಮುದ್ವೇಷವನ್ನು ನಿಗ್ರಹಿಸಲು ಅಲ್ಲಿಗೊಂದು ‘ಕೋಮುಹಿಂಸೆ ನಿಗ್ರಹ ಕಾರ್ಯಪಡೆ’ಯನ್ನು ಸ್ಥಾಪಿಸಲು ಕಾಂಗ್ರೆಸ್ ನೇತೃತ್ವದ ಸರ್ಕಾರ ನಿರ್ಧರಿಸಿದೆ! ಕರಾವಳಿಯಲ್ಲಿ ಸೃಷ್ಟಿಯಾಗಿರುವುದು ಒಂದು ರಾಜಕೀಯ– ಸಾಮಾಜಿಕ– ಸಾಂಸ್ಕೃತಿಕ ಬಿಕ್ಕಟ್ಟು. ಬೇಕಿರುವುದು ರಾಜಕೀಯ ಪರಿಹಾರ. ರಾಜಕೀಯವಾಗಿ ಪರಿಹರಿಸಬೇಕಿರುವುದನ್ನು ಪೊಲೀಸರನ್ನು ಮುಂದಿಟ್ಟುಕೊಂಡು ನಿಗ್ರಹಿಸಿಬಿಡುತ್ತೇವೆ ಎನ್ನುವ ಪ್ರಸ್ತಾಪವೇ ಪರಿಸ್ಥಿತಿಯ ಪ್ರಖರತೆ ಸರ್ಕಾರಕ್ಕೆ ಅರ್ಥವಾಗಿಲ್ಲ ಎನ್ನುವುದಕ್ಕೊಂದು ಪುರಾವೆ. ಅದಕ್ಕಿಂತಲೂ ಮುಖ್ಯವಾಗಿ, ಕೋಮುದ್ವೇಷ ಎಂಬ ಕಾರ್ಕೋಟಕವು ವ್ಯವಸ್ಥೆಯ ಸರ್ವಾಂಗವನ್ನೂ ವ್ಯಾಪಿಸಿರುವ ಪರಿಸ್ಥಿತಿಯಲ್ಲಿ ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬಲ್ಲ ಪೊಲೀಸರಾದರೂ ಎಷ್ಟಿರಬಹುದು? ಪೊಲೀಸರ ಬಗ್ಗೆ ಹೀಗೊಂದು ಕೋಮುವಾದ– ಲೆಕ್ಕಪರಿಶೋಧನೆಯೇ (ಆಡಿಟಿಂಗ್ ಪೊಲೀಸ್ ಫೋರ್ಸ್ ಫಾರ್ ಕಮ್ಯುನಲಿಸಂ) ಮೊದಲು ಅಲ್ಲಿ ನಡೆಯಬೇಕಿದೆ.

ಕರಾವಳಿಯ ಎಲ್ಲರೂ ಕೋಮುವಾದಿಗಳಲ್ಲ, ಅಲ್ಲಿ ಜನವಿವೇಕ ಜಾಗೃತವಾಗಿದೆ ಎನ್ನುವ ವಾದದಲ್ಲಿ ಸತ್ಯಾಂಶ ಇರಬಹುದು. ಆದರೆ ಆ ನೆಲದ ರಾಜಕೀಯ– ಸಾಮಾಜಿಕ ಸನ್ನಿವೇಶವನ್ನು ಈ ಲೋಕೋತ್ತರ ವಿವರಣೆಯಾಚೆಗೆ ಅರ್ಥ ಮಾಡಿಕೊಳ್ಳುವ ಅಗತ್ಯವಿದೆ. ಮುಖ್ಯವಾಗಿ 2013ರ ಚುನಾವಣೆಯ ನಂತರದ ಕರಾವಳಿಯ ರಾಜಕೀಯ ಪರಿವರ್ತನೆಯನ್ನು ಮಾಮೂಲಿ ಕೋಮುವಾದಿ ರಾಜಕಾರಣದ ಪರಿಧಿಯೊಳಗಷ್ಟೇ ನೋಡಿದರೆ ಸಾಲದು.

ಇಡೀ ದೇಶವನ್ನು ಗಮನದಲ್ಲಿ ಇಟ್ಟುಕೊಂಡು 1950ರ ದಶಕದಲ್ಲೇ ಬಿ.ಆರ್.ಅಂಬೇಡ್ಕರ್ ಅವರು ಪ್ರಸ್ತಾಪಿಸಿದ ವಿಚಾರವೊಂದು ಕರಾವಳಿಯ ವಿಚಾರದಲ್ಲಿ ಪ್ರಸ್ತುತ ಎನಿಸುತ್ತದೆ. ಅದು ಅಂಬೇಡ್ಕರ್ ಅವರು ದೇಶದ ಬಗ್ಗೆ ಕಂಡಿದ್ದ ದುಃಸ್ವಪ್ನವೂ ಆಗಿತ್ತು. ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಎರಡು ರೀತಿಯ ಬಹುಮತಗಳ ಬಗ್ಗೆ ಅಂಬೇಡ್ಕರ್ ಹೇಳಿದ್ದರು. ಮೊದಲನೆಯದು, ರಾಜಕೀಯ ಬಹುಮತ (ಪೊಲಿಟಿಕಲ್ ಮೆಜಾರಿಟಿ). ಎರಡನೆಯದು, ಮತಭ್ರಾಮಕ ಬಹುಮತ (ಕಮ್ಯುನಲ್ ಮೆಜಾರಿಟಿ).

ರಾಜಕೀಯ ಬಹುಮತ ಎಂದರೆ, ಒಂದು ದೊಡ್ಡ ಸಂಖ್ಯೆಯ ಜನ ಒಂದು ರಾಜಕೀಯ ಪಕ್ಷವನ್ನು ಅದರ ಗುಣಾವಗುಣಗಳ, ಸಾಧನೆ–ವೈಫಲ್ಯಗಳ ಮತ್ತು ನಾಯಕತ್ವದ ಒಳಿತು–ಕೆಡುಕುಗಳ ಪರಾಮರ್ಶೆ ನಡೆಸಿ ಆ ಪಕ್ಷಕ್ಕೆ ನೀಡುವ ಬೆಂಬಲ. ಮತಭ್ರಾಮಕ ಬಹುಮತ ಎಂದರೆ, ಒಂದು ರಾಜಕೀಯ ಪಕ್ಷವು ಕಪೋಲಕಲ್ಪಿತ ವೈರಿಯನ್ನು ಸೃಷ್ಟಿಸಿಕೊಂಡು ಬಹುಸಂಖ್ಯಾತ ಜನರ ಧರ್ಮರಕ್ಷಣೆ ತನ್ನಿಂದ ಮಾತ್ರ ಸಾಧ್ಯವೆಂದು ನಂಬಿಸಿ ಆ ಧರ್ಮಕ್ಕೆ ಸೇರಿದವರ ಮತಗಳನ್ನು ತನ್ನ ಸುತ್ತ ಧ್ರುವೀಕರಿಸಿಕೊಳ್ಳುವುದು.

ರಾಜಕೀಯ ಬಹುಮತ ಬದಲಾಗುತ್ತಿರುತ್ತದೆ, ಮತಭ್ರಾಮಕ ಬಹುಮತ ಒಮ್ಮೆ ಸೃಷ್ಟಿಯಾಗಿಬಿಟ್ಟರೆ ಬಹುಕಾಲ ಉಳಿಯುತ್ತದೆ. ಮತಭ್ರಾಮಕ ಬಹುಮತವನ್ನು ಮುಂದುವರಿಸಲು ಬಹುಸಂಖ್ಯಾತ ಧರ್ಮದವರಲ್ಲಿ ಒಂದು ಭಯ ಸದಾ ಜೀವಂತವಾಗಿ ಇರಬೇಕು. ಭಯ ಜೀವಂತವಾಗಿ ಇರಬೇಕಾದರೆ ಬಹುಸಂಖ್ಯಾತರ ನಡುವೆ ಆಗೊಂದು ಈಗೊಂದು ಹೆಣ ಉರುಳುತ್ತಿರಬೇಕು. ಹೆಣ ಉರುಳಲು ಬೇಕಾದ ಕೋಮುಪ್ರಚೋದನೆ ನಿರಂತರವಾಗಿ ಆಗುತ್ತಿರಬೇಕು. ಬೀದಿ ಕಾಳಗದಲ್ಲಿ ಉರುಳಿದ ಹೆಣಗಳನ್ನೂ ತಮ್ಮವರದ್ದೆಂದು ತಬ್ಬಿಕೊಳ್ಳಬೇಕು. ಕರಾವಳಿಯಲ್ಲಿ ಆಗುತ್ತಿರುವುದು ಇದೇ ಅಲ್ಲವೆ?



ಕರಾವಳಿಯಲ್ಲಿ ವೈದಿಕ ಹಿಂದೂವಾದಕ್ಕೆ ಸಣ್ಣಮಟ್ಟದ ಪ್ರತಿರೋಧವನ್ನಾದರೂ ಒಡ್ಡಬಲ್ಲ ಲಿಂಗಾಯತರಿಲ್ಲ. ದಲಿತರ ಸಂಖ್ಯೆ ದೊಡ್ಡದೇನಿಲ್ಲ. ಅಲ್ಲಿ ಬಹುಸಂಖ್ಯಾತರಾಗಿರುವವರು ರಾಜಕೀಯ ಪ್ರಜ್ಞೆಯೊಂದನ್ನು ಬೆಳೆಸಿಕೊಳ್ಳದ ಹಿಂದುಳಿದ ಜಾತಿಗಳು. ಅಷ್ಟೇ ಅಲ್ಲ, ಹಸಿವು ಸೇರಿದಂತೆ ಮೂಲಭೂತ ಆರ್ಥಿಕ ಅವಶ್ಯಕತೆಗಳು ಅಲ್ಲಿ ಜನರಿಗೆ ಸಮಸ್ಯೆಯಾಗಿ ಉಳಿದಿಲ್ಲ. ಮಾಮೂಲಿ ಜನಪರ–ಕಲ್ಯಾಣ ಕಾರ್ಯಕ್ರಮಗಳನ್ನು ಮುಂದಿಟ್ಟುಕೊಂಡು ಮಾಡುವ ರಾಜಕೀಯಕ್ಕೆ ಅಲ್ಲಿ ಗಿರಾಕಿಗಳು ಕಡಿಮೆ. ಮತಭ್ರಾಮಕ ಬಹುಮತವೊಂದರ ಸೃಷ್ಟಿಗೆ ಎಲ್ಲವೂ ಪೂರಕ. ಪೂರಕವಲ್ಲದ ಅಲ್ಲಿನ ನಾಡ ಸಂಸ್ಕೃತಿಯನ್ನು ವೈದಿಕವಾದವು ಒಳಹೊಕ್ಕು ಭೇದಿಸಿಯಾಗಿದೆ. ಮತಭ್ರಾಮಕ ಬಹುಮತವು ಒಂದು ಪಕ್ಷದ ಪರವಾಗಿ ಒಮ್ಮೆ ರೂಪುಗೊಂಡರೆ ಆಮೇಲೆ ಆ ಪಕ್ಷ ಮತ್ತು ಅದರ ಪ್ರತಿನಿಧಿಗಳು ಏನೇ ಅನಾಹುತ ಮಾಡಿದರೂ ಗೆಲ್ಲಬಹುದು. ಎಷ್ಟೇ ಕೊಳಕು ಮಾತುಗಳನ್ನು ಆಡಿಯೂ ದಕ್ಕಿಸಿಕೊಳ್ಳಬಹುದು. ‘ಪೆಟ್ರೋಲ್ ಬೆಲೆ ಲೀಟರ್‌ಗೆ 500 ರೂಪಾಯಿ ಆದರೂ ನಿಷ್ಠೆ ಬದಲಿಸುವುದಿಲ್ಲ’ ಅಂತ ಅಲ್ಲೊಬ್ಬ ಮತದಾರ ಹೇಳಿದ್ದನ್ನು ಈ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬೇಕು.

ದುರ್ದೈವ ಎಂದರೆ, ಕರಾವಳಿಯಲ್ಲಿ ಇದನ್ನೆಲ್ಲಾ ಪ್ರಶ್ನಿಸುವ ಬಲಿಷ್ಠ ಮಾಧ್ಯಮ ಇಲ್ಲ. ಧಾರ್ಮಿಕ ಮುಂದಾಳುಗಳಿಲ್ಲ. ನಾಗರಿಕ ಸಂಘಟನೆಗಳಿಲ್ಲ. ಅಲ್ಲಿನ ಅಪಾಯಕಾರಿ ರಾಜಕೀಯವನ್ನು ಇನ್ನೊಂದು ರಾಜಕೀಯ ಪಕ್ಷವೇ ಹಿಮ್ಮೆಟ್ಟಿಸಬೇಕಿದೆ. ಆದರೆ, ವಿಧಾನಸಭಾ ಚುನಾವಣೆಗಳಲ್ಲಿ ಹತ್ತು ವರ್ಷಗಳಿಂದೀಚೆಗೆ ಮತ್ತು ಲೋಕಸಭಾ ಚುನಾವಣೆಗಳಲ್ಲಿ 35 ವರ್ಷಗಳಿಂದೀಚೆಗೆ ಸತತ ಸೋಲುಂಡ ನಂತರವೂ ಕಾಂಗ್ರೆಸ್ ಪಕ್ಷವು ಜಿಲ್ಲೆಯಲ್ಲಿ ದಟ್ಟೈಸುತ್ತಿರುವ ಮತಭ್ರಾಮಕ ಬಹುಮತವನ್ನು ಗಂಭೀರವಾಗಿ ಪರಿಗಣಿಸಿಯೇ ಇಲ್ಲ. ಬದಲಿಗೆ ಕೋಮುವಾದವನ್ನು ಪೋಷಿಸುವ ಸ್ಥಳೀಯ ಧರ್ಮೋದ್ಯಮಿಗಳ ಜತೆ ಕಾಂಗ್ರೆಸ್ ನಾಯಕರು ‘ಗುರು–ಶಿಷ್ಯ’ ಸಂಬಂಧ ಹೊಂದಿದ್ದಾರೆ. ಜಿಲ್ಲೆಯಲ್ಲಿ ಈ ಶಕ್ತಿಗಳ ವಿರುದ್ಧ ಪ್ರಾಮಾಣಿಕವಾಗಿ ಸೆಣಸುತ್ತಿರುವವರನ್ನು ತಮ್ಮ ವೈರಿಗಳೆಂದು ಕಾಣುತ್ತಾರೆ. ಅದೇವೇಳೆ, ಮತಭ್ರಾಮಕ ಬಹುಮತವನ್ನು ಪೊರೆಯುವ ದೊಡ್ಡ ವ್ಯಕ್ತಿಗಳ ಕೂದಲು ಕೊಂಕಿದರೂ ಸಾಕು ‘ನಿಮ್ಮ ಜತೆ ನಾವಿದ್ದೇವೆ’ ಎಂದು ಅಭಯ ನೀಡುತ್ತಾರೆ.

ಏಪ್ರಿಲ್ 27ರಂದು ಮಂಗಳೂರಿನಲ್ಲಿ ಜನ ಗುಂಪುಗೂಡಿ ವ್ಯಕ್ತಿಯೊಬ್ಬರನ್ನು ಥಳಿಸಿ ಕೊಂದ ಪ್ರಕರಣವು ಧರ್ಮದ್ವೇಷದ ವಿಷವು ಕರಾವಳಿಯ ಸಾಮಾನ್ಯ ಜನರಲ್ಲೂ ತೀವ್ರವಾಗಿ ಹಬ್ಬಲಾರಂಭಿಸಿದೆ ಎನ್ನುವುದಕ್ಕೆ ಸಾಕ್ಷಿ. ಆ ಗುಂಪುಹಲ್ಲೆಯಲ್ಲಿ ದಾರುಣವಾಗಿ ಜೀವ ಕಳೆದುಕೊಂಡದ್ದು ಹೊರರಾಜ್ಯದ ಅಮಾಯಕ ಕಾರ್ಮಿಕ ಮಾತ್ರವಲ್ಲ, ರಾಜ್ಯದಲ್ಲಿ ಅಧಿಕಾರ ಹೊತ್ತಿರುವ ಕಾಂಗ್ರೆಸ್ ಪಕ್ಷ ಕೂಡ.

ಚುರುಮುರಿ



ಉಗ್ರ ಸಿಂಧೂರ

• ಡಿ.ಎಸ್.ಲಿಂಗರಾಜು

‘ಹಲೋ, ಪಂಟ್ರಣ್ಣ ಮಾತಾಡದು. ಏನ್ರಿ ಸುಮ್ಮಗಿರನಾರದೆ ಭಾರತಕ್ಕನ ಗೋಮಾಳಕ್ಕೆ ನುಗ್ಗಿ ಎಣ್ಣೆಂಗುಸ್ರ ಸಿಂಧೂರ ಅಳಿಸಿದ್ದೀರಂತೆ. ಯಾಕೆ ಅಂತ ಕೇಳಿದ್ಕೆ ನಮೋ ಮಾವನಿಗೇ ಹೋಗಿ ಹೇಳು ಅಂದಿರಂತೆ. ಯಾಕೆ ತಿಮಿರ?’

‘ಅಡ್ಡಬಿದ್ದೆ ಪಂಟ್ರಣ್ಣ, ಅವರ ಗೋಮಾಳಕ್ಕೆ ಹೋಗಿದ್ದು ನಮ್ಮ ಉಗ್ರಣ್ತಮ್ಮರು. ನಾವಲ್ಲ. ಹುಡ್ಲು ‘ಇದು ನಮ್ಮ ಗೋಮಾಳ. ಇಲ್ಲಿಂದ ನಡೀರಿ’ ಅಂದವಂತೆ ಅಷ್ಟೀಯೆ’.

‘ಭಾರತಕ್ಕನ ವಂಶಸ್ಥರು ಅಲ್ಲೇ ತರಗು ಗುಡಿಸಿ ಮನೆ ಕಟ್ಟದೋರು ಕನ್ರಿ. ನೀವು ನುಸುಳಿಕ್ಯಂಡು ಬಂದೋರು’.

‘ಅಣ್ಣೆ ಒಪ್ಪೊತ್ತಿನ ಗಂಜಿಗೂ ಕಾಸಿಲ್ದಂಗಾಗ್ಯದೆ. ಯಾರುನ್ನ ಕೇಳಿದ್ರೂ ‘ಏನಾದ್ರೂ ಆಸ್ತಿ ಅಡ ಮಡಗಿ ಆಮೇಲೆ ನೋಡಮು’ ಅಂತರೆ. ಭಾರತಕ್ಕನ ಜೊತೆಗೆ ಮಾತಾಡಿ ಹಾರಾಟ ನಿಲ್ಲುಸ್ತೀರಾ?’

‘ಕೇಳಿದೋ ಕನಪ್ಪ. ‘ಮೊದಲು ಕಾಲು ಕೆರಕಂದು ಬಂದೋರು ಅವರು. ಒತ್ತುವರಿ ಮಾಡಿಕ್ಯಂದಿರ ಜಾಗ ಬುಟ್ಟು ಹೋಗಲಿ, ಉಗ್ರಣ್ಣಗಳಿಗೆ ಉಣ್ಣಕಿಕ್ಕದು ನಿಲ್ಲಿಸ್ಲಿ. ಈಗ ನಿಮ್ದೇನೂ ನ್ಯಾಯ–ಪಂಚಾತ್ಕೆ ಬ್ಯಾಡ’ ಅಂದುಬುಟ್ರು. ದೊಡ್ಡ ಕುಳದ ಕುಟ್ಟೆ ನಿಮಗ್ಯಾಕ್ರಿ ಜಗಳ’.

‘ಅವರು ದೊಡ್ಡೋರಾದ್ರೆ ಅವರ ಮನೆಗೆ ಕನಣ್ಣ, ತಿಳುದೋರು ನೀವು ದೊಡ್ಡೋರಿಗೊಂದು ಚಿಕ್ಕೋರಿಗೊಂದು ನ್ಯಾಯ ಮಾಡಬಾರ್ದು’.

‘ಅಲ್ಲ ಕಪ್ಪ, ಅವರ ತಾವು ಸುಮಾರು ಲಕ್ಷ್ಮಿಪಟಾಕಿ, ಮತಾಪಿನ ಕಡ್ಡಿ, ಸುದರ್ಶನ ಚಕ್ರ, ಮಾಮೇರಿ ರಾಕೆಟ್ಟವೆ ಗೊತ್ತೇನ್ರಿ? ಅವುನ್ನೆಲ್ಲಾ ಬುಟ್ರೆ ಉಡೀಸ್ ಆಗೋಯ್ತಿರ’.

‘ನಮ್ಮ ತಾವೂ ನೀವು ಕೊಟ್ಟವು ನಾಕು ಭೂಚಕ್ರ, ಎರಡು ಆನೆ ಪಟಾಕಿ ಅವೆ ಕನಣ್ಣ, ನಮ್ಮ ಭಾವ ನೆಂಟರೂ ಒಂದೆರಡು ಕೊಡ್ತೀವಿ ಅಂದವ್ರೆ. ನಾವೂ ರಾಕೆಟ್ ಬುಡದೇಯ’.

‘ಮಂತನಸ್ಥರು ಆಡೋ ಮಾತೇನ್ರಿ ಇದು. ಊರ್ಜಿತಾಗೋ ಕೇಮೆ ಮಾಡ್ರಿ. ರಾಜೀಕಬೂಲಾದ ಮೇಲೂ ನೀವು ಮತಾಪು ಹಾರಿಸದು ನಿಲ್ಸಿಲ್ಲ. ಹುಸಾರು ಆಯ ನೋಡಿ ಹೊಡೆದುಬುಡ್ತರೆ. ಕೈ ತೋರಿಸಿ ಅವಲಕ್ಷಣ ಅನ್ನಿಸ್ಕಂದಿದ್ದೀರಿ. ನಿಮ್ಮ ಹಣೇಬರಹಕ್ಕೆ ಯಾರೇನು ಮಾಡಕ್ಕಾದದು’.

ಚರ್ಚೆ

ಹುಲಿಗೆ ಗಂಟೆ ಕಟ್ಟುವ ಧೀರರು!

ಬಹುತೇಕ ಆಸ್ಪತ್ರೆಗಳು ಅಪಾರದರ್ಶಕವಾಗಿ ಇರುವುದಷ್ಟೇ ಅಲ್ಲ, ಮಧ್ಯಮವರ್ಗ, ಕೆಳವರ್ಗದವರ ಪಾಲಿಗೆ ಆರ್ಥಿಕವಾಗಿ ಭರಿಸಲಾಗದ ಹೊರೆಯೂ ಆಗಿವೆ

• ಪು.ಸೂ.ಲಕ್ಷ್ಮೀನಾರಾಯಣ ರಾವ್

‘**ಐಸಿಯು:** ಎಲ್ಲಿದೆ ಪಾರದರ್ಶಕತೆ?’ ಎಂಬ ಲೇಖನದಲ್ಲಿ (ಸಂಗತ, ಮೇ 9), ಕೆಲವು ಖಾಸಗಿ ಆಸ್ಪತ್ರೆಗಳಲ್ಲಿ ಕಂಡುಬರುವ ಅಪಾರದರ್ಶಕತೆಯ ಅವಾಂತರಗಳ ಕುರಿತು ಸದಾಶಿವ್ ಸೊರಟೂರು ಅಳಲು ತೋಡಿಕೊಂಡಿದ್ದಾರೆ. ಹೌದು, ನಮ್ಮ ಪ್ರೀತಿಪಾತ್ರರಾದವರು ತೀವ್ರವಾದ ಅನಾರೋಗ್ಯಕ್ಕೆ ತುತ್ತಾಗಿ ಆಸ್ಪತ್ರೆಗೆ ಅದರಲ್ಲೂ ಐಸಿಯುಗೆ ಸೇರಬೇಕಾದ ಪರಿಸ್ಥಿತಿ ಬಂದಾಗ ನಮ್ಮ ದುಗುಡ ಹೇಳತೀರದು.

ಅತಿಯಾದ ಪ್ರೀತಿ ಇರುವ ಕಡೆ ಕೆಟ್ಟದ್ದರ ಭಯವೇ ನಮ್ಮನ್ನು ಕಾಡುತ್ತಿರುತ್ತದೆ. ಇಂತಹ ಸಂದರ್ಭದಲ್ಲಿ ವೈದ್ಯರೊಬ್ಬರೇ ತಮ್ಮ ಪಾಲಿನ ದೇವರು ಎಂದು ಜನ ಭಾವಿಸುತ್ತಾರೆ. ‘ನೀವು ಹೇಗೆ ಹೇಳಿದರೆ ಹಾಗೆ ಮಾಡ್ತೀವಿ ಸರ್’ ಅಂತ ವೈದ್ಯರಿಗೆ ಶರಣಾಗತರಾಗುತ್ತಾರೆ. ಅಂತಹ ಗಳಿಗೆಯಲ್ಲಿ ಮಾನವೀಯವಾದ ರೀತಿಯಲ್ಲಿ ಉಪಚರಿಸುವ, ಸಲಹೆಗಳನ್ನು ನೀಡುವ ವೈದ್ಯರನ್ನು ಜನ ತಮ್ಮ ಜೀವಮಾನದಲ್ಲೇ ಮರೆಯದೆ ಇರುವಂತಹ ಪ್ರಕರಣಗಳು ಬಹುಶಃ ಪ್ರತಿಯೊಬ್ಬರ ಜೀವಮಾನದಲ್ಲೂ ನಡೆದಿರುತ್ತವೆ. ಇಂದಿಗೂ ಅಂತಹ ವೈದ್ಯರು ಇದ್ದಾರೆ.

ಆದರೆ ಜಾಗತೀಕರಣದಿಂದೀಚೆಗೆ ವೈದ್ಯಕೀಯ ಕ್ಷೇತ್ರವು ವ್ಯಾಪಾರೀಕರಣಕ್ಕೆ ಒಳಗಾಗಿ, ಕೆಲವು ವೈದ್ಯರು ಸಹ ರೋಗಿಗಳ ಶೋಷಣೆಯಲ್ಲಿ ಶಾಮೀಲಾಗಿರುತ್ತಾರೆಯೇ ಎಂಬ ಅನುಮಾನ ಕಾಡುತ್ತದೆ. ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳು ಇಂತಿಷ್ಟು ವರಮಾನ ಬರುವ ಹಾಗೆ ಮಾಡಬೇಕೆಂದು ವೈದ್ಯರಿಗೆ ‘ಟಾರ್ಗೆಟ್’ ನಿಗದಿಗೊಳಿಸಿರುತ್ತವಂತೆ! ಅವರು ಅವನ್ನು ಪೂರೈಸದಿದ್ದರೆ ತಮ್ಮ ಉದ್ಯೋಗವನ್ನೇ ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಅವರು ರೋಗಿಯನ್ನು ಇಲ್ಲಸಲ್ಲದ ತನಿಖೆಗೆ ಒಳಪಡಿಸಿ, ಆಸ್ಪತ್ರೆಯ ವರಮಾನ ಹಾಗೂ ತಮ್ಮ ಭದ್ರತೆಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಾರೆ.

ಇತ್ತೀಚೆಗೆ ನನ್ನ ನೆಂಟನೊಬ್ಬ ಉಸಿರಾಟದ ತೊಂದರೆಗೆ ಸಿಲುಕಿ ನಗರದ ಸುಪ್ರಸಿದ್ಧ ಆಸ್ಪತ್ರೆಯ ಐಸಿಯುಗೆ ದಾಖಲಾದ. ಕೃತಕ ಉಸಿರಾಟದ ವ್ಯವಸ್ಥೆ ಅನಿವಾರ್ಯವಾಯಿತು. ಆದರೆ ಆ ಆಸ್ಪತ್ರೆಯ ಐಸಿಯು ಶುಲ್ಕ ದಿನಕ್ಕೆ ₹70 ಸಾವಿರ! ಔಷಧಿಗಳು, ವೈದ್ಯರ ಶುಲ್ಕ, ದಾದಿಯರ ಆರೈಕೆಯ ವೆಚ್ಚ ಎಲ್ಲ ಸೇರಿ ದಿನಕ್ಕೆ ಒಂದರಿಂದ ಒಂದೂಕಾಲು ಲಕ್ಷ ಆಗತೊಡಗಿತು. ರೋಗಿಯ ಆರೋಗ್ಯ ಏನೇನೂ ಸುಧಾರಿಸಲಿಲ್ಲ. ಗಾಬರಿಗೊಂಡ ಮನೆಯವರು ಆಸ್ಪತ್ರೆಯನ್ನು ಬದಲಾವಣೆ ಮಾಡುವ ತೀರ್ಮಾನಕ್ಕೆ ಬಂದರು. ಮೊದಲು ಒಪ್ಪಿಕೊಂಡ ಆ ಆಸ್ಪತ್ರೆಯ ಉನ್ನತ ವೈದ್ಯಾಧಿಕಾರಿ, ಬಿಡುಗಡೆ ಮಾಡದೆ ‘ನಿಮಗೆ ಬೇರೆ ವ್ಯವಸ್ಥೆ ಮಾಡುತ್ತೇವೆ’ ಎಂದು ಹೇಳಿ, ಅದೇ ಐಸಿಯುನ ದಿನದ ಶುಲ್ಕವನ್ನು ₹20 ಸಾವಿರಕ್ಕೆ ಇಳಿಸಿದರು. ಉಳಿದ ಖರ್ಚುಗಳು ಅಂದಾಜು ದಿನಕ್ಕೆ ₹20 ಸಾವಿರ ಆಗಬಹುದು ಎಂದರು. ಆಶ್ಚರ್ಯವಾದರೂ ಮನೆಯವರು ಅದಕ್ಕೆ ಸಮ್ಮತಿಸಿದರು.

ಮತ್ತೊಂದು ಆಶ್ಚರ್ಯವೆಂದರೆ, ಪಕ್ಕದ ಹಾಸಿಗೆಯವರ ರಹಸ್ಯ ಹಿತವಚನದಂತೆ, ಅದೇ ಆಸ್ಪತ್ರೆಯ ಔಷಧದ ಅಂಗಡಿಯಲ್ಲಿ ದಿನಕ್ಕೆ ಹದಿನೇಳು ಸಾವಿರಕ್ಕೆ ಕೊಳ್ಳುತ್ತಿದ್ದ ಔಷಧಿಯು ಹೊರಗಿನ ಔಷಧ ಮಾರಾಟ ಪ್ರತಿನಿಧಿಯಿಂದ ಬರೀ ಏಳು ಸಾವಿರಕ್ಕೆ ಲಭ್ಯವಾಗತೊಡಗಿತು! (ಅಲ್ಲಲ್ಲಿ ಕಾಣುವ ಜನೌಷಧಿ ಕೇಂದ್ರಗಳು ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ!) ಅದುವರೆಗೆ ಕೇಳಿದ್ದ ಔಷಧಿ ಮಾಫಿಯಾ ಜೊತೆಗೆ ಆಸ್ಪತ್ರೆ ಮಾಫಿಯಾದ ಪರಿಚಯವೂ ಆಯಿತು. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಆಸ್ಪತ್ರೆಯನ್ನು ಸುಸಜ್ಜಿತ ಯಂತ್ರೋಪಕರಣಗಳೊಂದಿಗೆ ಆರಂಭಿಸಿದವರು ದಿನನಿತ್ಯ ತಗಲುವ ಖರ್ಚುಗಳನ್ನು, ವೈದ್ಯರು ಮತ್ತಿತರ ಸಿಬ್ಬಂದಿಯ ದುಬಾರಿ ಸಂಬಳವನ್ನು ತಪ್ಪದೇ ನಿರ್ವಹಿಸಬೇಕಾದರೆ ಈ ವಸೂಲಿ ಅನಿವಾರ್ಯ ಎಂಬ ವಾದ ಮಂಡಿಸುತ್ತಾರೆ ಕೆಲವರು. ಕೋಟಿಗಟ್ಟಲೆ ದೇಣಿಗೆ ಮತ್ತು ಶುಲ್ಕವನ್ನು ಪಾವತಿಸಿ ಉನ್ನತ ವೈದ್ಯಕೀಯ ಶಿಕ್ಷಣವನ್ನು ಹಾಗೂ ತಜ್ಞತೆಗಾಗಿ ಬೇರೆ ಬೇರೆ ಡಿಪ್ಲೊಮಾಗಳನ್ನು ಪಡೆದುಕೊಂಡು ಬಂದ ವೈದ್ಯರು ಸಾಮಾನ್ಯ ವೇತನಕ್ಕೆ ಸೇವೆ ಸಲ್ಲಿಸಲು ಸಾಧ್ಯವೇ?



ತೆರೆಮರೆಯಲ್ಲಿ ತಯಾರಾಗುವ ಔಷಧಿಗಳ ಬೆಲೆಯನ್ನಂತೂ ಸಾಮಾನ್ಯರಿಂದ ತಡೆದುಕೊಳ್ಳಲಾಗದು. ಈ ಎಲ್ಲ ಸಮಸ್ಯೆಗಳ ಮೂಲ ಯಾವುದು? ಪರಿಹಾರ ಹೇಗೆ? ಬೆಕ್ಕಿಗೆ ಅಲ್ಲ, ಹುಲಿಗೆ ಗಂಟೆ ಕಟ್ಟುವ ಇಂತಹ ಧೀರ ಸರ್ಕಾರ ಬಹುಶಃ ಯಾವ ದೇಶದಲ್ಲೂ ಇರಲಾರದು!

ಲೇಖಕರು ಹೇಳುವ ಹಾಗೆ, ಪಾರದರ್ಶಕತೆ ಇಲ್ಲದಿರುವುದಷ್ಟೇ ಅಲ್ಲದೆ ಮಧ್ಯಮವರ್ಗ ಹಾಗೂ ಕೆಳವರ್ಗದವರ ಪಾಲಿಗೆ ಆರ್ಥಿಕವಾಗಿ ಭರಿಸಲಾಗದ ಹೊರೆಯೂ ಆಗಿವೆ ಈ ಆಸ್ಪತ್ರೆಗಳು. ಕೆಲವರು ಕಂಡ ಕಂಡ ಕಡೆ ಸಾಲ ಮಾಡಿ ಅದನ್ನು ಮರುಪಾವತಿಸಲು ಆಸ್ತಿಪಾಸ್ತಿ ಮಾರಿಕೊಂಡ ಉದಾಹರಣೆಗಳಿವೆ. ಮತ್ತೊಂದು ಕಡೆ, ವೈದ್ಯಕೀಯ ವಿಮಾ ಪ್ರೀಮಿಯಮ್ಮುಗಳನ್ನು ಸಹ ತುಂಬಾ ದುಬಾರಿ ಮಾಡಿರುವುದು ಮತ್ತು ಅದು ಸಾಲದು ಎಂದು ಕೇಂದ್ರ ಸರ್ಕಾರ ಶೇ 18ರಷ್ಟು ಜಿಎಸ್‌ಟಿಯನ್ನು ಬೇರೆ ಹೇರಿರುವುದು ಹೆದರುವವನ ಮೇಲೆ ಹಾವು ಎಸೆದಂತೆ ಆಗಿದೆ. ಸರ್ಕಾರಿ ಆಸ್ಪತ್ರೆಗಳಂತೂ ತುಂಬಾ ಶೋಚನೀಯ ಸ್ಥಿತಿಯನ್ನು ತಲುಪಿವೆ.

ಇತ್ತೀಚೆಗೆ ಶಿಕ್ಷಣ ಹಾಗೂ ವೈದ್ಯಕೀಯ ಕ್ಷೇತ್ರಗಳೆರಡೂ ಯಾರ ನಿಯಂತ್ರಣಕ್ಕೂ ಒಳಪಡದೆ, ಕವಿ ದ.ರಾ.ಬೇಂದ್ರೆಯವರು ತಮ್ಮ ಕವನವೊಂದರಲ್ಲಿ ಹೇಳಿರುವಂತೆ, ‘ಕುರುಡು ಕಾಂಚಾಣ ಕುಣಿಯುತಲಿತ್ತು, ಕಾಲಿಗೆ ಬಿದ್ದವರ ತುಳಿಯುತಲಿತ್ತು’ ಎಂಬಂತೆ ಜನರನ್ನು ಹಿಂಡಿ ಹಿಪ್ಪೆ ಮಾಡುತ್ತಿವೆ.

ವಾಚಕರ ವಾಣಿ

ದಿಟ್ಟ ಮಹಿಳೆಯರ ಹಿಂದಿನ ಧ್ವನಿ

ವಾಯುಪಡೆ ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಮತ್ತು ಭಾರತೀಯ ಸೇನೆಯ ಕರ್ನಲ್ ಸೋಫಿಯಾ ಖುರೇಷಿ ಇಬ್ಬರೂ ಭಾರತ ಮತ್ತು ಪಾಕಿಸ್ತಾನದ ನಡುವಿನ ಉದ್ವಿಗ್ನ ಸ್ಥಿತಿಯ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಇತ್ತೀಚೆಗೆ ಮಾತನಾಡಿದರು. ಇಂತಹದ್ದೊಂದು ಕ್ಷಣ ಸಾಧ್ಯವಾದದ್ದು ಇನ್ನಿಬ್ಬರು ಧೈರ್ಯವಂತ ಮಹಿಳೆಯರ ಕಾರಣದಿಂದ ಎಂಬುದು ಗಮನಾರ್ಹ. ಅವರನ್ನು ನಾವು ಆದರದಿಂದ ನೆನೆಯಬೇಕು.

ಸಾವಿತ್ರಿಬಾಯಿ ಫುಲೆ ಮತ್ತು ಫಾತಿಮಾ ಶೇಖ್ ಬಹುಕಾಲದ ಹಿಂದೆ ಸಮಾಜದ ಕಟ್ಟುಪಾಡುಗಳನ್ನು ಎದುರಿಸಿ ನಿಂತವರು. ಅವರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ನಮ್ಮ ದೇಶದಲ್ಲಿ ಮಹಿಳೆಯರಿಗೆ ಶಿಕ್ಷಣ ನೀಡಲು ಹೋರಾಡಿದರು. ಅವರ ಹೋರಾಟ, ಧೈರ್ಯ ಇಂದು ಪ್ರತಿ ಮಹಿಳೆಯಲ್ಲಿ ಪ್ರತಿಧ್ವನಿಸುತ್ತಿದೆ. ಅದರಂತೆ, ವ್ಯೋಮಿಕಾ ಮತ್ತು ಸೋಫಿಯಾ ಇಂದು ತಂಡ ನಾಯಕರಾಗಿ, ಭಾರತ ಸೇನೆಯಲ್ಲಿ ದೇಶಕ್ಕೆ ಸೇವೆ ಸಲ್ಲಿಸುವವರಾಗಿ ನಿಂತಿದ್ದಾರೆ.

ಪ್ರಕಾಶ ಅರಸ್, ಬೆಂಗಳೂರು

ಇ– ಆಸ್ತಿ: ಆನ್‌ಲೈನ್ ಪಾವತಿಗೆ ಅವಕಾಶವಿರಲಿ

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಖಾಸಗಿ ಆಸ್ತಿಗಳನ್ನು ಇ– ಆಸ್ತಿ ತಂತ್ರಾಂಶದಲ್ಲಿ ದಾಖಲಿಸುತ್ತಿರುವುದು ಉತ್ತಮವಾದ ಕೆಲಸ. ಆದರೆ ಆಸ್ತಿ ಮಾಲೀಕರು ಅವರ ಆಸ್ತಿಗಳ ತೆರಿಗೆ ಪಾವತಿಸಲು ಪ್ರತಿವರ್ಷ ಚಲನ್ ಪಡೆದು, ಅದನ್ನು ಪಾವತಿಸಲು ಸಂಬಂಧಿಸಿದ ಬ್ಯಾಂಕ್‌ಗೆ ತೆರಳಿ ಸರದಿಯಲ್ಲಿ ನಿಲ್ಲಬೇಕಿದೆ. ನಂತರ ಇ– ಆಸ್ತಿ ನಮೂನೆ– 2/3 ಪಡೆಯಲು ಮತ್ತೆ ಕಚೇರಿಗೆ ತೆರಳಿ ತೆರಿಗೆ ಅಪ್‌ಡೇಟ್ ಮಾಡಿಸಬೇಕಿದೆ. ಇದಕ್ಕೆ ಬಹಳಷ್ಟು ಸಮಯ ತಗಲುತ್ತಿದ್ದು, ಸಾರ್ವಜನಿಕರಿಗೆ ತೊಂದರೆ ಆಗಿ, ತೆರಿಗೆ ಸಂಗ್ರಹ ಕಾರ್ಯ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ. ಆದ್ದರಿಂದ ಸಾರ್ವಜನಿಕರು ಸುಲಭವಾಗಿ ಇ– ಆಸ್ತಿ ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ತೆರಿಗೆ ಪಾವತಿಸಿ ನಮೂನೆ– 2/3 ಪಡೆಯಲು ಅವಕಾಶ ಕಲ್ಪಿಸಬೇಕು. ಇದರಿಂದ ಸಾರ್ವಜನಿಕರಿಗೆ ಸಮಯ ಉಳಿತಾಯವಾಗುತ್ತದೆ ಮತ್ತು ಅನುಕೂಲವಾಗುತ್ತದೆ. ನಗರ ಸ್ಥಳೀಯ ಸಂಸ್ಥೆಗಳು ತೆರಿಗೆ ಸಂಗ್ರಹದ ಗುರಿ ತಲುಪಲು ಸಹ ಸಾಧ್ಯವಾಗುತ್ತದೆ.

ನಯನ ಮಧು, ದೊಡ್ಡಬಳ್ಳಾಪುರ

ಎಲ್ಲಿ ಹೋಯಿತು ‘ಭಾರತ್ ರೈಸ್’?

ಕೇಂದ್ರ ಸರ್ಕಾರ 2023ರಲ್ಲಿ ‘ಭಾರತ್ ರೈಸ್’ ಎಂಬ ಹೆಸರಿನಲ್ಲಿ 10 ಕೆ.ಜಿ. ಮೂಟೆಗೆ ₹290ರಂತೆ ದಪ್ಪಕ್ಕಿಯನ್ನು ಮುಕ್ತ ಮಾರುಕಟ್ಟೆಗೆ ಬಿಡುಗಡೆ ಮಾಡಿತು. ರಿಲಯನ್ಸ್ ಮಳಿಗೆಗಳಲ್ಲಿ ಇದು ಗ್ರಾಹಕರಿಗೆ ಲಭ್ಯವಾಗುತ್ತಿತ್ತು. ಗುಣಮಟ್ಟವೂ ಚೆನ್ನಾಗಿತ್ತು. ಇದೇ ರೀತಿಯ ಅಕ್ಕಿಗೆ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ₹45 ಮೇಲ್ಪಟ್ಟು ತೆರಬೇಕಾಗುತ್ತಿತ್ತು. ಅನ್ನಭಾಗ್ಯದ ಯೋಗವಿಲ್ಲದಂತಹ ನಮ್ಮಂತಹ ಮಧ್ಯಮ ವರ್ಗದ ಜನರಿಗೆ ಇದು ಬಹಳಷ್ಟು ಅನುಕೂಲಕರವಾಗಿತ್ತು. ಕೆಲವೇ ತಿಂಗಳಲ್ಲಿ ಈ ಅಕ್ಕಿಯ ಲಭ್ಯತೆ ಇಲ್ಲವಾಯಿತು. ಆಮೇಲೆ ಹಲವು ದಿನಗಳ ನಂತರ ಪುನಃ ಲಭ್ಯವಾಗಲು ಪ್ರಾರಂಭವಾಯಿತು. ಆದರೆ ಬೆಲೆ ₹340 ಆಗಿತ್ತು. ಈಗ ಮೂರು ತಿಂಗಳಿನಿಂದ ಅದೂ ಇಲ್ಲವಾಗಿದೆ. ಯಾಕೆ ಹೀಗೆ? ಕರ್ನಾಟಕವನ್ನು ಪ್ರತಿನಿಧಿಸುವ ಕೇಂದ್ರ ಸಚಿವರು, ಸಂಸದರು ಈ ಬಗ್ಗೆ ಗಮನಹರಿಸಬೇಕು.

ಗೋಸಾಡ ಕೃಷ್ಣ ಭಟ್, ಬೆಂಗಳೂರು

ಸಲೀಸ್– ಮಟಾಷ್!

‘ಕೆಮ್ಮಿದ್ರೆ ಖಲಾಸ್’
‘ಉಗ್ರರು ಉಡೀಸ್’
ಕನ್ನಡ ಸುದ್ದಿವಾಹಿನಿಗಳಿಗೆ
ಸಕಲವೂ ಸಲೀಸ್!
(ಜೊತೆಗೆ, ಕನ್ನಡ
‘ಮಟಾಷ್’!)

ಎಚ್.ಆನಂದರಾಮ ಶಾಸ್ತ್ರೀ
ಬೆಂಗಳೂರು

ಮರೆಯಾಗುತ್ತಿದೆ ನಾಗರಿಕ ಪ್ರಜ್ಞೆ

ನಾಗರಿಕ ಪ್ರಜ್ಞೆ ನೇಪಥ್ಯಕ್ಕೆ ಸರಿಯುತ್ತಿರುವುದನ್ನು ಸಿಬಂತಿ ಪದ್ಮನಾಭ ಕೆ.ವಿ. ಅವರ ಲೇಖನ (ಸಂಗತ, ಮೇ 10) ಚೆನ್ನಾಗಿ ತೆರೆದಿಟ್ಟಿದೆ. ಅವರು ಹೇಳಿದಂತೆ ಇಂದಿನ ಪೀಳಿಗೆ ನಾಗರಿಕ ಪ್ರಜ್ಞೆಯನ್ನು ಮರೆತು ಬದುಕುತ್ತಿದೆ. ಯಾವ ಅಪರಾಧ ಭಾವವೂ ಇಲ್ಲದೆ ಸಾರ್ವಜನಿಕ ಸೇವೆಗಳನ್ನು ಬಳಸಿಕೊಳ್ಳುತ್ತಿರುವ ಜವಾಬ್ದಾರಿ ಮರೆತ ಯುವಪೀಳಿಗೆಯನ್ನು ಕಂಡಾಗ ವಿಷಾದವಾಗುತ್ತದೆ. ತಿಂದ ಪ್ಲಾಸ್ಟಿಕ್ ತಟ್ಟೆ ಲೋಟ, ಕುಡಿದ ನೀರಿನ ಬಾಟಲಿ ಬಿಸಾಡುವುದು, ಎಲ್ಲೆಂದರಲ್ಲಿ ಉಗಿಯುವುದು, ಶೌಚಾಲಯದ ಬಳಕೆಯನ್ನಂತೂ ಕೇಳುವುದೇ ಬೇಡ. ಅದನ್ನು ಬಳಸಿದ ಮೇಲೆ ನೀರನ್ನು ಹಾಕಬೇಕೆಂಬ ಕನಿಷ್ಠ ಸಾಮಾನ್ಯ ಪ್ರಜ್ಞೆಯೂ ಎಷ್ಟೋ ಜನರಿಗೆ ಇರುವುದಿಲ್ಲ. ಅಷ್ಟೇ ಅಲ್ಲದೆ, ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ನಾಗರಿಕ ಪ್ರಜ್ಞೆಯ ಬಗ್ಗೆ ಪದೇ ಪದೇ ಅರಿವಿನ ಪಾಠಗಳನ್ನು ಮಾಡಲಾಗುತ್ತಿದೆ. ಜೊತೆಗೆ ವಿಶೇಷ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಳ್ಳಲಾಗುತ್ತಿದೆ. ಎನ್‌ಎಸ್‌ಎಸ್ ಮತ್ತು ಎನ್‌ಸಿಸಿಯಂತಹ ಕಾರ್ಯಕ್ರಮಗಳ ಅಡಿಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುತ್ತಿದ್ದರೂ ಕೆಲವು ಮಕ್ಕಳು ಇಂತಹ ಸಂದರ್ಭದಲ್ಲೂ ಕೆಲವೊಮ್ಮೆ ನಾಗರಿಕ ಪ್ರಜ್ಞೆ ಮರೆತಂತೆ ವರ್ತಿಸುತ್ತಾರೆ. ವಯಸ್ಸಿನ ಅಂತರ ಇಲ್ಲದೆ ವರ್ತಿಸುವ, ಕನಿಷ್ಠ ಗೌರವವನ್ನೂ ನೀಡದೆ, ತಪ್ಪನ್ನು ತಿಳಿಸಿದಾಗ ಅವರ ಮೇಲೆಯೇ ಜಗಳಕ್ಕೆ ಇಳಿಯುವ, ತಂಪುಪಾನೀಯಗಳ ಜೊತೆ ಮತ್ತೇರಿಸುವ ಮದ್ಯವನ್ನು ಮಿಶ್ರಣ ಮಾಡಿ ಕುಡಿದು ತರಗತಿಗಳಿಗೆ ಹಾಜರಾಗುವ ಯುವಪೀಳಿಗೆಯನ್ನು ಕಂಡಾಗ, ನಾವು ಏನನ್ನು ಕಲಿಸುತ್ತಿದ್ದೇವೆ ಎಂಬ ಸಂಶಯ ಮೂಡುತ್ತದೆ.

ಯಾವುದೋ ಲೋಕದಲ್ಲಿ ತೇಲುತ್ತಾ ಮತ್ತಿನಲ್ಲಿ ವಾಹನ ಚಲಾಯಿಸುವುದು ಇಂದು ಸರ್ವೇಸಾಮಾನ್ಯವಾಗಿದೆ. ಇದನ್ನು ಮಾಡುತ್ತಿರುವವರು ಏನೂ ಗೊತ್ತಿಲ್ಲದ ಮುಗ್ಧರಲ್ಲ. ಬದಲಿಗೆ ಪದವಿಗಳನ್ನು ಪಡೆದುಕೊಂಡು ಒಳ್ಳೆಯ ಉದ್ಯೋಗದಲ್ಲಿ ಇರುವ ನವ ನಾಗರಿಕರೇ ಆಗಿರುತ್ತಾರೆ. ಅಂತಹವರೇ ಇಂದು ಪರಿಸರಕ್ಕೆ ಮಾರಕವಾಗಿ ವರ್ತಿಸುತ್ತಿರುವುದು ವಿಷಾದದ ಸಂಗತಿ. ಬಾಳೆಹಣ್ಣು ತಿಂದು ಸಿಪ್ಪೆಯನ್ನು ರಸ್ತೆಯಲ್ಲಿ ಬಿಸಾಡುವ, ಸಿಗರೇಟ್ ಸೇದಿ ಇತರರ ಮುಖಕ್ಕೆ ಹೊಗೆ ಬಿಡುವ, ಶಾಲಾ–ಕಾಲೇಜುಗಳ ಬೀದಿ ಬದಿಗಳಲ್ಲಿ ವಾಹನಗಳ ಮೇಲೆ ಕೇಕ್ ಕಟ್ ಮಾಡಿ ಮುಖಗಳಿಗೆ ಬಳಿದುಕೊಂಡು ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಯುವಜನರನ್ನು ಕಂಡಾಗ, ಇವರಿಗೆ ಯಾವ ಲಂಗು ಲಗಾಮೂ ಇಲ್ಲವೆಂದು ಅನ್ನಿಸುತ್ತದೆ. ಬಸ್ ನಿಲ್ದಾಣಗಳಲ್ಲಿ, ರಸ್ತೆಯ ಅಕ್ಕಪಕ್ಕ ಇದನ್ನೆಲ್ಲ ನೋಡುತ್ತಾ ಹಿರಿಯ ನಾಗರಿಕರು ಮುಜುಗರದಿಂದ ಓಡಾಡುವ ಪರಿಸ್ಥಿತಿ ಬಂದಿದೆ. ಇಂತಹ ಯುವಜನ ದೇಶವನ್ನು ಕಾಪಿಡುವ ಬಗೆ ಹೇಗೆ? ಅವರ ಮುಂದಿನ ಭವಿಷ್ಯವನ್ನು ನೆನೆಸಿಕೊಂಡರೆ ಆತಂಕವಾಗುತ್ತದೆ. ಇದನ್ನೆಲ್ಲ ಹೇಗೆ ತಡೆಯುವುದು ಎಂಬುದೇ ನಮ್ಮ ಮುಂದಿರುವ ಸವಾಲು.

ಎಚ್.ಎಸ್.ಸನತ್ ಕುಮಾರ್, ಚಂದಾಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಭಾರತ–ಪಾಕಿಸ್ತಾನ ಸೇನಾ ಸಂಘರ್ಷ

ಜಾಲತಾಣಗಳಲ್ಲಿ ಸುಳ್ಳಿನ 'ಯುದ್ಧ'

ಅತ್ತ ಭಾರತ ಮತ್ತು ಪಾಕಿಸ್ತಾನದ ನಡುವೆ ಸೇನಾ ಸಂಘರ್ಷ ನಡೆಯುತ್ತಿದ್ದರೆ, ಇತ್ತ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳ ಪ್ರವಾಹವೇ ಹರಿಯುತ್ತಿತ್ತು. ಮುಖ್ಯವಾಹಿನಿಯಲ್ಲಿರುವ ಕೆಲವು ಮಾಧ್ಯಮಗಳು ಕೂಡ ವಾಸ್ತವ ಅಲ್ಲದ ಸುದ್ದಿಗಳನ್ನು ಪ್ರಕಟಿಸಿ ಮುಜುಗರ ಅನುಭವಿಸುವಂತಾಯಿತು. ಸುಳ್ಳು ಮಾಹಿತಿಯನ್ನೇ ತನ್ನ ಆಯುಧವಾಗಿ ಬಳಸುವ ಪಾಕಿಸ್ತಾನವು ಭಾರತದ ವಿರುದ್ಧ ಮಿಥ್ಯಾ ಸುದ್ದಿಗಳ ಸುರಿಮಳೆಯನ್ನೇ ಮಾಡಿತು. ಭಾರತದಲ್ಲೂ ಸಾಮಾಜಿಕ ಜಾಲತಾಣಗಳ ಬಳಕೆದಾರರು ಸುಳ್ಳು ಮಾಹಿತಿಗಳನ್ನು ಹಂಚಿಕೊಂಡರು. ಕದನ ವಿರಾಮದ ಕಾರಣಕ್ಕೆ ಎರಡೂ ರಾಷ್ಟ್ರಗಳ ನಡುವಿನ ಸೇನಾ ಸಂಘರ್ಷ ನಿಂತಿದೆ. ಆದರೆ, ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳ 'ಯುದ್ಧ' ಮುಂದುವರಿದಿದೆ

ಪ್ರಜಾವಾಣಿ ವಾರ್ತೆ

'ಪಾಕಿಸ್ತಾನವು ಬೆಂಗಳೂರು ಬಂದರನ್ನು (ಪೋರ್ಟ್‌) ನಾಶಪಡಿಸಿದೆ'

ಪಾಕಿಸ್ತಾನದವರು ಎನ್ನಲಾದ ಫವಾದ್ ಉರ್ ರೆಹಮಾನ್ ಅವರು 'ಎಕ್ಸ್' ವೇದಿಕೆಯಲ್ಲಿ ಮಾಡಿರುವ ಈ ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ದಿನಗಳಿಂದ ವ್ಯಾಪಕ ಪ್ರಚಾರ ಪಡೆದಿದೆ. ಕೆಲವರು ಬೆಂಗಳೂರಿನ ಬಳಿ ಬಂದರು ಎಲ್ಲಿದೆ ಎಂದು ಪ್ರತಿಕ್ರಿಯಿಸಿದರೆ, ಇನ್ನು ಕೆಲವರು ಮೀಮ್‌ಗಳ ಮೂಲಕ ವ್ಯಂಗ್ಯ ಮಾಡಿದ್ದಾರೆ. 'ಸಿಲ್ಕ್ ಬೋರ್ಡ್, ಟಿನ್ ಫ್ಯಾಕ್ಟರಿ, ಹೆಬ್ಬಾಳ, ಗೊರಗುಂಟೆಪಾಳ್ಯ, ಕೆಂಗೇರಿ ಮತ್ತು ವೈಟ್‌ಫೀಲ್ಡ್‌ನ ವಾಯುನೆಲೆಗಳನ್ನು ಅವರು (ಪಾಕಿಸ್ತಾನ) ಭೇದಿಸಿರುವ ಪರಿಗೆ ಜಗತ್ತೇ ದಿಗ್ಭ್ರಮೆಗೊಂಡಿದೆ' ಎಂದು ವಿಡಂಬಿಸಿದ್ದಾರೆ. ಅರುಣ್ ಬೊಥ್ರಾ ಎನ್ನುವ ಐಪಿಎಸ್ ಅಧಿಕಾರಿ 'ಬೆಂಗಳೂರಿನಲ್ಲಿ ಇರುವುದು ಯುಎಸ್‌ಬಿ ಪೋರ್ಟ್‌ಗಳು ಮಾತ್ರ' ಎಂದು ಪ್ರತಿಕ್ರಿಯಿಸಿರುವುದೂ ಸುದ್ದಿಯಾಗಿದೆ.



ಅರುಣ್ ಬೊಥ್ರಾ ನೀಡಿರುವ ಪ್ರತಿಕ್ರಿಯೆ

ಬಿಲಾಲ್ ಷರೀಫ್ ಎನ್ನುವ ಮತ್ತೊಬ್ಬ 'ಎಕ್ಸ್' ಬಳಕೆದಾರ 'ಪಾಕಿಸ್ತಾನದ ವಾಯುಸೇನೆಯು ಪಟ್ನಾ ಬಂದರನ್ನು ನಾಶಪಡಿಸಿದೆ' ಎನ್ನುವ 'ಬ್ರೇಕಿಂಗ್' ಸುದ್ದಿಯನ್ನು ಪೋಸ್ಟ್ ಮಾಡಿರುವುದರ ಬಗ್ಗೆಯೂ 'ಎಕ್ಸ್' ಬಳಕೆದಾರರು ಇದೇ ರೀತಿ ವ್ಯಂಗ್ಯವಾಡಿದ್ದಾರೆ. ಇವೆರಡು ಉದಾಹರಣೆಗಳಷ್ಟೆ. ಮೂರು ದಿನ ನಡೆದ ಭಾರತ–ಪಾಕಿಸ್ತಾನ ಸೇನಾ ಸಂಘರ್ಷಕ್ಕೆ ಸಂಬಂಧಿಸಿದಂತೆ ದಾಳಿ, ಹತ್ಯೆಗಳ ಸಾವಿರಾರು ಸುಳ್ಳು ಸುದ್ದಿಗಳು ಸಾಮಾಜಿಕ ಜಾಲತಾಣಗಳಲ್ಲಿ ರಾರಾಜಿಸುತ್ತಿವೆ. ಸುಳ್ಳುಸುದ್ದಿ ಹಂಚಿಕೊಳ್ಳುವುದರಲ್ಲಿ, ಅಪಪ್ರಚಾರ ಮಾಡುವುದರಲ್ಲಿ ಪಾಕಿಸ್ತಾನಿಯರೇ ಮುಂದಿದ್ದಾರೆ.

ಪಾಕಿಸ್ತಾನದ ಸೇನೆಯ ಡಿಜಿ–ಐಎಸ್‌ಪಿಆರ್ ಅಹ್ಮದ್ ಷರೀಫ್ ಚೌಧರಿಯವರೇ ಅಪೂರ್ಣ ವಿಡಿಯೊ ತೋರಿಸಿ ಸುಳ್ಳು ಪ್ರತಿಪಾದನೆ ಮಾಡಿರುವ ಘಟನೆಯೂ ನಡೆದಿದೆ. ಭಾರತದ ಸುದ್ದಿವಾಹಿನಿಯ ಸಣ್ಣ ತುಣುಕನ್ನು ಮಾಧ್ಯಮಗಳಿಗೆ ತೋರಿಸಿದ್ದ ಅವರು, ಭಾರತದ ವಾಯುನೆಲೆಯನ್ನು ಪಾಕಿಸ್ತಾನ ನಾಶಪಡಿಸಿದೆ ಎಂದು ಹೇಳಿದ್ದರು. ಆದರೆ, ಅದು ಸುಳ್ಳು ಸುದ್ದಿ ಆಗಿತ್ತು. ವಾಸ್ತವವಾಗಿ ಅದು ಭಾರತದ ಸೇನೆಯು ಪಾಕಿಸ್ತಾನದ ವಾಯುನೆಲೆ ಮೇಲೆ ನಡೆಸಿದ ದಾಳಿಯ ವಿಡಿಯೊ ಆಗಿತ್ತು. ಸಂಬಂಧವಿಲ್ಲದ ವಿಡಿಯೊ ತೋರಿಸುವ ಮೂಲಕ ಷರೀಫ್ ಅವರು ತಮ್ಮದೇ ದೇಶದ ಜನರಿಗೆ ಸುಳ್ಳು ಮಾಹಿತಿ ನೀಡಿದ್ದಾರೆ ಎಂದು ಭಾರತದ ಪ್ರೆಸ್ ಇನ್ಫರ್ಮೇಷನ್ ಬ್ಯೂರೊ (ಪಿಐಬಿ) ಫ್ಯಾಕ್ಟ್ ಚೆಕ್ ವರದಿಯಲ್ಲಿ ಹೇಳಿತ್ತು.

'ಎಕ್ಸ್', ಫೇಸ್‌ಬುಕ್, ಥ್ರೆಡ್ಸ್, ಇನ್‌ಸ್ಟಾಗ್ರಾಂ, ವಾಟ್ಸ್‌ಆ್ಯಪ್, ಟೆಲಿಗ್ರಾಂ ಸೇರಿದಂತೆ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಮಾಹಿತಿ ಹಂಚಿಕೆ, ಅಪಪ್ರಚಾರ. ಸುಳ್ಳಿನ ಪ್ರತಿಪಾದನೆಗೆ ಹಳೆಯ ವಿಡಿಯೊ ತುಣುಕು, ಫೋಟೊಗಳು, ವಿಡಿಯೊ ಗೇಮ್‌ಗಳ ತುಣುಕುಗಳ ಬಳಕೆ

ಸುಳ್ಳೇ ಅಸ್ತ್ರ: ಭಾರತ–ಪಾಕಿಸ್ತಾನಕ್ಕೆ ಸಂಬಂಧಿಸಿದ ಇಂಥ ನೂರಾರು ನಕಲಿ ಚಿತ್ರ, ತಪ್ಪು ಮಾಹಿತಿ, ತಿರುಚಿದ ವಿಡಿಯೊಗಳು ಎಕ್ಸ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ ಮುಂತಾದ ಸಾಮಾಜಿಕ ವೇದಿಕೆಗಳಲ್ಲಿ ಹಂಚಿಕೆಯಾಗುತ್ತಿವೆ. ಸುಳ್ಳು ಸುದ್ದಿಯನ್ನೇ ಅಸ್ತ್ರವನ್ನಾಗಿಸುವ ಜಾಯಮಾನದ ಪಾಕಿಸ್ತಾನವು ಈ ಬಾರಿಯೂ ಭಾರತದ ವಿರುದ್ಧ ಸೇನಾ ಸಂಘರ್ಷದ ಜೊತೆಗೆ ಸುಳ್ಳು ಮಾಹಿತಿ, ಅಪಪ್ರಚಾರದ ಮೂಲಕ ಭಾರತೀಯರ ಮನೋಸ್ಥೈರ್ಯವನ್ನು ಕುಂದಿಸುವುದು, ಜಾಗತಿಕ ಮಟ್ಟದಲ್ಲಿ ಗೊಂದಲ ಸೃಷ್ಟಿಸುವುದು ಮತ್ತು ತಾನು ಸಂತ್ರಸ್ತ ಎನ್ನುವ ಮುಖವಾಡ ಪ್ರದರ್ಶಿಸುವ ಪ್ರಯತ್ನವನ್ನು ಮಾಡಿತ್ತು.

ಭಾರತದ ಡ್ರೋನ್ ಅನ್ನು ಹೊಡೆದುರುಳಿಸಲಾಗಿದೆ ಎನ್ನುವಂತೆ, ಭಾರತದ ಗಡಿಗೆ ಹೊಂದಿಕೊಂಡ ಗ್ರಾಮಗಳ ಮೇಲೆ ಬಾಂಬ್ ದಾಳಿ ನಡೆಸಲಾಗಿದೆ ಎನ್ನುವಂತೆ ಸುದ್ದಿ, ಚಿತ್ರ, ವಿಡಿಯೊಗಳನ್ನು ಸೃಷ್ಟಿಸಿ, ಅವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಡಲಾಯಿತು. ಈ ಪೈಕಿ, ಅತ್ಯಂತ ಅಪಾಯಕಾರಿ ಸುಳ್ಳು ಎಂದರೆ, ಭಾರತವು ಅಮೃತಸರದ ಕಡೆಗೆ ಕ್ಷಿಪಣಿಗಳನ್ನು ಹಾರಿಸುತ್ತಿದೆ; ಪಾಕಿಸ್ತಾನದಲ್ಲಿರುವ ನಂಕಾನಾ ಸಾಹಿಬ್ ಗುರುದ್ವಾರದ ಮೇಲೆ ದಾಳಿ ನಡೆಸಿದೆ ಎನ್ನುವುದು. ಈ ಮೂಲಕ ಭಾರತದಲ್ಲಿ ಕೋಮು ಸಂಘರ್ಷ, ಕ್ಷೋಭೆ, ಗೊಂದಲ ಉಂಟುಮಾಡುವುದು ಅದರ ಯತ್ನವಾಗಿತ್ತು. ಅಲ್ಲದೇ, ತಾನು ಸಂಯಮದಿಂದ ವರ್ತಿಸುತ್ತಿದ್ದೇನೆ ಎಂದು ಜಾಗತಿಕ ಮಟ್ಟದಲ್ಲಿ ಪ್ರಚಾರ ಮಾಡಿ, ಜಾಗತಿಕ ಸಮುದಾಯದ ಸಹಾನುಭೂತಿ ಗಿಟ್ಟಿಸುವ ಉದ್ದೇಶವೂ ಇದರ ಹಿಂದಿತ್ತು ಎಂದೂ ಹೇಳಲಾಗಿದೆ.

ಭಾರತದಲ್ಲೂ ಸುಳ್ಳಿನ ಪ್ರಚಾರ: ಭಾರತದ ಸಾಮಾಜಿಕ ಜಾಲತಾಣಗಳ ಬಳಕೆದಾರರು ಕೂಡ ಪಾಕಿಸ್ತಾನದ ವಿರುದ್ಧ ಇಂಥ ಸುಳ್ಳು ಸುದ್ದಿಗಳನ್ನು ಸಂಘರ್ಷದ ಸಂದರ್ಭದಲ್ಲಿ ಹರಡಿರುವುದು ಫ್ಯಾಕ್ಟ್ ಚೆಕ್‌ಗಳ ಮೂಲಕ ಬಯಲಾಗಿದೆ. ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿಕೊಂಡು ವಾಸ್ತವಾಂಶಗಳನ್ನು ತಿರುಚಿ ಸುಳ್ಳು ಪ್ರತಿಪಾದನೆಗಳನ್ನು ಮಾಡಲಾಗಿತ್ತು. ಹಿಂದಿ, ಇಂಗ್ಲಿಷ್ ಸೇರಿದಂತೆ ಅನೇಕ ಭಾಷೆಗಳ ಮುಖ್ಯವಾಹಿನಿಯ ಹಲವು ಮಾಧ್ಯಮಗಳಲ್ಲಿ ಕೂಡ ಖಚಿತವಾಗಿರದಿದ್ದ ಸುದ್ದಿಗಳು ಪ್ರಸಾರವಾಗಿವೆ. ವಿಡಿಯೊ ಗೇಮ್‌ಗಳ ತುಣುಕುಗಳನ್ನೇ ದಾಳಿಯ ವಿಡಿಯೊಗಳು ಎಂಬಂತೆ ಬಿಂಬಿಸಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್‌ಗಳನ್ನು ಮಾಡಲಾಗಿದೆ. ಮಾಧ್ಯಮಗಳು ಕೂಡ ಇಂತಹದ್ದೇ ವಿಡಿಯೊಗಳನ್ನು ತಮ್ಮ ವರದಿಗಳಲ್ಲಿ ಬಳಸಿವೆ. ಕೊನೆಗೆ, ವಾರ್ತಾ ಮತ್ತು ಪ್ರಸಾರ ಸಚಿವಾಲಯವು, 'ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಗಳನ್ನು ಹಂಚಿಕೊಳ್ಳುವಾಗ ನಿಜವೇ ಸುಳ್ಳೇ ಎಂಬುದನ್ನು ಪರಿಶೀಲಿಸಿ. ಪಾಕಿಸ್ತಾನ ಮಾಡುತ್ತಿರುವ ಅಪಪ್ರಚಾರದ ಬಗ್ಗೆ ಎಚ್ಚರವಿರಿ' ಎಂದು ಸಲಹೆ ನೀಡಬೇಕಾಯಿತು.



ಸದ್ದು ಮಾಡಿದ ಪ್ರಮುಖ ಸುಳ್ಳು ಸುದ್ದಿಗಳು

1. ಕರಾಚಿ ಬಂದರಿನ ಮೇಲೆ ಭಾರತೀಯ ನೌಕಾಪಡೆ ದಾಳಿ: ಮೇ 8ರ ರಾತ್ರಿ ಭಾರತೀಯ ನೌಕಾ ಪಡೆಯು ಕರಾಚಿ ಬಂದರಿನ ಮೇಲೆ ದಾಳಿ ಮಾಡಿ ಭಾರಿ ಹಾನಿ ಮಾಡಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ಜತೆಗೆ ಒಂದು ವಿಡಿಯೊವನ್ನೂ ಬಳಕೆದಾರರು ಪೋಸ್ಟ್ ಮಾಡಿದ್ದರು. ಹಲವು ಸುದ್ದಿ ವಾಹಿನಿಗಳು ಬಂದರಿನ ಮೇಲೆ ದಾಳಿ ಮಾಡಿರುವ ಸುದ್ದಿ ಪ್ರಸಾರ ಮಾಡಿದವು. ಮಾರನೇ ದಿನ ಕೆಲವು ಪತ್ರಿಕೆಗಳಲ್ಲೂ ಇದು ವರದಿಯಾಯಿತು. ಆದರೆ, ಕರಾಚಿ ಬಂದರಿನ ಮೇಲೆ ಭಾರತೀಯ ಪಡೆಗಳು ದಾಳಿ ನಡೆಸಿರಲಿಲ್ಲ. ಹಂಚಿಕೊಂಡಿದ್ದ ವಿಡಿಯೊವು ಫಿಲಡೆಲ್ಫಿಯಾದಲ್ಲಿ ಸಂಭವಿಸಿದ್ದ ವಿಮಾನ ಪತನದ್ದಾಗಿತ್ತು ಎಂದು ಆಲ್ಟ್ ನ್ಯೂಸ್‌ನ ಮೊಹಮ್ಮದ್ ಜುಬೇರ್ ಹೇಳಿದ್ದರು

2. ಆಸೀಂ ಮುನೀರ್ ರಾಜೀನಾಮೆ, ವಜಾ, ಬಂಧನ: ಮೇ 8ರ ರಾತ್ರಿ, ಭಾರತವು ತನ್ನ ದಾಳಿಯನ್ನು ತೀವ್ರಗೊಳಿಸುತ್ತಲೇ, ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸೀಂ ಮುನೀರ್ ಅವರನ್ನು ಸರ್ಕಾರ ಹುದ್ದೆಯಿಂದ ವಜಾ ಮಾಡಿದೆ/ಅವರು ರಾಜೀನಾಮೆ ನೀಡಿದ್ದಾರೆ/ಅವರನ್ನು ಬಂಧಿಸಲಾಗಿದೆ ಎಂಬ ಸುದ್ದಿ ಹರಿದಾಡಿತು. ಕೆಲವು ಸುದ್ದಿ ವಾಹಿನಿಗಳಲ್ಲಿ ಇದು ಬಿತ್ತರವಾಯಿತು. ಮರುದಿನ ದಿನಪತ್ರಿಕೆಗಳು ಕೂಡ ಇದನ್ನು ವರದಿ ಮಾಡಿದವು. ವಾಸ್ತವದಲ್ಲಿ ಅಂತಹ ಬೆಳವಣಿಗೆ ನಡೆದಿರಲಿಲ್ಲ

3. ಪ್ರಧಾನಿ ಮನೆ ಬಳಿ ಭಾರಿ ಸ್ಫೋಟ: ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಮನೆ ಬಳಿ ಸ್ಫೋಟ ಸಂಭವಿಸಿದೆ. ಅವರು ಸುರಕ್ಷಿತ ಸ್ಥಳಕ್ಕೆ ತೆರಳಿದ್ದಾರೆ ಎಂದು ಮಾಧ್ಯಮಗಳಲ್ಲಿ ಪ್ರಕಟವಾಯಿತು. ಆದರೆ, ಅಂತಹದ್ದೇನೂ ಆಗಿರಲಿಲ್ಲ

4. ಆತ್ಮಾಹುತಿ ದಾಳಿ: ಜಮ್ಮುವಿನ ರಾಜೌರಿಯಲ್ಲಿರುವ ಸೇನಾ ನೆಲೆಯ ಮೇಲೆ ಭಯೋತ್ಪಾದಕರು ಆತ್ಮಾಹುತಿ ದಾಳಿ ನಡೆಸಿದ್ದಾರೆ ಎಂದು ಕೆಲವರು ಸಾಮಾಜಿಕ ಜಾಲತಾಣಗಳಲ್ಲೂ ಹಂಚಿಕೊಂಡರು. ಸುದ್ದಿ ವಾಹಿನಿಗಳಲ್ಲೂ ಇದು ವರದಿಯಾಯಿತು. ಪಿಐಬಿ ಫ್ಯಾಕ್ಟ್‌ಚೆಕ್ ಇದನ್ನು ತಳ್ಳಿ ಹಾಕಿತು

5. ಯುದ್ಧವಿಮಾನ ಪತನ, ಪೈಲಟ್ ಬಂಧನ: ಪಾಕಿಸ್ತಾನದ ಚೀನಾ ನಿರ್ಮಿತ ಜೆಎಫ್–17ಎಸ್ ಯುದ್ಧವಿಮಾನವನ್ನು ಭಾರತೀಯ ಸೇನೆ ಹೊಡೆದುರುಳಿಸಿದೆ. ವಿಮಾನವು ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ಪತನವಾಗಿದೆ. ಪೈಲಟ್‌ನನ್ನು ಸೆರೆ ಹಿಡಿಯಲಾಗಿದೆ ಎಂಬ ಸುದ್ದಿಯನ್ನು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡರು. ಹಲವು ಸುದ್ದಿ ವೆಬ್‌ಸೈಟ್‌ಗಳು ಕೂಡ ಇದರ ವರದಿ ಮಾಡಿದವು. ಆದರೆ, ಅಂತಹ ಬೆಳವಣಿಗೆಯನ್ನು ಭಾರತೀಯ ಸೇನೆ ಖಚಿತಪಡಿಸಲಿಲ್ಲ

6. ಜಲಂಧರ್ ಮೇಲೆ ಡ್ರೋನ್ ದಾಳಿ: ಪಂಜಾಬ್‌ನ ಜಲಂಧರ್‌ನ ಮೇಲೆ ಪಾಕಿಸ್ತಾನ ಡ್ರೋನ್ ದಾಳಿ ನಡೆಸಿದೆ ಎಂದು ಪಾಕಿಸ್ತಾನದ ಹಲವು ಸಾಮಾಜಿಕ ಜಾಲತಾಣಗಳ ಬಳಕೆದಾರರು 'ಎಕ್ಸ್', ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದರು. ಆದರೆ, ಅದು ಸುಳ್ಳು ಎಂದು ಪಿಐಬಿ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ತಿಳಿಸಿತ್ತು

7. ಭಾರತದ ಮೇಲೆ ಕ್ಷಿಪಣಿ ದಾಳಿ: ಪಾಕಿಸ್ತಾನವು ಭಾರತದ ಮೇಲೆ ಕ್ಷಿಪಣಿ ದಾಳಿ ನಡೆಸಿದೆ ಎಂದು ಮೇ 7ರಂದು ಸಾಮಾಜಿಕ ಜಾಲತಾಣಗಳಲ್ಲಿ ಒಂದು ವಿಡಿಯೊ ತುಣುಕಿನೊಂದಿಗೆ ಪಾಕಿಸ್ತಾನದವರು ಪೋಸ್ಟ್ ಮಾಡಿದ್ದರು. ಆದರೆ, ಆ ವಿಡಿಯೊವು ಲೆಬನಾನಿನ ಬೈರೂತ್‌ನಲ್ಲಿ 2020ರಲ್ಲಿ ಸಂಭವಿಸಿದ ಸ್ಫೋಟದ ವಿಡಿಯೊ ಆಗಿತ್ತು ಎಂದು ಪಿಐಬಿ ಫ್ಯಾಕ್ಟ್‌ಚೆಕ್ ಹೇಳಿತ್ತು

8. ಅಮೃತಸರದ ಮೇಲೆ ಸ್ವತಃ ಭಾರತದ ದಾಳಿ: ಭಾರತೀಯ ಸೇನೆಯು ಅಮೃತಸರದ ಮೇಲೆ ದಾಳಿ ನಡೆಸಿದ್ದು, ಅದಕ್ಕಾಗಿ ಅಂಬಾಲ ವಾಯುನೆಲೆ ಬಳಸಿದೆ ಎಂದು ಪ್ರತಿಪಾದಿಸುತ್ತಾ ಪಾಕಿಸ್ತಾನದವರು 'ಎಕ್ಸ್'ನಲ್ಲಿ ಮೇ 8ರಂದು ಪೋಸ್ಟ್ ಮಾಡಿದ್ದರು

9. ಪ್ರವೇಶ ನಿರ್ಬಂಧ: ಭಾರತದ ಎಲ್ಲ ವಿಮಾನ ನಿಲ್ದಾಣಗಳಿಗೆ ಜನರ ಪ್ರವೇಶವನ್ನು ನಿರ್ಬಂಧಿಸಲಾಗಿದೆ ಎಂಬ ಮತ್ತೊಂದು ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಕೇಂದ್ರ ಸರ್ಕಾರ ಅಂತಹ ತೀರ್ಮಾನ ಕೈಗೊಂಡಿರಲಿಲ್ಲ

10. ರಹಸ್ಯ ಪತ್ರ: ಭಾರತೀಯ ಸೇನಾ ಮುಖ್ಯಸ್ಥ ಜನರಲ್ ವಿ.ಕೆ. ನಾರಾಯಣ್ ಅವರು ಸೇನಾ ಸನ್ನದ್ಧತೆ ಕುರಿತಂತೆ ಉತ್ತರ ವಿಭಾಗದ ಕಮಾಂಡರ್ ಅವರಿಗೆ ಬರೆದಿರುವ ಗೋಪ್ಯ ಪತ್ರ ಎಂದು ಹೇಳಿಕೊಂಡು ನಕಲಿ ಪತ್ರವೊಂದನ್ನು ಪಾಕಿಸ್ತಾನದ ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು. ಪಿಐಬಿ ಈ ಬಗ್ಗೆ ಫ್ಯಾಕ್ಟ್‌ಚೆಕ್ ನಡೆಸಿತಲ್ಲದೆ, ವಿ.ಕೆ.ನಾರಾಯಣ್ ಅವರು ಸೇನಾ ಮುಖ್ಯಸ್ಥ ಅಲ್ಲ ಎಂದು ಹೇಳಿತು

ನಿರಂತರ ಫ್ಯಾಕ್ಟ್ ಚೆಕ್

ಸುಳ್ಳು ಸುದ್ದಿಗಳ ಪ್ರವಾಹದ ನಡುವೆ, ಅದು ನಿಜವೇ, ಸುಳ್ಳೇ ಎಂಬುದನ್ನು ಹಲವು ಸಂಸ್ಥೆಗಳು, ವ್ಯಕ್ತಿಗಳು ಫ್ಯಾಕ್ಟ್‌ಚೆಕ್ ನಡೆಸಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುತ್ತಿದ್ದರು. ಮೇ 7ರ ನಸುಕಿನಲ್ಲಿ ಭಾರತೀಯ ಪಡೆಗಳು 'ಆಪರೇಷನ್ ಸಿಂಧೂರ' ಆರಂಭಿಸಿದ ಸಂದರ್ಭದಲ್ಲೇ ಆಲ್ಟ್ ನ್ಯೂಸ್ ಸಂಸ್ಥಾಪಕ ಮೊಹಮ್ಮದ್ ಜುಬೇರ್ ಅವರು ಈ ಸಂಬಂಧ ಫ್ಯಾಕ್ಟ್‌ಚೆಕ್ ಆರಂಭಿಸಿದ್ದರು. ಕಾರ್ಯಾಚರಣೆಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣ ಬಳಕೆದಾರರು ಪೋಸ್ಟ್ ಮಾಡುತ್ತಿದ್ದ ವಿಡಿಯೊ ತುಣುಕುಗಳನ್ನು ಅವರು ಪರಿಶೀಲನೆಗೆ ಒಳಪಡಿಸಿದ್ದರು. ಸುಳ್ಳು ಮಾಹಿತಿಗಳ ಹಂಚಿಕೆ ಜಾಸ್ತಿಯಾಗುತ್ತಿದ್ದಂತೆಯೇ ಪಿಟಿಐ, ಬೂಮ್‌ಲೈವ್, ಕೇಂದ್ರ ಸರ್ಕಾರದ ಪ್ರೆಸ್ ಇನ್ಫರ್ಮೇಷನ್ ಬ್ಯೂರೋ ಸೇರಿದಂತೆ ಹಲವು ಸಂಸ್ಥೆಗಳು ನಿರಂತರವಾಗಿ ಫ್ಯಾಕ್ಟ್‌ಚೆಕ್ ಕಾರ್ಯಕ್ಕೆ ಇಳಿದವು. ಸಾಮಾಜಿಕ ಜಾಲತಾಣಗಳ ಬಳಕೆದಾರರು ಹಂಚಿಕೊಳ್ಳುತ್ತಿದ್ದ ಮಾಹಿತಿ, ವಿಡಿಯೊವನ್ನು ಪರಿಶೀಲನೆಗೆ ಒಳಪಡಿಸಿ ಸೂಕ್ತ ದಾಖಲೆ, ಮಾಹಿತಿ, ವಿಡಿಯೊಗಳ ಮೂಲಕ ಪ್ರಬುದ್ಧ ರೀತಿಯಲ್ಲಿ ಉತ್ತರ ನೀಡುತ್ತಾ ಬಂದವು. ಭಾರತೀಯ ಸೇನೆ, ವಿದೇಶಾಂಗ ಇಲಾಖೆ ಅಧಿಕಾರಿಗಳು ಪ್ರತಿ ದಿನ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಪಾಕಿಸ್ತಾನದ ಸೇನೆ ಹಾಗೂ ಅಲ್ಲಿನ ಜನರು ಸಾಮಾಜಿಕ ಜಾಲತಾಣಗಳಲ್ಲಿ ಪ್ರತಿಪಾದಿಸಿದ ಸುಳ್ಳುಗಳನ್ನು ಸಾಕ್ಷ್ಯ ಸಮೇತ ತಿರಸ್ಕರಿಸುತ್ತಾ ಬಂದರು. ಕದನ ವಿರಾಮ ಜಾರಿಯಾದ ನಂತರವೂ ಈ ಸಂಸ್ಥೆಗಳ ಫ್ಯಾಕ್ಟ್‌ಚೆಕ್ ಮುಂದುವರಿದಿದೆ.



ಆಧಾರ: ಪಿಟಿಐ, ಪಿಐಬಿ ಫ್ಯಾಕ್ಟ್‌ಚೆಕ್‌ಗಳು, 'ಎಕ್ಸ್', ಫೇಸ್‌ಬುಕ್ ಪೋಸ್ಟ್‌ಗಳು

ರಾಷ್ಟ್ರೀಯ

ಭದ್ರತೆಗಾಗಿ 10 ಉಪಗ್ರಹಗಳು ಕಾರ್ಯಪ್ರವೃತ್ತ: ಇಸ್ರೊ ಅಧ್ಯಕ್ಷ


ವಿ.ನಾರಾಯಣನ್

ಇಂಫಾಲ್ (ಪಿಟಿಐ): 'ದೇಶದ ಜನರ ರಕ್ಷಣೆ ಮತ್ತು ಭದ್ರತೆಗಾಗಿ ಹತ್ತು ಉಪಗ್ರಹಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ' ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಹೇಳಿದರು.

ಇಲ್ಲಿನ ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯದ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ಉಪಗ್ರಹಗಳಿಂದ ಮಾತ್ರವೇ ದೇಶದ ಭದ್ರತೆ ನಿಗಾವಹಿಸಲು ಸಾಧ್ಯ. 7 ಸಾವಿರ ಕಿ.ಮೀ ಉದ್ದದ ಕರಾವಳಿ ಪ್ರದೇಶ ಮತ್ತು ಉತ್ತರ ಭಾಗಗಳಲ್ಲಿ ನಿರಂತರವಾಗಿ ನಿಗಾವಹಿಸಬೇಕಾಗುತ್ತದೆ' ಎಂದರು.

'ವಾಯು ಗುಣಮಟ್ಟ ಮತ್ತು ಹವಾಮಾನ ವೈಪರೀತ್ಯವನ್ನು ಅಧ್ಯಯನ ಮಾಡಲು, ಜಿ–20 ದೇಶಗಳಿಗಾಗಿ ಉಪಗ್ರಹವೊಂದನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ದೇಶವು ಜಗತ್ತಿನಲ್ಲೇ ಅತಿವೇಗವಾಗಿ ಬಲಿಷ್ಠ ಬಾಹ್ಯಾಕಾಶ ಶಕ್ತಿಯಾಗಿ ಬೆಳೆಯುತ್ತಿದೆ. 2040ರ ಹೊತ್ತಿಗೆ ನಮ್ಮದೇ ಆದ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಸ್ಥಾಪನೆಯಾಗಲಿದೆ' ಎಂದರು.

'ಭಾರತ ಮತ್ತು ಅಮೆರಿಕವು ಜಂಟಿಯಾಗಿ ಭೂಮಿಯ ಛಾಯಾಚಿತ್ರಗಳನ್ನು ತೆಗೆಯುವ ಅತ್ಯಾಧುನಿಕವಾದ ಮತ್ತು ದುಬಾರಿಯಾದ ಉಪಗ್ರಹವೊಂದನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಈ ಉಪಗ್ರಹವು ಭಾರತದಿಂದಲೇ ಉಡಾವಣೆಯಾಗಲಿದೆ' ಎಂದರು.

ರಾಷ್ಟ್ರ ವಿರೋಧಿ ಚಟುವಟಿಕೆ ಆರೋಪ: ಕೇರಳ ವ್ಯಕ್ತಿಯ ಮನೆಯಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ತಿರುವನಂತಪುರ: 'ಆಪರೇಷನ್ ಸಿಂಧೂರ'ವನ್ನು ಟೀಕಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಹಾಕಿದ್ದ ಆರೋಪದ ಮೇಲೆ ನಾಗ್ಪುರದಲ್ಲಿ ಬಂಧಿಸಲಾಗಿರುವ ಕೊಚ್ಚಿ ಮೂಲದ ವ್ಯಕ್ತಿಯ ಮನೆಯ ಮೇಲೆ ಮಹಾರಾಷ್ಟ್ರ ಪೊಲೀಸರ ತಂಡ ಶೋಧ ಕಾರ್ಯಾಚರಣೆ ನಡೆಸಿದೆ.

ಕೊಚ್ಚಿಯ ಎಡಪ್ಪಳ್ಳಿಯ ರೆಜಾಜ್ ಎಂ ಶೀಬಾ ಸೈದಿಕ್ (26) ಅವರ ನಿವಾಸದ ಮೇಲೆ ಮಹಾರಾಷ್ಟ್ರ ಭಯೋತ್ಪಾದನೆ ನಿಗ್ರಹ ದಳ ಭಾನುವಾರ ರಾತ್ರಿ ಶೋಧ ನಡೆಸಿದೆ. ಈ ವೇಳೆ ದೊರೆತ ದಾಖಲೆಗಳು ಮತ್ತು 'ಗ್ಯಾಜೆಟ್'ಗಳನ್ನು ವಶಕ್ಕೆ ಪಡೆದಿವೆ ಎಂದು ಮೂಲಗಳು ತಿಳಿಸಿವೆ.

ಪತ್ರಕರ್ತ ಮತ್ತು ಸಾಮಾಜಿಕ ಕಾರ್ಯಕರ್ತ ರೆಜಾಜ್ ಅವರನ್ನು ಕಳೆದ ವಾರ ನಾಗ್ಪುರದ ಹೋಟೆಲ್‌ನಲ್ಲಿ ಪೊಲೀಸರು ಬಂಧಿಸಿದ್ದರು. ರೆಜಾಜ್, ನಕ್ಸಲ್ ಪರ ಸಹಾನುಭೂತಿಯುಳ್ಳ ವ್ಯಕ್ತಿಯಾಗಿದ್ದಾರೆ ಎಂದು ಪೊಲೀಸರು ಆರೋಪಿಸಿದ್ದಾರೆ.

ಸರ್ಕಾರದ ವಿರುದ್ಧ ಯುದ್ಧಕ್ಕೆ ಸಿದ್ಧತೆ ನಡೆಸಿದ್ದಕ್ಕಾಗಿ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 149 ಮತ್ತು ಗಲಭೆ ಉಂಟು ಮಾಡುವ ಉದ್ದೇಶದಿಂದ ಪ್ರಚೋದನೆ ಮಾಡಿದ್ದಕ್ಕೆ ಸೆಕ್ಷನ್ 192 ಸೇರಿದಂತೆ ವಿವಿಧ ಅಪರಾಧಗಳಿಗಾಗಿ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಪಹಲ್ಗಾಮ್ ಭಯೋತ್ಪಾದಕರ ದಾಳಿ ಬಳಿಕ, ಕಾಶ್ಮೀರದಲ್ಲಿ ಭಯೋತ್ಪಾದಕರಿಗೆ ಸಂಬಂಧಿಸಿದ ಮನೆಗಳನ್ನು ತೆರವುಗೊಳಿಸಿದ ಕಾರ್ಯಾಚರಣೆಯನ್ನು ವಿರೋಧಿಸಿ ಪ್ರತಿಭಟಿಸಿದ್ದಕ್ಕಾಗಿ ಕೊಚ್ಚಿಯಲ್ಲಿ ರೆಜಾಜ್ ಮತ್ತು ಇತರರ ವಿರುದ್ಧ ಕಳೆದ ತಿಂಗಳು ಪೊಲೀಸರು ಪ್ರಕರಣ ದಾಖಲಿಸಿದ್ದರು.

ಮುಂಬೈನಲ್ಲಿ ದೇಶದ ಅತಿ ದೊಡ್ಡ ಸಾಮುದಾಯಿಕ ಅಡುಗೆಮನೆ

ಪ್ರಜಾವಾಣಿ ವಾರ್ತೆ

ಮುಂಬೈ: ದೇಶದಲ್ಲಿಯೇ ಅತಿ ದೊಡ್ಡ ಸಮುದಾಯ ಅಡುಗೆಮನೆ ನಿರ್ಮಾಣಕ್ಕಾಗಿ ಇಲ್ಲಿನ ಘೋಡಾಪದೇಯೊ ಪ್ರದೇಶದಲ್ಲಿ ಮುಂಬೈ ಬಂದರು ಪ್ರಾಧಿಕಾರವು 30 ಸಾವಿರ ಚದರ ಅಡಿಯಷ್ಟು ಜಾಗವನ್ನು ಅಕ್ಷರ ಚೈತನ್ಯ ಸಂಸ್ಥೆಗೆ ನೀಡಿದೆ.

2027ರ ಹೊತ್ತಿಗೆ ಈ ಅಡುಗೆ ಮನೆಯು ನಿರ್ಮಾಣವಾಗಲಿದ್ದು, ಸುಮಾರು 1 ಲಕ್ಷ ಜನರಿಗೆ ಇದರಿಂದ ಅನುಕೂಲವಾಗಲಿದೆ.

ಬಾಲವಾಡಿಗಳಲ್ಲಿ ಇರುವ 83 ಸಾವಿರ ಮಕ್ಕಳು, 750ಕ್ಕೂ ಹೆಚ್ಚಿನ ಶಾಲೆಗಳಲ್ಲಿ ಓದುತ್ತಿರುವ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ, 50ಕ್ಕೂ ಹೆಚ್ಚಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ 17 ಸಾವಿರಕ್ಕೂ ಅಧಿಕ ಕುಟುಂಬಗಳಿಗೆ ನಿತ್ಯ ಊಟ ಉಚಿತವಾಗಿ ದೊರೆಯಲಿದೆ.

ಗುಂಡಣ್ಣ



ಮುಂದಿನ ಜನಾಂಗಕ್ಕೆ ಮಾದರಿ



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ
193

ಒಬ್ಬ ಬಾವಿಯಲ್ಲಿ ಬಿದ್ದಿದ್ದ. ಆ ಬಾವಿಯ ಸುತ್ತಾ ಜನ ನಿಂತಿದ್ದರು. ಅವರೇನು ಅವನನ್ನು ಬಾವಿಯಿಂದ ಮೇಲೆತ್ತಲು ನಿಂತಿರಲಿಲ್ಲ. ಬಿದ್ದವನನ್ನು ನೋಡಲು ನಿಂತಿದ್ದರು. ಆಗ ಒಬ್ಬ ಓಡಿ ಬಂದು 'ಏನಾಗ್ಯೆತಿ' ಎಂದು ಕೇಳಿದ. 'ಇಲ್ಲ ಒಬ್ಬ ಬಾವಿ ಹಾರ್‍ಯಾನ' ಅಂದ್ರು. ಹಾರಿದ್ದು ಯಾರು ಎಂದು ಕೇಳಿದ ಅವ. ಜನ ಇಂಥವನು ಎಂದು ಹೇಳಿದ ತಕ್ಷಣ ಅವ ಬಾವಿ ಒಳಗೆ ಜಿಗಿದ. ಬಾವಿಯೊಳಗೆ ಇದ್ದವನನ್ನು ಮೇಲೆ ತಂದ. ಆಗ ಸುತ್ತ ನಿಂತಿದ್ದ ಜನ 'ಅಂತೂ ಅವನ ಪ್ರಾಣ ಉಳಿಸಿದಿ' ಎಂದರು. 'ಅವನ ಪ್ರಾಣ ಉಳಿಯದಿದ್ದರೆ ನನ್ನ ಪ್ರಾಣ ಹೋಗುತ್ತಿತ್ತು' ಎಂದ. 'ಅವನ ಪ್ರಾಣ ಹೋಗಿದ್ದರೆ ನಿನ್ನ ಪ್ರಾಣ ಯಾಕೆ ಹೋಗುತ್ತಿತ್ತು' ಎಂದು ಜನ ಕೇಳಿದರು. 'ಅವನಿಗೆ ಐದು ಲಕ್ಷ ಸಾಲ ಕೊಟ್ಟಿದ್ದೆ. ಅವ ಸತ್ತಿದ್ದರೆ ಅದು ಮುಳುಗಿ ಹೋಗುತ್ತಿತ್ತು' ಎಂದ ಇವ.

ಮನುಷ್ಯನ ಜೀವನದಲ್ಲಿ ಎರಡು ಸಾಧ್ಯತೆಗಳಿವೆ. ಒಂದು, ನೀವು ಮುಂದಿನ ಜನಾಂಗಕ್ಕೆ ಒಂದು ಉದಾಹರಣೆ ಆಗಬಹುದು, ಇಲ್ಲವೇ ಮುಂದಿನ ಜನಾಂಗಕ್ಕೆ ಎಚ್ಚರಿಕೆಯೂ ಆಗಬಹುದು. ಗಾಂಧೀಜಿ ಮತ್ತು ಹಿಟ್ಲರ್ ಒಂದೇ ಕಾಲಕ್ಕೆ ಬದುಕಿದರು. ಗಾಂಧೀಜಿ ಜೀವನ ಮುಂದಿನ ಜನಾಂಗಕ್ಕೆ ಉದಾಹರಣೆ ಆದರೆ ಹಿಟ್ಲರನ ಜೀವನ ಮುಂದಿನ ಜನಾಂಗಕ್ಕೆ ಎಚ್ಚರಿಕೆ ಆಯಿತು. ವಿಶ್ವೇಶ್ವರಯ್ಯ ಅವರ ಬದುಕು ಮುಂದಿನ ಜನಾಂಗಕ್ಕೆ ಉದಾಹರಣೆಯಾಯಿತು. ವೀರಪ್ಪನ್ ಬದುಕು ಮುಂದಿನ ಜನಾಂಗಕ್ಕೆ ವಾರ್ನಿಂಗ್ ಆಯಿತು. ನಮ್ಮ ಬದುಕು ಮುಂದಿನ ಜನಾಂಗಕ್ಕೆ ಉದಾಹರಣೆಯಾಗಬೇಕೇ ವಿನಾ ಎಚ್ಚರಿಕೆ ಆಗಬಾರದು. ಒಬ್ಬ ಮನುಷ್ಯ ಶ್ರೇಷ್ಠ ಆಗೋದು ಇನ್ನೊಬ್ಬರ ಜೀವನಕ್ಕೆ ಆಸರೆಯಾದಾಗ. ಬರೀ ಕಣ್ಣು, ಕೈ ಕಾಲು ಇದ್ದವರಿಗೆಲ್ಲ ಮನುಷ್ಯ ಎನ್ನಲು ಆಗದು. ಮನುಷ್ಯರು ಬಹಳ ಮಂದಿ ಸಿಗ್ತಾರೆ. ಯಾರೊಳಗೆ ಮನುಷ್ಯತ್ವ ಇರೋದಿಲ್ಲವೋ ಅವರನ್ನು ಮನುಷ್ಯ ಎನ್ನಲು ಆಗದು.

ಉಡುಪಿಯ ರವಿ ಕಟ್ಪಾಡಿ ಅಂತ ಒಬ್ಬರಿದ್ದಾರೆ. ಅವರು ಕಟ್ಟಡಗಳಿಗೆ ಸೆಂಟ್ರಿಂಗ್ ಮಾಡುವ ಕೆಲಸ ಮಾಡುತ್ತಾರೆ. ಅದು ಅವರ ಉಪಜೀವನಕ್ಕೆ. ಅವರ ಜೀವನದಲ್ಲಿ ಒಂದು ಘಟನೆ ನಡೆಯಿತು. ಒಂದು ಮಗುವಿಗೆ ಕಾಯಿಲೆಯಾಗಿ, ಚಿಕಿತ್ಸೆಗೆ ಹಣ ನೀಡಲು ಸಾಧ್ಯವಾಗದೆ ಆ ಮಗು ತೀರಿಕೊಂಡಿತು. ಇಂತಹ ಮಕ್ಕಳಿಗೆ ಏನಾದರೂ ಮಾಡಬೇಕಲ್ಲ ಎಂದು ಅನ್ನಿಸಿ ಸ್ಪೈಡರ್ ಮ್ಯಾನ್ ಮುಂತಾದ ವೇಷ ಹಾಕಿ ಜನರಿಂದ ಹಣ ಸಂಗ್ರಹಿಸಿ ಮಕ್ಕಳ ಚಿಕಿತ್ಸೆಗೆ ನೆರವಾಗಲು ಶುರುಮಾಡಿದರು. ಹೀಗೆ ಅವರು 48 ಲಕ್ಷ ರೂಪಾಯಿ ಸಂಗ್ರಹಿಸಿ ಚಿಕ್ಕ ಚಿಕ್ಕ ಮಕ್ಕಳ ಹೃದಯ, ಕಿಡ್ನಿ ಮುಂತಾದ ಆಪರೇಷನ್ ಮಾಡಿಸಿದ್ದಾರೆ. ಸುಮಾರು 28 ಮಕ್ಕಳ ಜೀವ ಉಳಿಸಿದ್ದಾರೆ. ಚನ್ನಮ್ಮ ಹಳ್ಳಿಕೇರಿ ಅವರು 12 ವರ್ಷದವರಿದ್ದಾಗ ಮನೆ ಬಿಟ್ಟವರು ಇನ್ನೂ ಮನೆಗೆ ಹೋಗಿಲ್ಲ. ದೇಶಕ್ಕಾಗಿ ತಮ್ಮ ಜೀವನವನ್ನೇ ಮೀಸಲು ಮಾಡಿದ್ದಾರೆ. ತಮಗೆ ಬಂದ ಪ್ರಶಸ್ತಿಯ ಹಣವನ್ನು ಅನಾಥ ಮಹಿಳೆಯರಿಗೆ ನೀಡಿದ್ದಾರೆ. ಅವರಿಗೆ 89 ವರ್ಷ. ಆದರೂ ಅವರು ಚಟುವಟಿಕೆಯಿಂದ ಕಾರ್ಯ ಮಾಡುತ್ತಿದ್ದಾರೆ.

ನಿವೃತ್ತಿಯಾದ ನಂತರ ಸುಮ್ಮನೆ ಕುಳಿತರೆ ಮುಪ್ಪು ಬೇಗ ಬರುತ್ತದೆ, ರೋಗವೂ ಬರುತ್ತದೆ. ಚಟುವಟಿಕೆಯಿಂದ ಇದ್ದರೆ ಇವೆರಡೂ ದೂರವಾಗುತ್ತವೆ. ಇವರೆಲ್ಲಾ ಮುಂದಿನ ಜನಾಂಗಕ್ಕೆ ಮಾದರಿಯಾದವರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮೇ 13, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣಪ್ರತಿಪದ್ ಗಂ. 24-36 ನಕ್ಷತ್ರ: ವಿಶಾಖ ಗಂ. 9-09 ಯೋಗ: ವರಿಯಾನ್ ಗಂ. 5-53, ಕರಣ: ಬಾಲವ ಗಂ. 11-33, ಮೇಷ ಮಾಸದ 30 ನೇ ದಿನ.
ರಾಹುಕಾಲ: ಮಧ್ಯಾಹ್ನ 03-00 – 04-30
ಸೂರ್ಯೋದಯ: 06-09 **ಸೂರ್ಯಾಸ್ತ:** 06-45
ಮುಸ್ಲಿಂ ದಿನಾಂಕ: 14 ಜುಲ್ಖಾಯದ್
ಅದೃಷ್ಟ ಸಂಖ್ಯೆ: 3, 8

ಮೇಷ: ದೇವತಾನುಗ್ರಹ ಇದೆ ಎಂಬುವುದು ಅನುಭವಕ್ಕೆ ಬಂದಂತೆ ಆಗುವುದು. ವಿದ್ಯಾಭ್ಯಾಸದ ಪೂರಕ ಪರೀಕ್ಷೆಗಳಿಗೆ ಬೇಕಾದ ತಯಾರಿ ಮಾಡಿಕೊಳ್ಳುವುದು ಒಳ್ಳೆಯದು.

ವೃಷಭ: ಅಕ್ಕಪಕ್ಕದವರ ಪ್ರೀತಿ ವಿಶ್ವಾಸ ಹಿತವೆನಿಸಲಿದೆ. ಮಕ್ಕಳೊಡನೆ ವಿರಸ, ಕಲಹ ಬರದಂತೆ ಪ್ರೀತಿಯಿಂದ ವರ್ತಿಸಿ. ಕಾರ್ಯಪ್ರವೃತ್ತರಾಗಿ ದುಡಿದರೆ ಉತ್ತಮ ಫಲಗಳು ಅನುಭವಕ್ಕೆ ಬರಲಿವೆ.

ಮಿಥುನ: ಅನಿರೀಕ್ಷಿತ ವರ್ಗಾವಣೆಯಿಂದ ಅನುಕೂಲವೇ ಹೊರತಾಗಿ ಪ್ರತಿಕೂಲ ಇರುವುದಿಲ್ಲ. ಮೇಲಧಿಕಾರಿಗಳ ಅಪ್ಪಣೆಯಂತೆ ಹೆಜ್ಜೆಯಿಡಿ. ಕುಟುಂಬ ಅಭಿವೃದ್ಧಿಗೆ ಉತ್ತಮ ಯೋಚನೆಗಳು ಬರಲಿವೆ.

ಕರ್ಕಾಟಕ: ಕ್ರೀಡಾಸಕ್ತರಿಗೆ ಅಥವಾ ಕ್ರೀಡಾಪಟುಗಳಿಗೆ ಇಂದು ಶುಭ ದಿನ. ಕಿರುತೆರೆಯಲ್ಲಿ ಅಭಿನಯಿಸಲು ಒತ್ತಾಯಪೂರ್ವಕ ಅವಕಾಶಗಳು ಲಭಿಸುವುದು. ಅವಿವಾಹಿತರಿಗೆ ವಿವಾಹ ಭಾಗ್ಯವಿರುವುದು.

ಸಿಂಹ: ಎಚ್ಚರದಿಂದ ಕಾರ್ಯ ನಿರ್ವಹಿಸಿ. ಯಂತ್ರಗಳನ್ನು ಬಳಸುವಾಗ ತೊಂದರೆಯಾಗುವ ಸಂಭವವಿದೆ. ತೈಲ ವ್ಯಾಪಾರ ಮಾಡುವವರಿಗೆ ಅಧಿಕ ಲಾಭ ಸಿಗಲಿದೆ. ಮನಸ್ಸು ಉಲ್ಲಾಸದಾಯಕವಾಗಿ ಇರುತ್ತದೆ.

ಕನ್ಯಾ: ಇನ್ನೊಬ್ಬ ವ್ಯಕ್ತಿಯಿಂದ ಯಾವುದೇ ರೀತಿಯ ಸಲಹೆ ಅಪೇಕ್ಷಿಸಬೇಡಿ. ವೆಂಕಟರಮಣನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ. ಬಾಳು ಹಸನವಾಗುವುದರೊಂದಿಗೆ ವೈವಾಹಿಕ ಜೀವನ ಸುಧಾರಿಸಲಿದೆ.

ತುಲಾ: ಆಭರಣಗಳ ಖರೀದಿ ನಡೆಸುವುದರಿಂದ ಸಂತೋಷವಾಗುವುದು. ವೃತ್ತಿಯಲ್ಲಿ ಸೋಮಾರಿತನ, ದುರಾಸೆಗಳನ್ನು ಬಿಟ್ಟು ಶ್ರಮಪಡುವ ಮನೋಭಾವ ಬೆಳೆಸಿಕೊಳ್ಳಿರಿ. ಸರ್ವರ ಸಂತೋಷಕ್ಕೆ ಕಾರಣವಾಗುತ್ತದೆ.

ವೃಶ್ಚಿಕ: ಆಹಾರದ ಪದ್ಧತಿ ನಿಯಂತ್ರಿಸಿಕೊಂಡು ರಕ್ತದೊತ್ತಡ ಸ್ಥಿತಿಯನ್ನು ಸಮತೋಲನಕ್ಕೆ ಬರುವಂತೆ ಮಾಡಿಕೊಳ್ಳಿ. ದೇಹಾಯಾಸ ತೋರಿಬಂದು ತಪ್ಪಾದ ನಿರ್ಧಾರ ತೆಗೆದುಕೊಳ್ಳುವ ಸ್ಥಿತಿ ಎದುರಾಗಬಹುದು.

ಧನು: ನವದಂಪತಿಗಳು ಪರಸ್ಪರ ಬೇಕು ಬೇಡಗಳನ್ನು ಅರಿತು ಬಹಳ ಎಚ್ಚರಿಕೆ ವಹಿಸಿ ಪ್ರತಿ ಹೆಜ್ಜೆ ಇಡಿ. ಸ್ಥಾನಮಾನ ಮತ್ತು ಅತಿ ಪರಿಶ್ರಮದ ದುಡಿಮೆ ಜನರ ಅಸೂಯೆಯ ದೋಷದ ನೋಟಕ್ಕೆ ಗುರಿಯಾಗುವುದು.

ಮಕರ: ಕೌಟುಂಬಿಕ ಮಾತುಕತೆಯಲ್ಲಾಗಲಿ ಅಥವಾ ಆಫೀಸಿನ ಸಭೆಯಲ್ಲಾಗಲಿ ಸಂದರ್ಭಕ್ಕೆ ಸರಿಯಾದ ಮಾತುಗಳನ್ನು ಆಡುವುದರಿಂದ ಸಮಸ್ಯೆಗೆ ಪರಿಹಾರ ಸಿಗುವುದು. ಸಾಮಾಜಿಕವಾಗಿ ಬದುಕಿನಲ್ಲಿ ಹುರುಪನ್ನು ಕಾಣಲಿದ್ದೀರಿ.

ಕುಂಭ: ನಿಶ್ಚಿತ ಕಾರ್ಯಗಳು ಪ್ರಕೃತಿಯಲ್ಲಿನ ಅನಿಶ್ಚಿತ ಬದಲಾವಣೆಗಳಿಂದಾಗಿ ಹಿಂದುಮುಂದಾಗಬಹುದು. ಹೊಸ ಕೆಲಸವನ್ನು ಆರಂಭ ಮಾಡುವುದು ಸರಿಯಲ್ಲ. ರಾಜಕೀಯ ರಂಗದಲ್ಲಿ ಉತ್ತಮ ಅನುಕೂಲಗಳ ಸಂಭವವಿದೆ.


ಮೀನ: ಅಣ್ಣ-ತಮ್ಮಂದಿರ ಮನೆಯಲ್ಲಿನ ಶುಭಕಾರ್ಯಗಳಲ್ಲಿ ಜವಾಬ್ದಾರಿ ವಹಿಸುವಿರಿ. ಮನೆಯಲ್ಲಿ ಆಗಾಗ ಅಶಾಂತಿಯ ವಾತಾವರಣ ಸೃಷ್ಟಿಯಾಗಬಹುದು. ನಿವೇಶನ ಖರೀದಿ ಯೋಜನೆ ಹಾಕಿಕೊಳ್ಳಬಹುದು.

ಪದಬಂಧ 6041

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ಅಮೋನಿಯಾ ಮತ್ತು ಕ್ಲೋರಿನ್ ಸಂಯೋಗದಿಂದಾದ ಕ್ಷಾರ (5)
5.ಬೇಡಿಕೆಯನ್ನು ಹೀಗೆ ಹೇಳಿ (3)
7.ಏರುತಗ್ಗಿಲ್ಲದಿರುವುದು (3)
9.ಮಣ ಭಾರ ಹೊತ್ತಿರುವ ಇನಿಯ (3)
10.ವಿಕ್ರಯಿಸುತ್ತಿರುವಾಗ ಬೀಸಿದ ಗಾಳಿ (3)
11.ಅಂತರಂಗದಲ್ಲಿರುವ ಅಲೆ (3)
12.ಮರದೊಳಗೆ ಸವಿಯಾದುದು ಬಂದಿದೆ (3)
14.ಪ್ರಾಧಿಕಾರದ ಸುತ್ತವಿರುವ ಪೌಳಿ (3)
15.ರಜದಲ್ಲಿ ಆಚರಿಸಿದ ಬೆಳ್ಳಿ ಹಬ್ಬ (5)

ಮೇಲಿಂದ ಕೆಳಕ್ಕೆ
1.ಅದೇ ತಾನೆ ಬಿರಿದ ಹೂವು (4)
2.ವತಾರದವರಿಗೆ ಸಿಕ್ಕಿರುವ ಅನುಗ್ರಹ (2)
3.ಪಣ ಹೂಡಿ ಮಾಡಿರುವ ಅಳತೆ (4)
6.ತಮ್ಮನಿಗೆ ಈ ತರಹ ತೋರಿದ ಬೇಧಭಾವ (4)
8.ಗಮ ಗಮ ಎನ್ನುತ್ತಲೇ ಸೇರುವಿಕೆ! (4)
11.ತರತರದ ಕಾಯಿಪಲ್ಲೆ (4)
13.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
15.ವಿರಮಿಸುತ್ತಿದ್ದಾಗ ಕಾಣಿಸಿದ ಸೂರ್ಯ (2)



6040ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮುತ್ತು 2.ಶಸ್ತ್ರಾಗಾರ
4.ಕಡಿವಾಣ 6.ಗಡಿಯಾರ
8.ರಾವುತ 9.ವಿಜ್ಞಾನ
11.ಸಮಂಜಸ 13.ಮಧುಕರ
15.ಮಹತ್ತರ 16.ಗಣಿ

ಮೇಲಿಂದ ಕೆಳಕ್ಕೆ:
1.ಮುದುಕ 2.ಶರಣ
3.ಗಾಣಿಗ 5.ಡಿಕಾವು
7.ರಸನ 8.ರಾಯಸ
10.ಜ್ಞಾಪಕ 12.ಸನಿಹ
13.ಮಸೂರ 14.ರಮಣಿ

ಸುಡೊಕು 6425


		5		8		4		
	8		7		5			9
7		1		6		2		
							3	2
3	6		5		7	8		
		8					4	7
		7		5		1		3
5			9		8			
2		3				9		5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6424 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,008
ಇಂದಿನ ಅಂತ್ಯ	24,924
▲	916
ದಿನದ ಗರಿಷ್ಠ	24,944

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹560
12 ಕ್ಕೆ	₹75
ಮೈಸೂರು	
100ಕ್ಕೆ	₹573

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹317-525
ದ್ವಿತಳಿ (ಬಿ.ವಿ)	₹421-722

ವಿನಿಮಯ ದರ

$ ಡಾಲರ್	84.93
£ ಪೌಂಡ್	112.11
€ ಯುರೊ	94.48
¥ ಯೆನ್ (100ಕ್ಕೆ)	57

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1375 (1370)
ಸೋಯಾ (ರಿಫೈನ್ಡ್)	₹1290 (1285)
ಸೂರ್ಯಕಾಂತಿ (ರಿಫೈನ್ಡ್)	₹1395 (1390)
ಪಾಮೋಲಿನ್	₹1230 (1225)

ಐಟಿ ರಿಟರ್ನ್; ಅಧಿಸೂಚನೆ ಪ್ರಕಟ



ನವದೆಹಲಿ (ಪಿಟಿಐ): 2025–26ರ ಅಂದಾಜು ವರ್ಷಕ್ಕೆ ಸಂಬಂಧಿಸಿದಂತೆ, ಆದಾಯ ತೆರಿಗೆ ಲೆಕ್ಕಪತ್ರದ ವಿವರ ಸಲ್ಲಿಕೆಗೆ (ಐ.ಟಿ ರಿಟರ್ನ್ಸ್) ಇಲಾಖೆಯ ಎಲ್ಲಾ 7 ಮಾದರಿಯ ಅರ್ಜಿ ನಮೂನೆಗಳ ಅಧಿಸೂಚನೆ ಪ್ರಕಟಿಸಿದೆ.

ಸಣ್ಣ ಹಾಗೂ ಮಧ್ಯಮ ಕ್ರಮಾಂಕದ ತೆರಿಗೆ ಪಾವತಿದಾರರು ಐಟಿಆರ್ 1 ಹಾಗೂ 5ನೇ ಫಾರ್ಮ್ ಬಳಸಬೇಕು ಎಂದು ಏ.29ರಂದು ಹೊರಡಿಸಿದ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಟ್ರಸ್ಟ್, ಚಾರಿಟಬಲ್ ಇನ್‌ಸ್ಟಿಟ್ಯೂಷನ್ ಸಂಸ್ಥೆಗಳು ಐಟಿಆರ್–7 ಬಳಸಬೇಕು ಎಂದು ಮೇ 11 ರಂದು ಹೊರಡಿಸಿದ ಅಧಿಸೂಚನೆಯಲ್ಲಿ ತಿಳಿಸಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಮಾರುಕಟ್ಟೆ	ತಳಿ	ದರ
ಕುಮಟ	ಚಾಲಿ	34199-42499
	ಚಿಪ್ಪು	22559-29599
	ಹೊಸಚಾಲಿ	32919-41559
ಪುತ್ತೂರು	ಕೋಕ	20000-30000
	ಹೊಸತು	26000-46000
	ಹಳತು	36000-51000
ಶಿವಮೊಗ್ಗ	ಬೆಟ್ಟೆ	50199-59240
	ಗೊರಬಲು	17009-29696
	ರಾಶಿ	48351-57009
	ಸರಕು	62200-93420
ಸಿದ್ದಾಪುರ	ಬಿಳಿಗೋಟು	24369-31089
	ಚಾಲಿ	34099-41009
	ಕೋಕ	15899-25269
	ಹಳೆಚಾಲಿ	37509-37509
	ಕೆಂಪುಗೋಟು	21019-23469
	ರಾಶಿ	40599-46099
	ತಟ್ಟಿಬೆಟ್ಟೆ	27119-30099
ಶಿರಸಿ	ಬೆಟ್ಟೆ	21699-43001
	ಬಿಳಿಗೋಟು	18099-32699
	ಚಾಲಿ	34808-43099
	ಕೆಂಪುಗೋಟು	13699-30699
	ರಾಶಿ	40898-48409
ಯಲ್ಲಾಪುರ	ಬಿಳಿಗೋಟು	15089-32700
	ಚಾಲಿ	32719-41999
	ಕೋಕ	7699-16600
	ಕೆಂಪುಗೋಟು	16109-25213
	ರಾಶಿ	39619-58299
	ತಟ್ಟಿಬೆಟ್ಟೆ	28010-38189

ಈರುಳ್ಳಿ (ಕ್ವಿಂಟಲ್‌ಗೆ)



ದಪ್ಪ	₹1,200-1,500
ಮಧ್ಯಮ	₹800-1,200
ಸಣ್ಣ	₹400-800

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)




ದಾವಣಗೆರೆ	₹13000-13000
ಪುತ್ತೂರು	₹11000-18000
ತಿಪಟೂರು	₹17000-18244





ಹೂಡಿಕೆದಾರರ ಸಂಪತ್ತಿಗೆ ಒಂದೇ ದಿನ ₹16 ಲಕ್ಷ ಕೋಟಿ ಸೇರ್ಪಡೆ

ಸೆನ್ಸೆಕ್ಸ್ 2,975 ಅಂಶ ಜಿಗಿತ



ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಸೋಮವಾರ ಗೂಳಿ ಆರ್ಭಟದಿಂದಾಗಿ ಸೂಚ್ಯಂಕಗಳು ಶೇ 3ಕ್ಕೂ ಹೆಚ್ಚು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 2,975 ಅಂಶ (ಶೇ 3.74) ಏರಿಕೆ ದಾಖಲಿಸಿ, 82,429ಕ್ಕೆ ವಹಿವಾಟು ಅಂತ್ಯಗೊಂಡಿದೆ. ಇದು ಏಳು ತಿಂಗಳ ಗರಿಷ್ಠ ಮಟ್ಟವಾಗಿದೆ. ದಿನದ ವಹಿವಾಟಿನ ವೇಳೆ 3,041 ಅಂಶ ಹೆಚ್ಚಳವಾಗಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 916 ಅಂಶ (ಶೇ 3.82) ಏರಿಕೆಯಾಗಿ, 24,924ಕ್ಕೆ ಕೊನೆಗೊಂಡಿತು.

ಸೂಚ್ಯಂಕಗಳ ಏರಿಕೆಯಿಂದ ಹೂಡಿಕೆದಾರರ ಸಂಪತ್ತಿಗೆ ಒಂದೇ ದಿನ ₹16.15 ಲಕ್ಷ ಕೋಟಿ ಸೇರ್ಪಡೆಯಾಗಿದೆ. ಬಿಎಸ್‌ಇ ನೋಂದಾಯಿತ ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯ ₹432 ಲಕ್ಷ ಕೋಟಿಯಾಗಿದೆ.

ಇನ್ಫೊಸಿಸ್, ಎಚ್‌ಸಿಎಲ್ ಟೆಕ್, ಟಾಟಾ ಸ್ಟೀಲ್, ಎಟರ್ನಲ್, ಟೆಕ್ ಮಹೀಂದ್ರ, ಟಿಸಿಎಸ್, ಎಕ್ಸಿಸ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಎನ್‌ಟಿಪಿಸಿ, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಬಜಾಜ್ ಫೈನಾನ್ಸ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಸನ್ ಫಾರ್ಮಾ ಮತ್ತು ಇಂಡಸ್‌ಇಂಡ್ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ, ಜಪಾನ್, ಶಾಂಘೈ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆಯು ಸಕಾರಾತ್ಮಕ ವಹಿವಾಟು ನಡೆಸಿವೆ.

2024ರ ಜೂನ್ 3ರಂದು ಸೆನ್ಸೆಕ್ಸ್ 2,507 ಅಂಶ ಮತ್ತು ನಿಫ್ಟಿ 733 ಅಂಶ ಏರಿಕೆ ದಾಖಲಿಸಿತ್ತು. ಇದಾದ ಬಳಿಕ ಗರಿಷ್ಠ ಏರಿಕೆ ಕಂಡ ದಿನ ಇದಾಗಿದೆ.

ಐ.ಟಿ. ಲೋಹ, ರಿಯಾಲ್ಟಿ ಷೇರುಗಳ ಖರೀದಿ ಹೆಚ್ಚಳವು ಸೂಚ್ಯಂಕಗಳ ಏರಿಕೆಗೆ ಕಾರಣವಾಗಿವೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಶೇ 2.88ರಷ್ಟು ಏರಿಕೆಯಾಗಿದೆ. ಪ್ರತೀ ಬ್ಯಾರೆಲ್ ಬೆಲೆ 65.75 ಡಾಲರ್ (₹5,577) ಆಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶುಕ್ರವಾರದ ವಹಿವಾಟಿನಲ್ಲಿ ₹3,798 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

'ಭಾರತ ಮತ್ತು ಪಾಕಿಸ್ತಾನ ಕದನ ವಿರಾಮ ಘೋಷಿಸಿವೆ. ಇದು ಉದ್ವಿಗ್ನತೆಯನ್ನು ಕಡಿಮೆ ಮಾಡಿದೆ. ಜೊತೆಗೆ ಅಮೆರಿಕ ಮತ್ತು ಚೀನಾ ಸುಂಕ ಕಡಿತಕ್ಕೆ ಮುಂದಾಗಿವೆ. ಇದರಿಂದ ಷೇರು ಸೂಚ್ಯಂಕಗಳು ಏರಿಕೆ ಕಂಡಿವೆ' ಎಂದು ಜಿಯೊಜಿತ್ ಇನ್ವೆಸ್ಟ್‌ಮೆಂಟ್ಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಪಾಕ್ ಷೇರುಪೇಟೆ ಶೇ 9ರಷ್ಟು ಏರಿಕೆ

ಕರಾಚಿ (ಎಪಿ): ಪಾಕಿಸ್ತಾನದ ಪ್ರಮುಖ ಷೇರುಪೇಟೆಯಾದ ಕರಾಚಿ ಸ್ಟಾಕ್ ಎಕ್ಸ್‌ಚೇಂಜ್–100 ಸೂಚ್ಯಂಕ ಸೋಮವಾರ ವಹಿವಾಟಿನಲ್ಲಿ ಏರಿಕೆ ಕಂಡಿದೆ.

9,929 ಅಂಶ (ಶೇ 9.26ರಷ್ಟು) ಏರಿಕೆ ಕಂಡಿದ್ದು, 1,17,104 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿದೆ. ಕಳೆದ ವಾರದ ವಹಿವಾಟಿನಲ್ಲಿ ಸೂಚ್ಯಂಕವು ಶೇ 6.5ರಷ್ಟು ಕುಸಿತ ಕಂಡಿತ್ತು.

ಭಾರತ ಮತ್ತು ಪಾಕಿಸ್ತಾನ ಸೇನಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವುದಾಗಿ ಹೇಳಿವೆ. ಹೀಗಾಗಿ ಸೂಚ್ಯಂಕಗಳು ಏರಿಕೆ ದಾಖಲಿಸಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಚಿನ್ನದ ಧಾರಣೆ ₹3,400 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನದ ಧಾರಣೆಯಲ್ಲಿ ಭಾರಿ ಇಳಿಕೆಯಾಗಿದೆ.



10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹3,400 ಕಡಿಮೆಯಾಗಿ, ₹96,550ರಂತೆ ಮಾರಾಟವಾಗಿದೆ. ಆಭರಣ ಚಿನ್ನವು ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ, ₹96,100 ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹200 ಕಡಿಮೆಯಾಗಿ, ₹99,700 ಆಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ದರ ಇಳಿಕೆಯಾಗಿದೆ. ಹೀಗಾಗಿ ದೇಶದ ಮಾರುಕಟ್ಟೆಯಲ್ಲೂ ದರ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

2024ರ ಜುಲೈ 23ರಂದು ಚಿನ್ನದ ದರ ₹3,350 ಇಳಿಕೆಯಾಗಿತ್ತು.

ಸುದ್ದಿ 2 ನಿಮಿಷ

4.24 ಲಕ್ಷ ಟನ್ ಸಕ್ಕರೆ ರಫ್ತು

ನವದೆಹಲಿ (ಪಿಟಿಐ): 2024–25ರ ಮಾರುಕಟ್ಟೆ ವರ್ಷದ (ಅಕ್ಟೋಬರ್–ಸೆಪ್ಟೆಂಬರ್) ಏಪ್ರಿಲ್ 30ರ ವರೆಗೆ 4.24 ಲಕ್ಷ ಟನ್ ಸಕ್ಕರೆ ರಫ್ತು ಮಾಡಲಾಗಿದೆ ಎಂದು ಅಖಿಲ ಭಾರತ ಸಕ್ಕರೆ ವ್ಯಾಪಾರಿಗಳ ಒಕ್ಕೂಟ (ಎಐಎಸ್‌ಟಿಎ) ಸೋಮವಾರ ತಿಳಿಸಿದೆ.

ಈ ಪೈಕಿ 3.27 ಲಕ್ಷ ಟನ್ ಬಿಳಿ ಸಕ್ಕರೆ ರಫ್ತಾಗಿದೆ. ಸಂಸ್ಕರಿಸಿದ ಸಕ್ಕರೆ 77,603 ಟನ್ ಮತ್ತು 18,514 ಟನ್ ಕಚ್ಚಾ ಸಕ್ಕರೆ ರಫ್ತಾಗಿದೆ.

ಒಟ್ಟು ರಫ್ತಿನ ಪೈಕಿ ಸೊಮಾಲಿಯಾಗೆ ಗರಿಷ್ಠ 92,758 ಟನ್ ರವಾನಿಸಲಾಗಿದೆ. ಅಫ್ಗಾನಿಸ್ತಾನ 66,927 ಟನ್, ಶ್ರೀಲಂಕಾ 60,357 ಟನ್ ಮತ್ತು ದಿಬೌತಿಗೆ 47,100 ಟನ್‌ನಷ್ಟು ರಫ್ತಾಗಿದೆ ಎಂದು ತಿಳಿಸಿದೆ.



ಪ್ರಸಕ್ತ ಮಾರುಕಟ್ಟೆ ಋತುವಿನಲ್ಲಿ 10 ಲಕ್ಷ ಟನ್ ಸಕ್ಕರೆ ರಫ್ತಿಗೆ ಕೇಂದ್ರ ಸರ್ಕಾರವು ಒಪ್ಪಿಗೆ ನೀಡಿದೆ. ಆದರೆ, 8 ಲಕ್ಷ ಟನ್‌ನಷ್ಟು ರಫ್ತಾಗುವ ನಿರೀಕ್ಷೆ ಇದೆ ಎಂದು ಹೇಳಿದೆ.

2025-26ರ ಋತುವಿನಲ್ಲಿ ಕಬ್ಬಿನ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯಲ್ಲಿನ ಏರಿಕೆಗೆ ಅನುಗುಣವಾಗಿ ಸಕ್ಕರೆಯ ಕನಿಷ್ಠ ಮಾರಾಟ ಬೆಲೆಯನ್ನು ಹೆಚ್ಚಿಸಬೇಕು. ಜೊತೆಗೆ ಎಥೆನಾಲ್ ಖರೀದಿ ದರವನ್ನು ಶೇ 10ರಷ್ಟು ಏರಿಕೆ ಮಾಡುವಂತೆ ಸರ್ಕಾರವನ್ನು ಎಐಎಸ್‌ಟಿಎ ಒತ್ತಾಯಿಸಿದೆ.

32 ವಿಮಾನ ನಿಲ್ದಾಣಗಳ ಕಾರ್ಯಾಚರಣೆ ಮತ್ತೆ ಆರಂಭ

ಮುಂಬೈ (ಪಿಟಿಐ): 32 ವಿಮಾನ ನಿಲ್ದಾಣಗಳ ಕಾರ್ಯಾಚರಣೆ ಮತ್ತೆ ಆರಂಭವಾಗಲಿದೆ ಎಂದು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ಸೋಮವಾರ ತಿಳಿಸಿದೆ.


ಭಾರತ ಮತ್ತು ಪಾಕಿಸ್ತಾನದ ನಡುವೆ ತಲೆದೋರಿದ್ದ ಉದ್ವಿಗ್ನತೆಯಿಂದಾಗಿ ದೇಶದ 32 ವಿಮಾನ ನಿಲ್ದಾಣಗಳ ಕಾರ್ಯಾಚರಣೆಯನ್ನು ಸುರಕ್ಷತೆ ದೃಷ್ಟಿಯಿಂದ ಮೇ 15ರ ವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಶನಿವಾರದಂದು ಭಾರತ ಮತ್ತು ಪಾಕಿಸ್ತಾನವು ಎಲ್ಲಾ ರೀತಿಯ ಸೇನಾ ಕಾರ್ಯಾಚರಣೆಯನ್ನು ತಕ್ಷಣದಿಂದಲೇ ನಿಲ್ಲಿಸಲಾಗುವುದು ಎಂದು ಹೇಳಿವೆ. ಹೀಗಾಗಿ ವಿಮಾನ ನಿಲ್ದಾಣಗಳ ಕಾರ್ಯಾಚರಣೆ ಮತ್ತೆ ಆರಂಭವಾಗುತ್ತಿದೆ.

ಈ ಎಲ್ಲಾ ವಿಮಾನ ನಿಲ್ದಾಣಗಳು ತಕ್ಷಣದಿಂದಲೇ ಕಾರ್ಯಾಚರಣೆಗೆ ಲಭ್ಯವಿದೆ. ಪ್ರಯಾಣಿಕರು, ತಮ್ಮ ವಿಮಾನದ ಸ್ಥಿತಿಗತಿ ಮತ್ತು ಕಾರ್ಯಾಚರಣೆಯ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದು ಎಂದು ತಿಳಿಸಿದೆ.

ಜಂಟಿ ಹೇಳಿಕೆ ಬಿಡುಗಡೆ ಮಾಡಿದ ಅಮೆರಿಕ, ಚೀನಾ: ಜಗತ್ತಿನ ಷೇರು ಮಾರುಕಟ್ಟೆ ಚೇತರಿಕೆ

'90 ದಿನಗಳವರೆಗೆ ಸುಂಕ ಸಮರಕ್ಕೆ ತೆರೆ'

ಜಿನೀವಾ (ಎಎಫ್‌ಪಿ/ಎಪಿ): ಆಮದು ವಸ್ತುಗಳ ಮೇಲೆ ಹೇರಿದ್ದ ಭಾರಿ ಪ್ರಮಾಣದ ಪ್ರತಿಸುಂಕವನ್ನು 90 ದಿನಗಳವರೆಗೆ ತಗ್ಗಿಸುವ ಒಪ್ಪಂದವನ್ನು ಅಮೆರಿಕ ಹಾಗೂ ಚೀನಾ ಮಾಡಿಕೊಂಡಿವೆ. ಇದರಿಂದಾಗಿ 'ಸುಂಕ ಸಮರ'ಕ್ಕೆ ತಾತ್ಕಾಲಿಕವಾಗಿ ತೆರೆಬಿದ್ದಿದೆ.



ವಿಶ್ವಸಂಸ್ಥೆಯ ಸ್ವಿಟ್ಜರ್ಲೆಂಡ್‌ನ ರಾಯಭಾರಿಯ ಅಧಿಕೃತ ನಿವಾಸದಲ್ಲಿ ಎರಡು ದಿನಗಳವರೆಗೆ ಮಾತುಕತೆ ನಡೆಸಿದ ಎರಡೂ ದೇಶಗಳು, ಪರಸ್ಪರರ ಮೇಲೆ ವಿಧಿಸಿದ್ದ ಭಾರಿ ಪ್ರತಿಸುಂಕವನ್ನು ತೀವ್ರ ಪ್ರಮಾಣದಲ್ಲಿ ತಗ್ಗಿಸಿವೆ. ಈ ಬಗ್ಗೆ ಭಾನುವಾರ ಎರಡೂ ದೇಶಗಳು ಜಂಟಿ ಹೇಳಿಕೆ ಬಿಡುಗಡೆ ಮಾಡಿವೆ.

'ಚೀನಾದ ಉಪಾಧ್ಯಕ್ಷ ಹಿ ಲಿಫೆಂಗ್ ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಪ್ರತಿನಿಧಿ ಲಿ ಚೆಂಗ್‌ಗಾಂಗ್ ಅವರೊಂದಿಗೆ ನಡೆಸಿದ ಮಾತುಕತೆಯು ಅನುಕೂಲಕರವಾಗಿತ್ತು' ಎಂದು ಅಮೆರಿಕದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಹೇಳಿದರು. ಈ ಮಾಹಿತಿ ಹೊರಬೀಳುತ್ತಿದ್ದಂತೆಯೇ ಜಗತ್ತಿನ ಷೇರು ಮಾರುಕಟ್ಟೆಯಲ್ಲಿ ಚೇತರಿಕೆಯಾಗಿದೆ.

'ಮಾತುಕತೆಯು ಎರಡೂ ದೇಶಗಳ ಹಿತದೃಷ್ಟಿಯಿಂದ ಕೂಡಿತ್ತು. ಜೊತೆಗೆ ಜಗತ್ತಿನ ಹಿತವೂ ಇತ್ತು. ಏಕಪಕ್ಷೀಯವಾಗಿ ಸುಂಕ ಏರಿಸುವ ತಪ್ಪು ಪ್ರವೃತ್ತಿಯನ್ನು ಸರಿಪಡಿಸಿಕೊಳ್ಳುವಲ್ಲಿ ಇನ್ನು ಮುಂದೆಯೂ ಅಮೆರಿಕವು ಚೀನಾದೊಂದಿಗೆ ಹೀಗೆಯೇ ಕೆಲಸ ಮಾಡುತ್ತದೆ ಎಂದು ಭಾವಿಸುತ್ತೇವೆ' ಎಂದು ಚೀನಾ ಹೇಳಿದೆ.

ಅಮೆರಿಕದ ಪ್ರತಿಸುಂಕವೇ ಅಧಿಕ ಏಕೆ?: ಫೆಂಟನೆಲ್ ಅನ್ನು ತಯಾರಿಸಲು ಬೇಕಾದ ರಾಸಾಯನಿಕವನ್ನು ಚೀನಾವು ರಫ್ತು ಮಾಡುತ್ತದೆ ಎಂಬುದು ಅಮೆರಿಕದ ಆರೋಪ. ಇದೇ ಕಾರಣಕ್ಕೆ, ಅಮೆರಿಕವು ಚೀನಾದ ಮೇಲೆ ಶೇ 20ರಷ್ಟು ಅಧಿಕ ಸುಂಕವನ್ನು ವಿಧಿಸುತ್ತದೆ. 'ನಾವು ಫೆಂಟನೆಲ್ ವಿಚಾರವಾಗಿಯೂ ಮಾತುಕತೆ ನಡೆಸುತ್ತೇವೆ. ಈ ಬಗ್ಗೆಯೂ ಉತ್ತಮ ಪರಿಹಾರ ಕಂಡುಕೊಳ್ಳುತ್ತೇವೆ' ಎಂದು ಅಮೆರಿಕ ಹೇಳಿದೆ.

90 ದಿನಗಳ ಬಳಿಕ ಮುಂದೇನು?

ಅಮೆರಿಕದ ಪ್ರತಿಸುಂಕ ನೀತಿಯ ವಿರುದ್ಧವಾಗಿ ಏ.2ರಿಂದ ತೆಗೆದುಕೊಂಡ ಎಲ್ಲ ಕ್ರಮಗಳನ್ನು ಹಿಂಪಡೆಯುವುದಾಗಿ ಚೀನಾ ಹೇಳಿದೆ.

'ಇಂಥ ಅಧಿಕ ಸುಂಕಗಳಿಂದ ನಾವೇನು ಸಾಧಿಸಿದ್ದೇವೆ... ನಿರ್ಬಂಧಗಳನ್ನಷ್ಟೆ. ನಮ್ಮ ಎರಡೂ ದೇಶಗಳಿಗೂ ಇದು ಬೇಡ. ನಮಗೆ ವ್ಯಾಪಾರ ಬೇಕು. ಒಂದು ಸಮತೋಲಿತ ವ್ಯಾಪಾರ ಬೇಕು' ಎಂದು ಅಮೆರಿಕ ಹೇಳಿದೆ. 'ಕೆಲವೇ ದಿನಗಳಲ್ಲಿ ಮತ್ತೊಮ್ಮೆ ಮಾತುಕತೆ ನಡೆಸಲಿದ್ದೇವೆ' ಎಂದು ಅಮೆರಿಕದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಈ ಎಲ್ಲ ಹೇಳಿಕೆಗಳ ಮಧ್ಯೆಯೂ 90 ದಿನಗಳ ಬಳಿಕ ಮುಂದೇನು ಎನ್ನುವ ಕುತೂಹಲ ಹಾಗೆಯೇ ಉಳಿದಿದೆ. ಎರಡೂ ದೇಶಗಳು ಪರಸ್ಪರರ ಮೇಲೆ ಅನುಸರಿಸುತ್ತಿರುವ ಜಟಿಲ ಸುಂಕ ನೀತಿ ಮತ್ತು ವ್ಯಾಪಾರಗಳ ಮೇಲೆ ಹೇರುತ್ತಿರುವ ದಂಡಗಳ ಮೇಲೆ ಈ ಒಪ್ಪಂದವು ಯಾವ ಪರಿಣಾಮ ಬೀರಲಿದೆ ಎಂಬುದು ಖಚಿತವಾಗಿಲ್ಲ. ತಮ್ಮ ಮಧ್ಯೆ ಹಲವು ವರ್ಷಗಳಿಂದ ಇರುವ ಸಮಸ್ಯೆಗಳಿಗೆ ಎರಡೂ ದೇಶಗಳು 90 ದಿನಗಳಲ್ಲಿ ಪರಿಹಾರ ಕಂಡುಕೊಳ್ಳಲಿವೆಯೇ ಎಂಬುದರ ಮೇಲೆ ಎಲ್ಲವೂ ನಿಂತಿದೆ.

ಸಂಕ್ಷಿಪ್ತ ಸುದ್ದಿ

ಬಾಂಗ್ಲಾ: ಆರೋಪಿಗಳ ಪರ ಪ್ರಚಾರ ನಿಷೇಧ

ಢಾಕಾ/ನವದೆಹಲಿ (ಪಿಟಿಐ): ಆರೋಪ ಎದುರಿಸುತ್ತಿರುವ ಸಂಘಟನೆ ಮತ್ತು ವ್ಯಕ್ತಿಯ ಹೇಳಿಕೆ, ಅವರಿಗೆ ಸಂಬಂಧಿಸಿದ ಯಾವುದೇ ವಿಷಯದ ಕುರಿತು ಪ್ರಸಾರ ಮಾಡುವುದನ್ನು ಪರಿಷ್ಕೃತ ಭಯೋತ್ಪಾದನಾ ನಿಗ್ರಹ ಕಾಯ್ದೆ ಅಡಿಯಲ್ಲಿ ಬಾಂಗ್ಲಾದೇಶವು ನಿಷೇಧಿಸಿದೆ.

ಅಂತಹ ಸಂಘಟನೆ ಹಾಗೂ ವ್ಯಕ್ತಿಗೆ ಬೆಂಬಲ ನೀಡುವ ಪತ್ರಿಕಾ ಹೇಳಿಕೆಗಳು, ಸಾಮಾಜಿಕ ಜಾಲತಾಣಗಳಲ್ಲಿ ವಿಷಯಗಳನ್ನು ಹಂಚಿಕೊಳ್ಳುವುದು ಹಾಗೂ ಸಾರ್ವಜನಿಕ ಸಭೆಗಳನ್ನು ಈ ಕಾಯ್ದೆಯು ನಿಷೇಧಿಸುತ್ತದೆ.

ಪದಚ್ಯುತ ಪ್ರಧಾನಿ ಶೇಖ್ ಹಸೀನಾ ನೇತೃತ್ವದ ಅವಾಮಿ ಲೀಗ್ ಪಕ್ಷವನ್ನು ನಿಷೇಧಿಸಿದ ಬಳಿಕ ಈ ಕ್ರಮ ಕೈಗೊಳ್ಳಲಾಗಿದೆ. ರಾಷ್ಟ್ರಪತಿ ಮೊಹಮ್ಮದ್ ಶಹಾಬುದ್ದೀನ್ ಅವರು ಭಯೋತ್ಪಾದನಾ ನಿಗ್ರಹ ಕಾಯ್ದೆಗೆ ತಿದ್ದುಪಡಿ ತರುವ ಸುಗ್ರೀವಾಜ್ಞೆಯನ್ನು ಭಾನುವಾರ ರಾತ್ರಿ ಹೊರಡಿಸಿದರು.

'ಔಷಧಿಗಳ ಬೆಲೆ ತಗ್ಗಿಸಲು ಗಡುವು'

ವಾಷಿಂಗ್ಟನ್ (ಎಪಿ): ಔಷಧಿಗಳ ಬೆಲೆಯನ್ನು ಇಳಿಕೆ ಮಾಡುವಂತೆ ಔಷಧ ಕಂಪನಿಗಳಿಗೆ 30 ದಿನಗಳ ಗಡುವು ನೀಡಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಈ ಸಂಬಂಧ ಸೋಮವಾರ ಕಾರ್ಯಕಾರಿ ಆದೇಶಕ್ಕೆ ಸಹಿ ಹಾಕಿದ್ದಾರೆ.



ಡೊನಾಲ್ಡ್ ಟ್ರಂಪ್

ಆರೋಗ್ಯ ಇಲಾಖೆಯ ನೇತೃತ್ವ ವಹಿಸಿರುವ ರಾಬರ್ಟ್ ಎಫ್. ಕೆನಡಿ ಜ್ಯೂನಿಯರ್ ಔಷಧಿಗಳ ಹೊಸ ದರದ ಕುರಿತು ನಿರ್ಧರಿಸಲಿದ್ದಾರೆ ಎಂದು ಆದೇಶಕ್ಕೂ ಸಹಿಹಾಕುವ ಮುನ್ನ ಶ್ವೇತಭವನದ ಅಧಿಕಾರಿಗಳು ಮಾಹಿತಿ ನೀಡಿದರು. ಈ ಕುರಿತು ಹೊಸ ಆದೇಶವನ್ನು ಡೊನಾಲ್ಡ್ ಟ್ರಂಪ್ ಸಾಮಾಜಿಕ ಜಾಲತಾಣ 'ಟ್ರೂಥ್'ನಲ್ಲಿ ಭಾನುವಾರ ಪ್ರಕಟಿಸಿದ್ದಾರೆ.

ಒತ್ತೆಯಾಳು ಬಿಡುಗಡೆ: ಹಮಾಸ್

ದೀರ್ ಅಲ್–ಬಲಾಹ್ (ಎಪಿ): ಗಾಜಾದಲ್ಲಿ ಬಂಧಿಸಲಾಗಿದ್ದ ಅಮೆರಿಕನ್– ಇಸ್ರೇಲ್ ಒತ್ತೆಯಾಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹಮಾಸ್ ಸೋಮವಾರ ತಿಳಿಸಿದೆ. ಆದರೆ, ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡಿಲ್ಲ.

ಟ್ರಂಪ್ ಆಡಳಿತದ ಸೂಚನೆ ಮೇರೆಗೆ ಕೊನೆಯ ಒತ್ತೆಯಾಳು ಎಡನ್ ಅಲೆಕ್ಸಾಂಡರ್ ಅವರನ್ನು ಬಿಡುಗಡೆ ಮಾಡುವುದಾಗಿ ಹಮಾಸ್ ಭಾನುವಾರವೇ ಹೇಳಿತ್ತು.

'ಬಿಡುಗಡೆಯನ್ನು ನಿರೀಕ್ಷಿಸಿದ್ದೆವು. ಇದರ ಭಾಗವಾಗಿ ಕದನ ವಿರಾಮಕ್ಕೆ ಬದ್ಧರಾಗಿಲ್ಲ. ಆದರೆ, ಅಲೆಕ್ಸಾಂಡರ್ ಬಿಡುಗಡೆಗೆ ಅವಕಾಶ ನೀಡಲು ಸುರಕ್ಷಿತ ಕಾರಿಡಾರ್ ರಚಿಸುವುದಾಗಿ' ಇಸ್ರೇಲ್ ಪ್ರಧಾನಿ ಕಚೇರಿ ತಿಳಿಸಿದೆ.

ಕದನ ವಿರಾಮ ಪ್ರಸ್ತಾವ ತಿರಸ್ಕಾರ ಉಕ್ರೇನ್ ಮೇಲೆ ರಷ್ಯಾ ದಾಳಿ

ಕೀವ್ (ಎಪಿ): 'ಇರಾನ್ ನಿರ್ಮಿತ 100ಕ್ಕೂ ಹೆಚ್ಚು 'ಶಹೀದ್' ಡ್ರೋನ್‌ಗಳ ಜೊತೆಗೆ 'ಹುಸಿ' ಡ್ರೋನ್‌ಗಳನ್ನೂ ರಷ್ಯಾವು ನಮ್ಮತ್ತ ಹಾರಿಸಿದೆ' ಎಂದು ಉಕ್ರೇನ್ ಸೇನೆ ಸೋಮವಾರ ಹೇಳಿದೆ. ಸೋಮವಾರದಿಂದ ಆರಂಭವಾಗಿ 30 ದಿನಗಳ ಕದನ ವಿರಾಮ ಘೋಷಿಸುವ ಅಮೆರಿಕ ಹಾಗೂ ಬ್ರಿಟನ್‌ನ ಪ್ರಸ್ತಾವವನ್ನು ತಿರಸ್ಕರಿಸಿದ ರಷ್ಯಾವು ಈ ದಾಳಿ ನಡೆಸಿದೆ.

ದಾಳಿಯ ಬಗ್ಗೆ ರಷ್ಯಾ ಪ್ರತಿಕ್ರಿಯೆ ನೀಡಿಲ್ಲ. 'ಇದೇ ವಾರ ತಮ್ಮೊಂದಿಗೆ ಶಾಂತಿ ಮಾತುಕತೆಗೆ ಟರ್ಕಿಗೆ ಬನ್ನಿ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ಸವಾಲು ಎಸೆದಿದ್ದಾರೆ. ಕದನ ವಿರಾಮ ಪ್ರಸ್ತಾವವನ್ನು ತಿರಸ್ಕರಿಸಿದ ರಷ್ಯಾವು, ಉಕ್ರೇನ್‌ನೊಂದಿಗೆ ಗುರುವಾರ ಇಸ್ತಾಂಬುಲ್‌ನಲ್ಲಿ ನೇರವಾಗಿ ಮಾತುಕತೆ ನಡೆಸುವುದಾಗಿ ಹೇಳಿದೆ.

ಮೊಬೈಲ್‌ನಲ್ಲೇ ಸಿಇಟಿ ಸೀಟು

ಒಂದನೇ ಪುಟದಿಂದ...

'ಚಾಟ್ ಬಾಟ್' ಬಳಸಿಕೊಂಡು ತಮ್ಮ ಪ್ರಶ್ನೆ, ಅನುಮಾನಗಳಿಗೆ ನೇರ ಉತ್ತರ ಪಡೆಯಬಹುದು. ಇದರಿಂದ ನಿಖರ ಮಾಹಿತಿ ಸಿಕ್ಕು, ಅನಗತ್ಯ ಗೊಂದಲಕ್ಕೆ ತೆರೆ ಬಿದ್ದು, ಮಧ್ಯವರ್ತಿಗಳ ಹಾವಳಿ ತಡೆಗೂ ಸಹಕಾರಿಯಾಗಲಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ರೂಪಿಸಿರುವ ಈ ವಿದ್ಯಾರ್ಥಿಸ್ನೇಹಿ ಉಪಕ್ರಮಗಳಿಗೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಸೋಮವಾರ ಚಾಲನೆ ನೀಡಿದರು.

ಕಾಲೇಜು ಪೋರ್ಟಲ್: ಅಭ್ಯರ್ಥಿಗಳು ಕಾಲೇಜುಗಳ ಆಯ್ಕೆಗೆ ಆಪ್ಷನ್ ದಾಖಲಿಸುವ ಮುನ್ನ ಆಯಾ ಕಾಲೇಜುಗಳ ಸಂಪೂರ್ಣ ಮಾಹಿತಿ ಕಾಲೇಜು ಪೋರ್ಟಲ್‌ನಲ್ಲಿ ಲಭ್ಯವಾಗುತ್ತದೆ. ಕಾಲೇಜುಗಳ ಮೂಲಸೌಲಭ್ಯ, ಶೈಕ್ಷಣಿಕ ವಾತಾವರಣ, ಪ್ರಯೋಗಾಲಯ, ಗ್ರಂಥಾಲಯ, ಕೊಠಡಿ, ಹಾಸ್ಟೆಲ್, ಕೋರ್ಸ್‌ವಾರು ಶುಲ್ಕದ ವಿವರ, ಅಧ್ಯಾಪಕ ವರ್ಗ ಸೇರಿದಂತೆ ಪೂರ್ಣ ವಿವರಗಳನ್ನು ವೀಕ್ಷಿಸಬಹುದು.

ಹಿಂದಿನ ಶೈಕ್ಷಣಿಕ ಸಾಲುಗಳಲ್ಲಿ ವಿದ್ಯಾರ್ಥಿಗಳು ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡು, ಅಲ್ಲಿಗೆ ತೆರಳಿದಾಗ ಮೂಲಸೌಕರ್ಯ, ಸಮರ್ಪಕ ಅಧ್ಯಾಪಕ ವರ್ಗ ಇಲ್ಲದೇ ಇರುವುದು, ಕಾಲೇಜುಗಳ ಸ್ಥಳ ಬದಲಾವಣೆಗಳಿಂದ ಸಂಕಷ್ಟ ಅನುಭವಿಸುತ್ತಿದ್ದರು. ಇಂತಹ ಯಾವುದೇ ಗೊಂದಲಗಳಿಗೆ ಇನ್ನು ಮುಂದೆ ಅವಕಾಶ ಇರುವುದಿಲ್ಲ ಎಂದು ಸಚಿವ ಸುಧಾಕರ್ ಮಾಹಿತಿ ನೀಡಿದರು.

> **ನಿಗದಿಗಿಂತ ಹೆಚ್ಚು ಶುಲ್ಕ ವಸೂಲಿ ಮಾಡುವ ಶಿಕ್ಷಣ ಸಂಸ್ಥೆಗಳ ವಿರುದ್ಧ ನೇರವಾಗಿ ಶುಲ್ಕ ನಿಯಂತ್ರಣ ಸಮಿತಿಗೆ ದೂರು ದಾಖಲಿಸುವುದಕ್ಕೂ ಇದೇ ಪೋರ್ಟಲ್‌ನಲ್ಲಿ ಲಿಂಕ್ ನೀಡುವ ಕೆಲಸ ನಡೆಯುತ್ತಿದೆ**
> **ಡಾ.ಎಂ.ಸಿ. ಸುಧಾಕರ್,** ಉನ್ನತ ಶಿಕ್ಷಣ ಸಚಿವ

ಕೆಇಎ ಮೊಬೈಲ್ ಆ್ಯಪ್: ಕೆಇಎ ವೆಬ್‌ಸೈಟ್‌ನಲ್ಲಿ ಲಭ್ಯವಾಗುವ ಎಲ್ಲ ಮಾಹಿತಿಯನ್ನೂ 'ಕೆಇಎ ಮೊಬೈಲ್ ಆ್ಯಪ್' ಒಳಗೊಂಡಿರುತ್ತದೆ. ಆ್ಯಪ್ ಮೂಲಕವೇ ಅರ್ಜಿ ಹಾಕುವುದು, ಆಪ್ಷನ್ ದಾಖಲಿಸುವುದು, ಛಾಯ್ಸ್, ಶುಲ್ಕ ಪಾವತಿ ಸೇರಿದಂತೆ ಎಲ್ಲ ಪ್ರಕ್ರಿಯೆಗಳನ್ನು ಮಾಡಬಹುದು. ವಿದ್ಯಾರ್ಥಿಗಳ ಪ್ರವೇಶವನ್ನೂ ಆಯಾ ಕಾಲೇಜುಗಳು ಅಂದೇ ಖಚಿತಪಡಿಸುತ್ತವೆ. ಇದರಿಂದ ಮುಂದಿನ ಸುತ್ತಿನ ಸೀಟು ಹಂಚಿಕೆಗೂ ವೇಗ ದೊರೆಯಲಿದೆ. ಆ್ಯಪ್ ಡೌನ್‌ಲೋಡ್ ಮಾಡಿಕೊಂಡವರಿಗೆ ಸಂದೇಶ ಕಳುಹಿಸುವ ವ್ಯವಸ್ಥೆ ಕೂಡ ಇರುತ್ತದೆ. ಗ್ರಾಮೀಣ ಭಾಗ ವಿದ್ಯಾರ್ಥಿಗಳಿಗೆ ಸಿಇಟಿ ಅರ್ಜಿ ಭರ್ತಿ ಮಾಡಲು, ಸೀಟು ಹಂಚಿಕೆಗೆ ಸೈಬರ್ ಸೆಂಟರ್‌ಗಳ ಮೇಲಿನ ಅವಲಂಬನೆ ಇರುವುದಿಲ್ಲ.

ಕೆಇಎ ಚಾಟ್ ಬಾಟ್: ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ನೆರವಿನ ಚಾಟ್ ಬಾಟ್ ವ್ಯವಸ್ಥೆ ಬಳಸಿ ಅಭ್ಯರ್ಥಿಗಳು ಪ್ರಶ್ನೆ, ಅನುಮಾನಗಳಿಗೆ ನೇರವಾಗಿ ಉತ್ತರ ಪಡೆಯಬಹುದು. ಕೆಇಎ ಪ್ರಕಟಿಸುವ ಎಲ್ಲ ಮಾಹಿತಿಯನ್ನೂ ಅಪ್‌ಲೋಡ್ ಮಾಡಲಾಗುತ್ತದೆ. ಪ್ರಾಯೋಗಿಕವಾಗಿ ಆರಂಭಿಸಿದ ನಂತರ 1.35 ಲಕ್ಷ ಅಭ್ಯರ್ಥಿಗಳು ಪ್ರಯೋಜನ ಪಡೆದಿದ್ದಾರೆ. ಸದ್ಯ ಹೊಸ ವ್ಯವಸ್ಥೆ ಇಂಗ್ಲಿಷ್‌ನಲ್ಲಿ ಮಾತ್ರ ಉತ್ತರ ನೀಡುತ್ತಿದೆ. ತಿಂಗಳ ಒಳಗೆ ಕನ್ನಡದಲ್ಲೂ ಮಾಹಿತಿ ಸಿಗಲಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದರು.

ಸಿಇಟಿ ಬಳಿಕ ಕಾಮೆಡ್‌-ಕೆ ಸೀಟು ಹಂಚಿಕೆ

ಕೆಇಎ ಮೊದಲ ಸುತ್ತಿನ ಸೀಟು ಹಂಚಿಕೆ ನಂತರವೇ ಕಾಮೆಡ್‌-ಕೆ ಸೀಟು ಹಂಚಿಕೆ ಪ್ರಕ್ರಿಯೆ ಆರಂಭಿಸಲಾಗುತ್ತದೆ. ಸಲಹೆಯನ್ನು ಕಾಮೆಡ್‌-ಕೆ ಒಪ್ಪಿಕೊಂಡಿದೆ ಎಂದು ಸುಧಾಕರ್ ಹೇಳಿದರು.

ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಭರ್ತಿಯಾಗದೆ ಉಳಿಯುವ ಕೆಲ ಕೋರ್ಸ್‌ಗಳ ಆಡಳಿತ ಮಂಡಳಿ ಕೋಟಾದ ಸಿಇಟಿ ಮೂಲಕ ಭರ್ತಿ ಮಾಡುವ ಚಿಂತನೆ ನಡೆದಿದೆ ಎಂದರು.

ದ್ವಿಪದಿ ಉಲ್ಲೇಖಿಸಿದ ಭಾರ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಏರ್ ಮಾರ್ಷಲ್ ಎ.ಕೆ.ಭಾರ್ತಿ ಅವರು ಸೋಮವಾರ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಸಮುದ್ರ ರಾಜನ ಮೇಲೆ ಶ್ರೀರಾಮನ ತಾಳ್ಮೆ ಮತ್ತು ಕೋಪದ ಕುರಿತು ರಾಮಚರಿತ ಮಾನಸದಲ್ಲಿ ಉಲ್ಲೇಖಿಸಿರುವ ದ್ವಿಪದಿ ಪ್ರಸ್ತಾಪಿಸುವ ಮೂಲಕ ನೆರೆದಿದ್ದ ಪತ್ರಕರ್ತರನ್ನು ಅಚ್ಚರಿಗೊಳಿಸಿದರು.

ಕಾರ್ಯಾಚರಣೆಯ ಮಹಾನಿರ್ದೇಶಕರು ಮೂರು ದಳಗಳ ಕಾರ್ಯಾಚರಣೆ ವಿವರ ನೀಡಿದ ಬಳಿಕ ಪತ್ರಕರ್ತರೊಬ್ಬರು, 'ನೀವು ಸುದ್ದಿಗೋಷ್ಠಿ ಆರಂಭಿಸುವ ಮೊದಲು ಸೇನೆಯ ವಿಡಿಯೊ ದೃಶ್ಯಾವಳಿ ತೋರಿಸಲಾಯಿತು. ಅದರಲ್ಲಿ ರಾಷ್ಟ್ರಕವಿ ರಾಮಧಾರಿ ಸಿಂಗ್ ದಿನಕರ್ ಅವರ ಸಾಲುಗಳನ್ನು ಹಿನ್ನೆಲೆಯಾಗಿ ಬಳಸಿಕೊಳ್ಳಲಾಗಿತ್ತು. ಭಾನುವಾರದ ಪತ್ರಿಕಾಗೋಷ್ಠಿಯ ವಿಡಿಯೊದಲ್ಲಿ ಶಿವ ತಾಂಡವ ಸ್ತೋತ್ರವನ್ನು ಬಳಸಲಾಗಿತ್ತು. ಈ ಮೂಲಕ ಪಾಕಿಸ್ತಾನಕ್ಕೆ ಯಾವ ಸಂದೇಶ ನೀಡಲು ಹೊರಟಿದ್ದೀರಿ' ಎಂದು ಪ್ರಶ್ನಿಸಿದರು.

ಕಾಗದಪತ್ರಗಳಿಲ್ಲದೆಯೇ, ಏರ್ ಮಾರ್ಷಲ್ ಅವರು 'ಲಂಕೆಗೆ ತೆರಳಲು ಸಮುದ್ರರಾಜ ಜಾಗ ಬಿಡುತ್ತಾನೆ ಎಂದು ಕಾದು ಕಾದು ರಾಮನಿಗೆ ಕೋಪ ಬಂದಿತು. ಮೂರು ದಿನ ಆದರೂ ಈ ಜಲ ಮಾತು ಕೇಳುತ್ತಿಲ್ಲ ಎಂದು ಕೋಪಗೊಂಡು ಭಯವಿಲ್ಲದೆ ಸ್ನೇಹವೂ ಇಲ್ಲ ಎನ್ನುತ್ತ ಬಿಲ್ಲನ್ನು ಏರಿಸುತ್ತಾನೆ. ಆಗ ಸಮುದ್ರರಾಜ ಪ್ರತ್ಯಕ್ಷವಾಗಿ ಸಹಾಯಹಸ್ತ ಚಾಚುತ್ತಾನೆ ಎಂಬ ದ್ವಿಪದಿಯನ್ನು ಉಲ್ಲೇಖಿಸಿದರು.

'ಏನು ಸಂದೇಶ ಕೊಡಲಾಗುತ್ತಿದೆ... ಅಂದರೆ, ಬುದ್ಧಿವಂತ ವ್ಯಕ್ತಿಗೆ ಸಣ್ಣ ಸುಳಿವು ಸಾಕು' ಎಂದು ಭಾರ್ತಿ ಹೇಳಿದರು. ಸುದ್ದಿಗೋಷ್ಠಿ ಆರಂಭಕ್ಕೆ ಮುನ್ನ ದೊಡ್ಡ ಪರದೆಯ ಮೇಲೆ ರಾಷ್ಟ್ರಕವಿ ರಾಮಧಾರಿ ಸಿಂಗ್ ದಿನಕರ್ ಅವರು ಕರ್ಣನ ಕುರಿತು ರಚಿಸಿರುವ ರಶ್ಮಿರಥಿ ಖಂಡಕಾವ್ಯದ 'ಕೃಷ್ಣನ ಎಚ್ಚರಿಕೆ' ಪದ್ಯವನ್ನು ಪ್ರದರ್ಶಿಸಲಾಯಿತು.

'ಮನುಷ್ಯನಿಗೆ ಅಜ್ಞಾನ ಆವರಿಸಿದಾಗ ವಿವೇಕ ಸಾಯುತ್ತದೆ. ಹಿತವಚನ ಕೇಳಲ್ಲ. ಮೈತ್ರಿಯ ಮೌಲ್ಯವನ್ನು ಅರಿಯಲಿಲ್ಲ. ಈಗ ಅಂತಿಮ ಸಂಕಲ್ಪ ತಿಳಿಸುತ್ತೇನೆ. ಈಗ ಯಾಚನೆಯಲ್ಲ, ಯುದ್ಧವಾಗುತ್ತದೆ. ಜೀವನ ಅಥವಾ ಮರಣವಾಗುತ್ತದೆ'ಎಂಬುದು ಈ ಪದ್ಯ. ಈ ಹಾಡಿಗೆ ಭಾರತೀಯ ಸೇನೆಯ ಕ್ಷಿಪಣಿಗಳು, ನೌಕಾ ವೇದಿಕೆಗಳು, ಶಸ್ತ್ರಾಸ್ತ್ರ ವ್ಯವಸ್ಥೆ, ವಾಯು ರಕ್ಷಣಾ ವ್ಯವಸ್ಥೆಯ ಚಿತ್ರಗಳೊಂದಿಗೆ ಜೋಡಿಸಲಾಗಿತ್ತು.

ಪಾಕ್ ದಾಳಿ ಯೋಧ ಸಾವು

ಪ್ರಜಾವಾಣಿ ವಾರ್ತೆ

ಗುವಾಹಟಿ: ಜಮ್ಮು ಮತ್ತು ಕಾಶ್ಮೀರದಲ್ಲಿ ಪಾಕಿಸ್ತಾನವು ಶನಿವಾರ ನಡೆಸಿದ ಡ್ರೋನ್ ದಾಳಿಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಬಿಎಸ್‌ಎಫ್ ಯೋಧ ಮಣಿಪುರದ ದೀಪಕ್ ಚಿಂಗಾಖಂ (25) ಅವರು ಭಾನುವಾರ ಹುತಾತ್ಮರಾಗಿದ್ದಾರೆ. ದೀಪಕ್ ಅವರು 2021ರಲ್ಲಿ ಬಿಎಸ್‌ಎಫ್ ಸೇರಿದ್ದರು.

ದೀಪಕ್ ಅವರು ಮೈತೇಯಿ ಸಮುದಾಯಕ್ಕೆ ಸೇರಿದವರಾಗಿದ್ದರು. ಮಂಗಳವಾರ ಮಣಿಪುರದ ವಿಮಾನ ನಿಲ್ದಾಣದಲ್ಲಿ ದೀಪಕ್ ಅವರ ಮೃತ ದೇಹಕ್ಕೆ ಪುಷ್ಪ ನಮನ ಸಲ್ಲಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ರಾಜ್ಯಪಾಲ ಸೇರಿ ರಾಜ್ಯದ ವಿವಿಧ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ದೀಪಕ್ ಕುಟುಂಬಕ್ಕೆ ರಾಜ್ಯಪಾಲರು ₹10 ಲಕ್ಷ ಪರಿಹಾರ ಘೋಷಿಸಿದ್ದಾರೆ.

ಸಮಗ್ರ ರಾಷ್ಟ್ರೀಯ ಮಿಲಿಟರಿ ಸಿದ್ಧಾಂತಕ್ಕೆ ಸುರ್ಜೇವಾಲಾ ಆಗ್ರಹ

ನವದೆಹಲಿ: ಪಾಕಿಸ್ತಾನ–ಚೀನಾ ದೇಶಗಳ ಸವಾಲುಗಳನ್ನು ಎದುರಿಸಲು ಸಮಗ್ರ ರಾಷ್ಟ್ರೀಯ ಮಿಲಿಟರಿ ಸಿದ್ಧಾಂತ ರೂಪಿಸುವಂತೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಅವರು ಸೋಮವಾರ ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ಒತ್ತಾಯಿಸಿದ್ದಾರೆ.




ರಣದೀಪ್ ಸುರ್ಜೇವಾಲಾ

ಪಾಕಿಸ್ತಾನ ವಿರುದ್ಧದ ಸಂಘರ್ಷದಲ್ಲಿ ದೇಶದ ಸಶಸ್ತ್ರ ಪಡೆಗಳು ಮೇಲುಗೈ ಸಾಧಿಸುತ್ತಿದ್ದ ವೇಳೆಯಲ್ಲಿ 'ಆಪರೇಷನ್ ಸಿಂಧೂರ' ಅನ್ನು ದಿಢೀರನೆ ನಿಲ್ಲಿಸಿದ್ದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಈ ನಿರ್ಧಾರದಿಂದ ಸಾಧಿಸಲಾದ ಕಾರ್ಯತಂತ್ರ, ಸೇನೆ ಮತ್ತು ರಾಜಕೀಯ ಗುರಿಗಳ ಕುರಿತು ವಿವರಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

'ಕದನ ವಿರಾಮ ಒಪ್ಪಂದದ ಚೌಕಟ್ಟು ಮತ್ತು ನಿಯಮಗಳು ಯಾವುವು ಎಂಬುದನ್ನು ಸರ್ಕಾರ ಬಹಿರಂಗ ಪಡಿಸಬೇಕು' ಎಂದೂ ಅವರು ಕೇಳಿದ್ದಾರೆ.

'ಪಾಕಿಸ್ತಾನ ಭಯೋತ್ಪಾದಕ ರಾಷ್ಟ್ರ ಎಂಬುದು ಸಂಪೂರ್ಣವಾಗಿ ಸ್ಥಾಪಿತವಾದ ಸತ್ಯ. ಆದರೂ ಮೋದಿ ಸರ್ಕಾರ ಪಾಕಿಸ್ತಾನದ ಜತೆಗಿನ ಬಿಕ್ಕಟ್ಟಿನ ವಿಷಯದಲ್ಲಿ ಅಮೆರಿಕಕ್ಕೆ ಏಕೆ ಅವಕಾಶ ನೀಡುತ್ತಿದೆ' ಎಂದು ಅವರು ಪ್ರಶ್ನಿಸಿದ್ದಾರೆ.

ಯುಪಿಎ ವಿಚಾರಗಳಾದ 'ಮೌಂಟೇನ್ ಸ್ಟ್ರೈಕ್ ಕಾರ್ಪ್ಸ್' ಮತ್ತು 'ಮಾನವರಹಿತ ವೈಮಾನಿಕ ವ್ಯವಸ್ಥೆಗಳು (ಯುಎಎಸ್) ಮತ್ತು ಡ್ರೋನ್ ಕೋರ್' ಕಾರ್ಯರೂಪಕ್ಕೆ ತರುವಂತೆ ಅವರು ಒತ್ತಾಯಿಸಿದ್ದಾರೆ.



ಮೇ 23ಕ್ಕೆ ನರಿವೇಟ ರಿಲೀಸ್

'ಮಿನ್ನಲ್ ಮುರಳಿ' ಖ್ಯಾತಿಯ ನಟ ಟೊವಿನೊ ಥಾಮಸ್ ನಟನೆಯ 'ನರಿವೇಟ' ಸಿನಿಮಾ ಮೇ 23ರಂದು ಬಿಡುಗಡೆಯಾಗಲಿದೆ. ಈ ಸಿನಿಮಾವನ್ನು ಅನುರಾಜ್ ಮನೋಹರ್ ನಿರ್ದೇಶಿಸಿದ್ದು, ಅಬಿನ್ ಜೋಸೆಫ್ ಕಥೆ ಬರೆದಿದ್ದಾರೆ.

ಮೌನ ಮಾತಾದಾಗ...

ಅಭಿಲಾಷ್ ಪಿ.ಎಸ್.

ಕಿರುತೆರೆಯಲ್ಲಿ 'ರಾಮಾಚಾರಿ' ಧಾರಾವಾಹಿ ಮೂಲಕ ಗುರುತಿಸಿಕೊಂಡಿರುವ ಕೊಡಗು ಮೂಲದ ನಟಿ ಮೌನ ಗುಡ್ಡೆಮನೆ ಇದೀಗ ಬೆಳ್ಳಿತೆರೆಗೆ ಹೆಜ್ಜೆ ಇಡುತ್ತಿದ್ದಾರೆ. ಸತತ ಮೂರೂವರೆ ವರ್ಷ 'ಚಾರು' ಪಾತ್ರಧಾರಿಯಾಗಿ ಮನೆಮನ ತಲುಪಿರುವ ಮೌನ ಅವರ ಚೊಚ್ಚಲ ಸಿನಿಮಾ ರಿಲೀಸ್‌ಗೆ ಸಜ್ಜಾಗುತ್ತಿದೆ. ಯೋಗರಾಜ್ ಸಿನಿಮಾಸ್ ಅರ್ಪಿಸುವ, ಕೆ. ರಾಮನಾರಾಯಣ್ ನಿರ್ದೇಶನದ 'ಕುಲದಲ್ಲಿ ಕೀಳ್ಯಾವುದೋ' ಸಿನಿಮಾ ಮೇ 23ರಂದು ಬಿಡುಗಡೆಯಾಗುತ್ತಿದ್ದು, ಈ ಸಂದರ್ಭದಲ್ಲಿ ಮಾತಿಗೆ ಸಿಕ್ಕ ಮೌನ ತಮ್ಮ ಸಿನಿಪಯಣದ ಕನಸುಗಳನ್ನು ತೆರೆದಿಟ್ಟಿದ್ದಾರೆ...

'ಕೊಡಗು ಜಿಲ್ಲೆಯ ಸೋಮವಾರಪೇಟೆಯ ನಾನು ಮಧ್ಯಮ ವರ್ಗದ ಕುಟುಂಬದಿಂದ ಬಂದವಳು. ಕಿರುತೆರೆ ಪ್ರವೇಶಕ್ಕೂ ಮುನ್ನ ಮಾಡೆಲಿಂಗ್ ಮಾಡುತ್ತಿದ್ದೆ. ಮಂಗಳೂರಿನಲ್ಲಿ ಶಿಕ್ಷಣ ಪಡೆಯುತ್ತಿರುವ ಸಂದರ್ಭದಲ್ಲೇ ಮಾಡೆಲಿಂಗ್ ಲೋಕ ಪರಿಚಯವಾಯಿತು. ಈ ಸಂದರ್ಭದಲ್ಲೇ 'ರಾಮಾಚಾರಿ' ಅವಕಾಶ ದೊರೆಯಿತು. ಮನೆಯಲ್ಲಿ ಇದಕ್ಕೆ ಪ್ರೋತ್ಸಾಹ ದೊರೆಯಿತು. ಆದರೆ ನಾನು ಆಸೆ ಪಟ್ಟು ಈ ಕ್ಷೇತ್ರಕ್ಕೆ ಬಂದವಳಲ್ಲ. ನನಗೆ ಸೇನೆಗೆ ಸೇರುವ ಆಸೆ ಇತ್ತು. ಕುಟುಂಬದಲ್ಲಿ ಹಲವರು ಸೇನೆಯಲ್ಲಿದ್ದಾರೆ. ಮನೆಯಲ್ಲಿ ಇದಕ್ಕೆ ಬೆಂಬಲ ಸಿಗಲಿಲ್ಲ. ಕೊನೆಗೆ ಧಾರಾವಾಹಿಯತ್ತ ಹೆಜ್ಜೆ ಇಟ್ಟೆ' ಎಂದು ಬಣ್ಣದ ಲೋಕಕ್ಕೆ ಕಾಲಿಟ್ಟ ಸಂದರ್ಭದಿಂದ ಮಾತು ಆರಂಭಿಸಿದರು ಮೌನ.



ಮೌನ

'ಧಾರಾವಾಹಿಯಲ್ಲಿನ ನನ್ನ ನಟನೆಯನ್ನು ಗಮನಿಸಿಯೇ 'ಕುಲದಲ್ಲಿ...' ಸಿನಿಮಾದ ಆಫರ್ ಬಂದಿತು. ಈ ಸಿನಿಮಾದ ನಿರ್ಮಾಪಕರೂ ಕೊಡಗಿನವರು. ತಮ್ಮದೇ ಊರಿನ ಹುಡುಗಿಗೆ ಅವಕಾಶ ಕೊಡಬೇಕು ಎಂದು ಅವರು ನಿರ್ಧರಿಸಿದ್ದರು 'ರಾಮಾಚಾರಿ' ಸಂದರ್ಭದಲ್ಲೇ ಹಲವು ಸಿನಿಮಾಗಳ ಆಫರ್‌ಗಳು ಬಂದಿದ್ದವು. ಆದರೆ ಧಾರಾವಾಹಿಯ ಒಪ್ಪಂದವಿದ್ದ ಕಾರಣ ಸಿನಿಮಾದತ್ತ ಗಮನಹರಿಸಿರಲಿಲ್ಲ. ಯೋಗರಾಜ್ ಭಟ್ ಬ್ಯಾನರ್‌ನಡಿಯ ಸಿನಿಮಾ ಎಂದಾಗ ಬಿಡಲು ಮನಸಾಗಲಿಲ್ಲ. ಸಿನಿಮಾದಲ್ಲಿ ದೊರೆಯುವ ಅನುಭವ ಹಾಗೂ ಕಥೆಯ ಕಾರಣಕ್ಕೆ ಈ ಸಿನಿಮಾ ಒಪ್ಪಿಕೊಂಡೆ' ಎಂದರು.

'ಸಿನಿಮಾ ಎಂದರೆ ಬೇರೆಯೇ ಲೋಕ. ಧಾರಾವಾಹಿ ನಾಲ್ಕು ಗೋಡೆಯ ನಡುವೆ ನಡೆಯುವ ಕಥೆ. ಸಿನಿಮಾದಲ್ಲಿ ಪ್ರತಿಯೊಂದು ಪಾತ್ರದ ಮೇಲೆ ಕಥೆಯಿದೆ. ನನ್ನದು ಹಳ್ಳಿಯ ಮುಗ್ಧ ಮುದ್ದು ಹುಡುಗಿಯ ಪಾತ್ರ. ಇದು ಗ್ಲಾಮರಸ್ ಪಾತ್ರವಲ್ಲ. ತಾಂತ್ರಿಕವಾಗಿ ಈ ಲೋಕ ಹೊಸ ಅನುಭವವನ್ನೇ ನೀಡಿತು. ನಮ್ಮ ಊರಿನ ಪುಷ್ಪಗಿರಿ ಬೆಟ್ಟದಲ್ಲೇ ಸಿನಿಮಾದ ಹಾಡಿನ ಚಿತ್ರೀಕರಣ ಮಾಡಿದೆವು. 'ರಾಮಾಚಾರಿ' ಧಾರಾವಾಹಿ ಮುಂದುವರಿಯಲಿದೆ. ಈ ಸಿನಿಮಾ ಬಿಡುಗಡೆ ಬಳಿಕ ಒಳ್ಳೆಯ ಅವಕಾಶಗಳು ದೊರಕಿದರೆ ಸಿನಿಮಾದಲ್ಲೂ ಮುಂದುವರಿಯುತ್ತೇನೆ. ಧಾರಾವಾಹಿ ನಂಟೂ ಮುಂದುವರಿಯಲಿದೆ' ಎಂದು ಮಾತಿಗೆ ವಿರಾಮವಿತ್ತರು.

'ದಿ' ಚಿತ್ರದ ಟ್ರೇಲರ್ ಬಿಡುಗಡೆ



ದಿಶಾ ರಮೇಶ್

ವಿನಯ್ ವಾಸುದೇವ್ ನಾಯಕನಾಗಿ ನಟಿಸಿ, ನಿರ್ದೇಶಿಸಿರುವ 'ದಿ' ಸಿನಿಮಾ ಮೇ 16ರಂದು ತೆರೆಕಾಣುತ್ತಿದ್ದು, ಚಿತ್ರದ ಟ್ರೇಲರ್ ಅನ್ನು ಇತ್ತೀಚೆಗೆ ನಟ ಮಂಡ್ಯ ರಮೇಶ್ ಬಿಡುಗಡೆಗೊಳಿಸಿದರು.


ವಿ.ಡಿ.ಕೆ ಸಿನಿಮಾಸ್ ಲಾಂಛನದಲ್ಲಿ ಈ ಸಿನಿಮಾ ನಿರ್ಮಾಣವಾಗಿದೆ. 'ಈ ಚಿತ್ರಕ್ಕೆ 'ದಿ' ಎಂಬ ಹೆಸರು ಇಡಲು ಹಲವು ಕಾರಣಗಳಿವೆ. ಚಿತ್ರದಲ್ಲಿ ನಾಯಕನ ಹೆಸರು 'ದೀಪು'. ನಾಯಕಿಯಾಗಿ ನಟಿಸಿರುವ ದಿಶಾ ರಮೇಶ್ ಹೆಸರಿನಲ್ಲೂ ಈ ಅಕ್ಷರವಿದೆ. ದೇವರಾಯನ ದುರ್ಗ, ದೇವರಮನೆ ಮುಂತಾದ ಕಡೆ ಚಿತ್ರದ ಚಿತ್ರೀಕರಣ ನಡೆದಿದೆ. ಇವುಗಳಲ್ಲೂ 'ದ' ಅಕ್ಷರವಿದೆ. ಜೊತೆಗೆ ನಾನು ಸುದೀಪ್ ಅವರ ಅಭಿಮಾನಿ. ಹೀಗಾಗಿ ಈ ಶೀರ್ಷಿಕೆ. ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದೇನೆ. ಜೊತೆಗೆ ನಾಯಕನಾಗೂ ನಟಿಸಿದ್ದೇನೆ' ಎಂದರು ವಿನಯ್ ವಾಸುದೇವ್.

'ಚಿತ್ರದ ಕಥೆ ಬಹಳ ಕುತೂಹಲಕಾರಿಯಾಗಿದೆ. ಟ್ರೇಲರ್‌ನಲ್ಲಿ ಇನ್ನೂ ಚೆನ್ನಾಗಿ ಕಥೆಯು ಮೂಡಿಬಂದಿದೆ' ಎಂದರು ದಿಶಾ ರಮೇಶ್. ಹರಿಣಿ ಶ್ರೀಕಾಂತ್, ನಾಗೇಂದ್ರ ಅರಸ್, ಡಾಲಾ ಶರಣ್, ಕಲಾರತಿ ಮಹಾದೇವ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಅಲೆನ್ ಭರತ್ ಛಾಯಾ ಚಿತ್ರಗ್ರಹಣ, ಸಿದ್ಧಾರ್ಥ್ ಆರ್. ನಾಯಕ್ ಸಂಕಲನ, ಯು.ಎಂ.ಸ್ಟೀವನ್ ಸತೀಶ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ವಿಜಯ್ ಫಿಲಂಸ್ ಚಿತ್ರವನ್ನು ಹಂಚಿಕೆ ಮಾಡುತ್ತಿದೆ.



ವಿನಯ್ ವಾಸುದೇವ್

ಮೇ 23ಕ್ಕೆ 'ಸೈನೈಡ್' ರೀರಿಲೀಸ್



ಎ.ಎಂ.ಆರ್. ರಮೇಶ್

ಸುಮಾರು 20 ವರ್ಷಗಳ ಹಿಂದೆ ತೆರೆಕಂಡಿದ್ದ ಎ.ಎಂ.ಆರ್. ರಮೇಶ್ ನಿರ್ದೇಶನದ 'ಸೈನೈಡ್' ಸಿನಿಮಾ ಮೇ 23ರಂದು ಮರುಬಿಡುಗಡೆಯಾಗಲಿದೆ.

ಅಕ್ಷಯ್ ಕ್ರಿಯೇಷನ್ಸ್‌ನಡಿ ಕೆಂಚಪ್ಪ ಗೌಡ ಹಾಗೂ ಎಸ್. ಇಂದುಮತಿ ನಿರ್ಮಿಸಿದ್ದ ಈ ಚಿತ್ರದಲ್ಲಿ ತಾರಾ, ರಂಗಾಯಣ ರಘು, ರವಿ ಕಾಳೆ, ಮಾಳವಿಕಾ, ಅವಿನಾಶ್, ಉಷಾ ಭಂಡಾರಿ ಮುಂತಾದವರು ಅಭಿನಯಿಸಿದ್ದರು. 2006ರಲ್ಲಿ ತೆರೆಕಂಡಿದ್ದ ಈ ಸಿನಿಮಾ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಅವರ ಹತ್ಯೆಯ ಬಳಿಕ ನಡೆದ ಘಟನೆಯನ್ನು ಆಧರಿಸಿತ್ತು.

'ಸೂಕ್ಷ್ಮವಾದ ವಿಷಯದ ಕುರಿತು ಸಿನಿಮಾ ಮಾಡುವಾಗ ಆತಂಕವಿತ್ತು. ಆದರೆ ಬಿಡುಗಡೆ ಬಳಿಕ ಜನರು ಸಿನಿಮಾವನ್ನು ಸ್ವೀಕರಿಸಿದ ರೀತಿ ಕಂಡು ಆತಂಕ ದೂರವಾಯಿತು. ಈ ಚಿತ್ರವನ್ನು ಈಗಿನ ಕೆಲವು ತಂತ್ರಜ್ಞಾನಗಳನ್ನು ಅಳವಡಿಸಿ ಜೊತೆಗೆ ಹತ್ತು ನಿಮಿಷ ಸಿನಿಮಾ ಅವಧಿಯನ್ನು ಹೆಚ್ಚಿಸಿ ಮರು ಬಿಡುಗಡೆ ಮಾಡುತ್ತಿದ್ದೇವೆ. ತಮಿಳು ಆವೃತ್ತಿಗಾಗಿ ಹೆಚ್ಚುವರಿಯಾಗಿ ಚಿತ್ರೀಕರಣ ಮಾಡಿದ್ದ ದೃಶ್ಯಗಳನ್ನು ಕನ್ನಡಕ್ಕೆ ಸೇರಿಸಲಾಗಿದೆ. 'ಸೈನೈಡ್' ಚಿತ್ರದ ಪ್ರೀಕ್ವೆಲ್ ಬರಲಿದ್ದು, ಸ್ಕ್ರಿಪ್ಟ್ ಸಿದ್ಧವಾಗಿದೆ' ಎಂದಿದ್ದಾರೆ ಎ.ಎಂ.ಆರ್. ರಮೇಶ್.

'ನಾನು ಚಿತ್ರದಲ್ಲಿ 'ಮೃದುಲ' ಎಂಬ ಮುಗ್ಧ ಹೆಣ್ಣಿನ ಪಾತ್ರ ನಿರ್ವಹಿಸಿದ್ದೆ. ಇಪ್ಪತ್ತು ವರ್ಷಗಳ ಹಿಂದೆ ಈ ಚಿತ್ರದ ಚಿತ್ರೀಕರಣ ನಡೆಯುತ್ತಿದ್ದಾಗ ನಾನು 'ಮೃದುಲ' ಅವರನ್ನು ಭೇಟಿ ಮಾಡಲು ಪ್ರಯತ್ನಪಟ್ಟಿದ್ದೆ. ಆದರೆ ಆಗಿರಲಿಲ್ಲ. ಅವರ ಸ್ವಭಾವವನ್ನು ಅವರ ಪತಿಯಿಂದ ತಿಳಿದುಕೊಂಡು ನಟಿಸಿದ್ದೆ. ಈ ಪಾತ್ರಕ್ಕೆ ರಾಜ್ಯ ಪ್ರಶಸ್ತಿ ಬಂತು. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಚಿತ್ರವನ್ನು ವೀಕ್ಷಿಸುತ್ತೇನೆ ಎಂದಿದ್ದಾರೆ' ಎಂದರು ನಟಿ ತಾರಾ.

ಮಿಲಿಟರಿ ಕಾರ್ಗೊ ವಿಮಾನದಲ್ಲಿ ಪಾಕ್‌ಗೆ ಶಸ್ತ್ರಾಸ್ತ್ರ ಪೂರೈಕೆ

ವರದಿ ಅಲ್ಲಗಳೆದ ಚೀನಾ

ಬೀಜಿಂಗ್ (ಪಿಟಿಐ): ತನ್ನ ಅತಿದೊಡ್ಡ ಮಿಲಿಟರಿ ಸರಕು ಸಾಗಣೆ ವಿಮಾನದಲ್ಲಿ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಸಾಗಿಸಲಾಗಿದೆ ಎಂಬ ವರದಿಯನ್ನು ಚೀನಾ ಸೋಮವಾರ ಅಲ್ಲಗಳೆದಿದೆ. ಅಂತಹ ವದಂತಿ ಹರಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿಯೂ ಎಚ್ಚರಿಸಿದೆ.

ತನ್ನ 'ಶಿಯಾನ್ ವೈ-20' ಮಿಲಿಟರಿ ಸರಕು ಸಾಗಣೆ ವಿಮಾನದಲ್ಲಿ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸಲಾಗಿದೆ ಎಂಬ ವರದಿಯನ್ನು ಪೀಪಲ್ಸ್ ಲಿಬರೇಶನ್ ಆರ್ಮಿ ಏರ್ ಫೋರ್ಸ್ (ಪಿಎಲ್‌ಎಎಫ್) ನಿರಾಕರಿಸಿದೆ.

'ವೈ-20 ವಿಮಾನವು ಪಾಕಿಸ್ತಾನಕ್ಕೆ ರಕ್ಷಣಾ ಸಾಮಗ್ರಿಗಳನ್ನು ಸಾಗಿಸಿದೆ' ಎಂಬ ಸುದ್ದಿಗಳು ವೆಬ್‌ಸೈಟ್‌ಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹರಿದಾಡಿವೆ. ಅಂತಹ ಸುದ್ದಿಗಳು ಸುಳ್ಳು ಎಂದು ವಾಯುಪಡೆಯು ಹೇಳಿಕೆಯಲ್ಲಿ ತಿಳಿಸಿದೆ' ಎಂದು ಚೀನಾ ರಕ್ಷಣಾ ಸಚಿವಾಲಯ ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಹೇಳಿದೆ.

ವೆಬ್‌ಸೈಟ್‌ಗಳಲ್ಲಿ ಹರಿದಾಡಿರುವ ಸುಳ್ಳು ಸುದ್ದಿಗಳ ಸ್ಕ್ರೀನ್‌ಶಾಟ್‌ಗಳನ್ನೂ ಪೋಸ್ಟ್ ಮಾಡಿದೆ. ಪ್ರತಿಯೊಂದು ಪೋಸ್ಟ್ ಮೇಲೂ ಕೆಂಪು ಅಕ್ಷರದಲ್ಲಿ 'ಇದು ಸುಳ್ಳು ಸುದ್ದಿ' ಎಂದು ಬರೆಯಲಾಗಿದೆ.

'ಇಂಟರ್‌ನೆಟ್, ಕಾನೂನಿಗಿಂತ ಮೇಲಲ್ಲ! ಮಿಲಿಟರಿಗೆ ಸಂಬಂಧಿಸಿದ ವದಂತಿಗಳನ್ನು ಹುಟ್ಟುಹಾಕುವವರು ಮತ್ತು ಹಬ್ಬಿಸುವವರನ್ನು ಕಾನೂನು ಬದ್ಧವಾಗಿ ಹೊಣೆಗಾರರನ್ನಾಗಿ ಮಾಡಲಾಗುತ್ತದೆ' ಎಂದು ಎಚ್ಚರಿಸಿದೆ.

ಪಾಕಿಸ್ತಾನದೊಂದಿಗೆ ನಿಕಟ ಸಂಬಂಧ ಹೊಂದಿರುವ ಪೀಪಲ್ಸ್ ಲಿಬರೇಷನ್ ಆರ್ಮಿ (ಚೀನಾದ ಸೇನೆ–ಪಿಎಲ್‌ಎ), ಶಸ್ತ್ರಾಸ್ತ್ರ ಪೂರೈಕೆ ಸುದ್ದಿ ನಿರಾಕರಿಸಿರುವುದನ್ನು ಮಹತ್ವದ್ದಾಗಿ ಪರಿಗಣಿಸಲಾಗಿದೆ. ಭಾರತ ಹಾಗೂ ಪಾಕಿಸ್ತಾನ ನಡುವೆ ಕದನ ವಿರಾಮ ಒಪ್ಪಂದ ಏರ್ಪಟ್ಟಿರುವ ಮತ್ತು ಸೇನೆಗೆ ಮತ್ತೆ ಬಲ ತುಂಬಲು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳ ಅವಶ್ಯಕತೆಯಿರುವ ಸಮಯದಲ್ಲೇ ಈ ಬೆಳವಣಿಗೆ ನಡೆದಿದೆ.

ಪಾಕಿಸ್ತಾನವು ಚೀನಾದ ಶಸ್ತ್ರಾಸ್ತ್ರಗಳನ್ನು ದೊಡ್ಡ ಪ್ರಮಾಣದಲ್ಲಿ ಬಳಕೆ ಮಾಡುವ ಕಾರಣ, ಚೀನಾದ ಸರ್ಕಾರಿ ಸ್ವಾಮ್ಯದ ಮಾಧ್ಯಮಗಳು ಭಾರತ–ಪಾಕಿಸ್ತಾನ ನಡುವಿನ ಮಿಲಿಟರಿ ಸಂಘರ್ಷವನ್ನು ವರದಿ ಮಾಡಲು ಹೆಚ್ಚಿನ ಆಸಕ್ತಿ ತೋರಿಸಿವೆ. ಭಾರತದ ಯುದ್ಧ ವಿಮಾನಗಳನ್ನು ಹೊಡೆದುರುಳಿಸಲಾಗಿದೆ ಎಂಬ ಪಾಕ್ ಹೇಳಿಕೆಯ ಸತ್ಯಾಸತ್ಯತೆಯನ್ನು ಪರಿಶೀಲಿಸದೆಯೇ ಚೀನಾ ಮಾಧ್ಯಮಗಳು ಅದೇ ರೀತಿ ಪ್ರಸಾರ ಮಾಡಿದ್ದವು.

ಚೀನಾ ಅತಿದೊಡ್ಡ ಶಸ್ತ್ರಾಸ್ತ್ರ ಪೂರೈಕೆದಾರ

ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ (ಎಸ್‌ಐಪಿಆರ್‌ಐ) ಈಚೆಗಿನ ವರದಿಯ ಪ್ರಕಾರ, ಚೀನಾವು ಪಾಕಿಸ್ತಾನಕ್ಕೆ ಅತಿದೊಡ್ಡ ಶಸ್ತ್ರಾಸ್ತ್ರ ಪೂರೈಕೆದಾರ ರಾಷ್ಟ್ರವಾಗಿ ಹೊರಹೊಮ್ಮಿದೆ. 2020ರಿಂದ 2024ರವರೆಗೆ ಪಾಕಿಸ್ತಾನದ ಶಸ್ತ್ರಾಸ್ತ್ರ ಖರೀದಿಯಲ್ಲಿ ಶೇ81 ರಷ್ಟು ಪಾಲನ್ನು ಚೀನಾ ಹೊಂದಿದೆ. ಈಚೆಗೆ ಖರೀದಿಸಿರುವ ಜೆಟ್ ಫೈಟರ್‌ಗಳು, ರೇಡಾರ್‌ಗಳು, ಯುದ್ಧನೌಕೆಗಳು, ಜಲಾಂತರ್ಗಾಮಿ ನೌಕೆಗಳು ಮತ್ತು ಕ್ಷಿಪಣಿಗಳೂ ಇದರಲ್ಲಿ ಸೇರಿವೆ.



ಶಿಯಾನ್ ವೈ–20 ಮಿಲಿಟರಿ ಸರಕು ಸಾಗಣೆ ವಿಮಾನ

ಪಾಕಿಸ್ತಾನ ವಾಯುಪಡೆಯ ಪ್ರಮುಖ ಶಕ್ತಿಯಾಗಿರುವ ಜೆ–17 ಯುದ್ಧ ವಿಮಾನಗಳನ್ನು ಎರಡೂ ದೇಶಗಳು ಜಂಟಿಯಾಗಿ ತಯಾರಿಸುತ್ತವೆ.

'ಭಾರಿ ಅಣ್ವಸ್ತ್ರ ಯುದ್ಧ ನಿಲ್ಲಿಸಿದೆವು'

- ಭಾರತ–ಪಾಕಿಸ್ತಾನದ ಮಧ್ಯೆ ಭಾರಿ ಅಣ್ವಸ್ತ್ರ ಯುದ್ಧ ನಡೆಯುವುದರಲ್ಲಿತ್ತು. ನಾವು ಇದನ್ನು ನಿಲ್ಲಿಸಿದ್ದೇವೆ. ನನ್ನ ಪ್ರಕಾರ ಇದು ಶಾಶ್ವತವಾದ ಕದನ ವಿರಾಮವಾಗಿರಲಿದೆ. ಒಂದು ವೇಳೆ ಅಣ್ವಸ್ತ್ರ ಯುದ್ಧ ನಡೆದಿದ್ದರೆ ಲಕ್ಷಾಂತರ ಮಂದಿ ಸಾಯುತ್ತಿದ್ದರು. ಯುದ್ಧ ನಿಲ್ಲಿಸಿದ್ದಕ್ಕಾಗಿ ನನಗೆ ಹೆಮ್ಮೆ ಇದೆ
- ನೋಡಿ ಈ ಸಂಘರ್ಷವನ್ನು ಇಲ್ಲಿಗೇ ನಿಲ್ಲಿಸಿ ಬಿಡೋಣ. ನೀವು ಇದನ್ನು ನಿಲ್ಲಿಸಿದರೆ ನಾವು ನಿಮ್ಮೊಂದಿಗೆ ಬಹಳಷ್ಟು ವ್ಯಾಪಾರ ಮಾಡುತ್ತೇವೆ. ಇಲ್ಲವಾದರೆ ವ್ಯಾಪಾರವನ್ನೇ ಮಾಡುವುದಿಲ್ಲ.



ಬಹುಶಃ ವ್ಯಾಪಾರವನ್ನು ನನ್ನಷ್ಟು ಚೆನ್ನಾಗಿ ಬಳಸಿಕೊಂಡವರು ಬೇರೆ ಯಾರೂ ಇಲ್ಲ ಅನ್ನಿಸುತ್ತದೆ. ಎರಡೂ ದೇಶಗಳು ಬಹಳಷ್ಟು ಕಾರಣಗಳಿಗೆ ಸಂಘರ್ಷ ಅಂತ್ಯಗೊಳಿಸಿದರು. ಆದರೆ, ವ್ಯಾಪಾರದ ಕಾರಣವೇ ಇಬ್ಬರಿಗೂ ಮುಖ್ಯವಾಗಿತ್ತು

ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

('ಕಳೆದ ಕೆಲವು ವಾರಗಳಲ್ಲಿ ನಡೆದ ಐತಿಹಾಸಿಕ ಘಟನೆಗಳ' ಕುರಿತು ಶ್ವೇತ ಭವನದಲ್ಲಿ ಮಾಹಿತಿ ನೀಡುವ ವೇಳೆ ಆಡಿದ ಮಾತು)

'ಒಂದು ವಿಮಾನಕ್ಕೆ ಹಾನಿ'

ಇಸ್ಲಾಮಾಬಾದ್ (ಪಿಟಿಐ): ಭಾರತದ ಜತೆಗಿನ ಸೇನಾ ಸಂಘರ್ಷದಲ್ಲಿ ತನ್ನ ಒಂದು ಯುದ್ಧ ವಿಮಾನಕ್ಕೆ 'ಸಣ್ಣ ಹಾನಿ' ಉಂಟಾಗಿದೆ ಎಂಬುದನ್ನು ಪಾಕಿಸ್ತಾನ ಸೇನೆ ಭಾನುವಾರ ರಾತ್ರಿ ಒಪ್ಪಿಕೊಂಡಿದೆ. ಆದರೆ ಯುದ್ಧ ವಿಮಾನದ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡಲಿಲ್ಲ.

ಪಾಕಿಸ್ತಾನ ಸೇನೆಯ ವಕ್ತಾರ ಲೆಫ್ಟಿನೆಂಟ್ ಜನರಲ್ ಅಹ್ಮದ್ ಷರೀಫ್ ಚೌಧರಿ ಅವರು ವಾಯುಪಡೆ ಮತ್ತು ನೌಕಾಪಡೆಯ ಅಧಿಕಾರಿಗಳೊಂದಿಗೆ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿಯನ್ನು ನೀಡಿದರು. ಆಪರೇಷನ್ 'ಬುನ್ಯಾನ್ ಉಲ್ ಮರ್ಸೂಸ್' ಬಗ್ಗೆ ತಿಳಿಸಲು ಪತ್ರಿಕಾಗೋಷ್ಠಿ ನಡೆಸಲಾಗಿದೆ ಎಂದು ಅವರು ಹೇಳಿದರು.

ಭಾರತೀಯ ಸೇನೆ, ಪಂಜಾಬ್ ಪ್ರಾಂತ್ಯದ ಗುಜರಾತ್‌ನಲ್ಲಿ ಶನಿವಾರ ನಡೆಸಿದ ಡ್ರೋನ್ ಮತ್ತು ಗುಂಡಿನ ದಾಳಿಯಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ. ಆರು ಜನರು ಗಾಯಗೊಂಡಿದ್ದಾರೆ

ಪಾಕಿಸ್ತಾನದ ಅಧಿಕಾರಿಗಳು

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಚೌಧರಿ, 'ಭಾರತದ ಯಾವುದೇ ಪೈಲಟ್ ಪಾಕಿಸ್ತಾನ ಸೇನೆಯ ವಶದಲ್ಲಿಲ್ಲ' ಎಂದು ಸ್ಪಷ್ಟಪಡಿಸಿದರು. ಸಾಮಾಜಿಕ ಮಾಧ್ಯಮಗಳಲ್ಲಿ ಅಂತಹ ಸುಳ್ಳು ಸುದ್ದಿ ಹಬ್ಬಿಸಲಾಗಿದೆ ಎಂದು ಹೇಳಿದರು.

ಭಾರತದ ದಾಳಿಗೆ ಪಾಕಿಸ್ತಾನ ಸೇನೆ ನೀಡಿದ್ದ ಪ್ರತ್ಯುತ್ತರವು, 'ನಿಖರ, ಪರಿಸ್ಥಿತಿಗೆ ತಕ್ಕಂತೆ ಮತ್ತು ಸಂಯಮದಿಂದ ಕೂಡಿದ್ದಾಗಿತ್ತು' ಎಂದಿದ್ದಾರೆ.

ಜೆಎಜಿ ಹುದ್ದೆ: ಮಹಿಳೆ ನೇಮಕ ಕಷ್ಟವೇಕೆ–'ಸುಪ್ರೀಂ' ಪ್ರಶ್ನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಾಯುಪಡೆಯಲ್ಲಿ ರಫೇಲ್ ಯುದ್ಧ ವಿಮಾನ ಚಲಾಯಿಸಲು ಮಹಿಳೆಗೆ ಅನುಮತಿ ಇದ್ದ ಮೇಲೆ, ಸೇನೆಯ 'ಜಡ್ಜ್ ಅಡ್ವೋಕೇಟ್ ಜನರಲ್' (ಜೆಎಜಿ) ಹುದ್ದೆಗೆ ಅವರನ್ನು ನೇಮಿಸಲು ಏಕೆ ಕಷ್ಟವಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಆಶ್ಚರ್ಯ ವ್ಯಕ್ತಪಡಿಸಿದೆ.

ಈ ಹುದ್ದೆಗಳ ನೇಮಕಾತಿಗೆ ಯಾವುದೇ ಲಿಂಗ ತಾರತಮ್ಯವಿಲ್ಲ ಎಂದು ಹೇಳಿಕೊಂಡಿದ್ದರೂ, ಮಹಿಳೆಯರಿಗೆ ಕಡಿಮೆ ಹುದ್ದೆಗಳನ್ನು ಮೀಸಲಿಟ್ಟಿರುವುದು ಏಕೆ ಎಂದು ನ್ಯಾಯಮೂರ್ತಿ ದೀಪಂಕರ್ ದತ್ತ ನೇತೃತ್ವದ ಪೀಠವು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿತು.



ಜೆಎಜಿ ಹುದ್ದೆಗಳ (ಭಾರತೀಯ ಸೇನೆ) ನೇಮಕಾತಿಗೆ ಸಂಬಂಧಿಸಿದಂತೆ ಪುರುಷರು ಮತ್ತು ಮಹಿಳೆಯರಿಗೆ ಖಾಲಿ ಹುದ್ದೆಗಳ ಅಸಮಾನ ಹಂಚಿಕೆಯನ್ನು ಪ್ರಶ್ನಿಸಿ ಇಬ್ಬರು ಮಹಿಳೆಯರು ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ಪೀಠ ತೀರ್ಪನ್ನು ಕಾಯ್ದಿರಿಸಿತು.

ಅರ್ಷನೂರ್ ಕೌರ್ ಮತ್ತು ಇನ್ನೊಬ್ಬರು ಸಲ್ಲಿಸಿರುವ ಅರ್ಜಿಯಲ್ಲಿ, 'ನಾವು 4 ಮತ್ತು 5ನೇ ರ್‍ಯಾಂಕ್‌ನಲ್ಲಿನ ಹುದ್ದೆ ಮತ್ತು ಪುರುಷರಿಗಿಂತ ಹೆಚ್ಚಿನ ಮೆರಿಟ್ ಹೊಂದಿದ್ದರೂ ಈ ಹುದ್ದೆಗಳಿಗೆ ಆಯ್ಕೆಯಾಗಿಲ್ಲ. ಮಹಿಳೆಯರಿಗೆ ಈ ಹುದ್ದೆಗಳು ಕಡಿಮೆ ಸಂಖ್ಯೆಯಲ್ಲಿ ಇರುವ ಕಾರಣ ನಮ್ಮ ಆಯ್ಕೆಯಾಗಿಲ್ಲ' ಎಂದು ವಿವರಿಸಿದ್ದಾರೆ.

ಭಾರತ–ಪಾಕಿಸ್ತಾನ ಸಂಘರ್ಷ: ಅಮೆರಿಕ ಬ್ರಿಟನ್ ಚರ್ಚೆ

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷದ ಕುರಿತು ಅಮೆರಿಕವು ಬ್ರಿಟನ್ ಜತೆ ಚರ್ಚೆ ನಡೆಸಿದ್ದು, ನೆರೆಹೊರೆಯ ಎರಡೂ ರಾಷ್ಟ್ರಗಳು 'ಕದನ ವಿರಾಮ' ಒಪ್ಪಂದವನ್ನು ಕಾಯ್ದುಕೊಳ್ಳಬೇಕಾದ ಅಗತ್ಯವನ್ನು ಒತ್ತಿ ಹೇಳಿದೆ.

ಭಾರತ–ಪಾಕ್ ನಡುವಿನ ಈಗಿನ ಪರಿಸ್ಥಿತಿಯ ಬಗ್ಗೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ಡೇವಿಡ್ ಲ್ಯಾಮಿ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ವಕ್ತಾರೆ ಟ್ಯಾಮಿ ಬ್ರೂಸ್ ಭಾನುವಾರ ತಿಳಿಸಿದ್ದಾರೆ.


ವಿದೇಶಾಂಗ ಕಾರ್ಯದರ್ಶಿ ಬೆಂಬಲಕ್ಕೆ ನಿವೃತ್ತ ರಾಯಭಾರಿಗಳು

ಮಿಸ್ರಿ ವಿರುದ್ಧದ ಟ್ರೋಲ್‌ಗೆ ಕಿಡಿ

ನವದೆಹಲಿ (ಪಿಟಿಐ): ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ 'ಟ್ರೋಲ್' ಮಾಡಿದ್ದಕ್ಕೆ ನಿವೃತ್ತ ರಾಯಭಾರಿಗಳು ಮತ್ತು ರಾಜಕಾರಣಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸೇನಾ ಸಂಘರ್ಷ ಶಮನಕ್ಕೆ ಭಾರತ ಮತ್ತು ಪಾಕಿಸ್ತಾನ ಸಮ್ಮತಿಸಿದ ಕುರಿತು ಮಾಹಿತಿ ನೀಡಿದ್ದ ಮಿಸ್ರಿ ಅವರನ್ನು ಮತ್ತು ಅವರ ಕುಟುಂಬದವರನ್ನು ಗುರಿಯಾಗಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಗೇಲಿ ಮಾಡಿ, ಅವಮಾನಿಸುವ ಸಂದೇಶಗಳು ಹರಿದಾಡಿದ್ದವು.

ಮಾಜಿ ವಿದೇಶಾಂಗ ಕಾರ್ಯದರ್ಶಿ ನಿರುಪಮಾ ಮೆನನ್ ರಾವ್, ರಾಜಕಾರಣಿಗಳಾದ ಅಖಿಲೇಶ್ ಯಾದವ್ ಮತ್ತು ಅಸಾದುದ್ದೀನ್ ಓವೈಸಿ ಅವರು ಮಿಸ್ರಿ ಅವರನ್ನು ಬೆಂಬಲಿಸಿ ಪೋಸ್ಟ್‌ಗಳನ್ನು ಮಾಡಿದ್ದಾರೆ.



ವಿಕ್ರಮ್ ಮಿಸ್ರಿ

'ದೇಶಕ್ಕಾಗಿ ಹಗಲು–ರಾತ್ರಿ ದುಡಿಯುತ್ತಿರುವ ಪ್ರಾಮಾಣಿಕ ಅಧಿಕಾರಿಗಳನ್ನು ನೈತಿಕವಾಗಿ ಕುಗ್ಗಿಸುವಂತೆ ಹೀಗಳಿಯುವುದು ಸರಿಯಲ್ಲ. ಸರ್ಕಾರ ತೆಗೆದುಕೊಳ್ಳುವ ನಿರ್ಧಾರಗಳಿಗೆ ಅಧಿಕಾರಿಗಳನ್ನು ವೈಯಕ್ತಿಕವಾಗಿ ಮತ್ತು ಅವರ ಕುಟುಂಬದ ಸದಸ್ಯರನ್ನು ನಿಂದಿಸುವುದು, ಟೀಕಿಸುವುದು ಸಲ್ಲ. ಅಧಿಕಾರಿಯ ಗೌರವವನ್ನು ರಕ್ಷಿಸುವ ಜವಾಬ್ದಾರಿ ಬಿಜೆಪಿ ಸರ್ಕಾರ ಅಥವಾ ಅದರ ಸಚಿವರದ್ದಾಗಿದೆ. ಅಲ್ಲದೆ ನಿಂದಿಸಿ ಪೋಸ್ಟ್‌ಗಳನ್ನು ಮಾಡಿದವರ ವಿರುದ್ಧ ಕಠಿಣ ಕ್ರಮವನ್ನೂ ಸರ್ಕಾರ ತೆಗೆದುಕೊಳ್ಳಬೇಕು' ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ 'ಎಕ್ಸ್'ನಲ್ಲಿ ಆಗ್ರಹಿಸಿದ್ದಾರೆ.

'ಕದನ ವಿರಾಮ' ನಿರ್ಧಾರದ ಕುರಿತು ಮಾಹಿತಿ ಪ್ರಕಟಿಸಿದ್ದಕ್ಕಾಗಿ ಮಿಸ್ರಿ ಮತ್ತು ಅವರ ಕುಟುಂಬದವರನ್ನು ಅವಮಾನಿಸುವುದು ಅತ್ಯಂತ ನಾಚಿಕೆಗೇಡಿನ ಸಂಗತಿ' ಎಂದು ಮಾಜಿ ವಿದೇಶಾಂಗ ಕಾರ್ಯದರ್ಶಿ ನಿರುಪಮಾ ಮೆನನ್ ರಾವ್ ಕಿಡಿಕಾರಿದ್ದಾರೆ.

'ನಿಷ್ಠಾವಂತ ಅಧಿಕಾರಿ ಮಿಸ್ರಿ ಅವರು ಅತ್ಯಂತ ವೃತ್ತಿಪರವಾಗಿ ದೇಶಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ. ಅಂಥವರ ಮಗಳು ಮತ್ತು ಕುಟುಂಬದವರ ಬಗ್ಗೆ ಟ್ರೋಲ್ ಮಾಡುವುದು ಎಂದರೆ, ಅದು ಸಭ್ಯತೆಯ ಎಲ್ಲೆ ಮೀರಿದಂತೆ. ಹೀಗೆ ವಿಷಕಾರಿಯಾಗಿ ದ್ವೇಷಕಾರುವುದು ನಿಲ್ಲಬೇಕು' ಎಂದು ಅವರು ಪೋಸ್ಟ್‌ನಲ್ಲಿ ಕರೆ ನೀಡಿದ್ದಾರೆ.

'ಮಿಸ್ರಿ ಅವರು ಸಭ್ಯ, ಪ್ರಾಮಾಣಿಕ ಅಧಿಕಾರಿಯಾಗಿದ್ದು, ದೇಶಕ್ಕಾಗಿ ಅವಿರತ ದುಡಿಯುತ್ತಿದ್ದಾರೆ. ದೇಶದ ರಾಜಕೀಯ ನಾಯಕರು ತೆಗೆದುಕೊಳ್ಳುವ ನಿರ್ಧಾರಗಳಿಗೆ ಅಧಿಕಾರಿಗಳನ್ನು ದೂಷಿಸುವುದು ಸರಿಯಲ್ಲ' ಎಂದು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಎನ್‌ಸಿಡಬ್ಲ್ಯು ಖಂಡನೆ

ವಿಕ್ರಮ್ ಮಿಸ್ರಿ ಮತ್ತು ಅವರ ಮಗಳು ಸೇರಿದಂತೆ ಇಡೀ ಕುಟುಂಬವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಟ್ರೋಲ್ ಮಾಡಿರುವುದನ್ನು ರಾಷ್ಟ್ರೀಯ ಮಹಿಳಾ ಆಯೋಗ ಮತ್ತು ಭಾರತೀಯ ರಾಯಭಾರಿಗಳ ಸಂಘ ತೀವ್ರವಾಗಿ ಖಂಡಿಸಿದೆ.

ಈ ರೀತಿಯ ಟ್ರೋಲ್‌ಗಳು ನಾಚಿಕೆಗೇಡಿನಿಂದ ಕೂಡಿವೆ. ಇಷ್ಟಾದರೂ ಸರ್ಕಾರ ಏಕೆ ಸುಮ್ಮನಿದೆ? – ಸಿಪಿಎಂ

ದೀರ್ಘ ಮಾದರಿ ಕ್ರಿಕೆಟ್‌ಗೆ ವಿದಾಯ ಹೇಳಿದ ಚೇಸಿಂಗ್ ಮಾಸ್ಟರ್

ಟೆಸ್ಟ್ ಅಂಗಳದಲ್ಲಿ ವಿರಾಟ್ ಪರ್ವ

68 ಪಂದ್ಯ | **40** ಗೆಲುವು

ಟೆಸ್ಟ್ ನಾಯಕನಾಗಿ ಸಾಧನೆ



• ಗಿರೀಶ ದೊಡ್ಡಮನಿ

ಬೆಂಗಳೂರು: ಟೆಸ್ಟ್ ಕ್ರಿಕೆಟ್‌ಗೆ ಸುಮಾರು ನೂರೈವತ್ತು ವರ್ಷಗಳ ಇತಿಹಾಸವಿದೆ. ಈ ಅವಧಿಯಲ್ಲಿ ಹಲವು ದಿಗ್ಗಜರು ತಮ್ಮ ಹೆಜ್ಜೆಗುರುತು ಮೂಡಿಸಿದ್ದಾರೆ. ಸರ್ ಡಾನ್ ಬ್ರಾಡ್ಮನ್, ಸರ್ ಗ್ಯಾರಿ ಸೋಬರ್ಸ್, ವಿವಿಯನ್ ರಿಚರ್ಡ್ಸ್, ಸುನಿಲ್ ಗಾವಸ್ಕರ್, ಜಿ.ಆರ್. ವಿಶ್ವನಾಥ್, ಕಪಿಲ್ ದೇವ್, ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ವಿವಿಎಸ್ ಲಕ್ಷ್ಮಣ್ ಅವರು ತಮ್ಮ ವಿಶಿಷ್ಟಶೈಲಿಯಿಂದ ಕ್ರಿಕೆಟ್‌ಪ್ರೇಮಿಗಳ ಮನದಲ್ಲಿ ಸ್ಥಾನ ಪಡೆದಿದ್ದಾರೆ.

ಕ್ರಿಕೆಟ್ ಆಟದ ಸಾಧನೆಗಳ ಮೂಲಕ ಈ ದಿಗ್ಗಜರ ಸಾಲಿನಲ್ಲಿ ವಿರಾಟ್ ಕೊಹ್ಲಿ ಕೂಡ ಸೇರಿದ್ದಾರೆ. ಆದರೆ ಅವರು ಅವರೆಲ್ಲರಿಗಿಂತ ವಿಭಿನ್ನವೂ ಆಗಿದ್ದಾರೆ. ತಮ್ಮ 14 ವರ್ಷಗಳ ಟೆಸ್ಟ್ ಕ್ರಿಕೆಟ್ ಜೀವನದಲ್ಲಿ ಹಲವು ಏಳು, ಬೀಳುಗಳನ್ನು ಕಂಡ ವಿರಾಟ್, ದಾಖಲೆಗಳ ಬೆಟ್ಟವನ್ನೇ ಪೇರಿಸಿದ್ದಾರೆ. ದೆಹಲಿಯ ಮಧ್ಯಮವರ್ಗದ ಕುಟುಂಬದ ಕುಡಿ ವಿರಾಟ್, ವಿಶ್ವದ ಟಾಪ್ 20 ಶ್ರೀಮಂತ ಆಟಗಾರರಲ್ಲಿ ತಮ್ಮ ಹೆಜ್ಜೆಗುರುತು ಮೂಡಿಸಿದರು. ಅಷ್ಟೇ ಅಲ್ಲ. ತಾವೇ ಒಂದು ಜನಪ್ರಿಯ ಬ್ರ್ಯಾಂಡ್ ಆಗಿ ಬೆಳೆದರು. ತಮ್ಮ 'ಮ್ಯಾನರಿಸಂ' ಮೂಲಕವೇ ಯುವಸಮುದಾಯದ ಮನಗೆದ್ದವರು. ಕೊಹ್ಲಿಯ ಕೇಶವಿನ್ಯಾಸ, ಗಡ್ಡ, ಮೀಸೆಗಳ ವಿನ್ಯಾಸವನ್ನೂ ಅನುಕರಿಸುವ ಹುಡುಗರು ಭಾರತವಷ್ಟೇ ಅಲ್ಲ, ವಿದೇಶಗಳಲ್ಲಿಯೂ ಇದ್ದಾರೆ. ಅಷ್ಟರಮಟ್ಟಿಗೆ ಅವರ ಪ್ರಭಾವ ಗಾಢವಾಗಿದೆ. ತಮ್ಮ ಸಮಕಾಲೀನ ವಯೋಮಾನದವರನ್ನಷ್ಟೇ ಅಲ್ಲ; ಪ್ರಸ್ತುತ ಝೆನ್ ಝೀ ಪೀಳಿಗೆಗೂ 36 ವರ್ಷದ ವಿರಾಟ್ ಅಚ್ಚುಮೆಚ್ಚು.

ಅವರು ಸಾಮಾಜಿಕ ಜಾಲತಾಣಗಳಲ್ಲಿ ಹಾಕುವ ಪೋಸ್ಟ್‌ಗಳು ಅಲ್ಪಾವಧಿಯಲ್ಲಿಯೇ ಲಕ್ಷಾಂತರ ಹಂಚಿಕೆಯಾಗುವ ಪರಿ ಅಸಾಧಾರಣವೇ ಸರಿ. ಸೋಮವಾರ ಅವರು ಇನ್‌ಸ್ಟಾಗ್ರಾಮ್‌ನಲ್ಲಿ ಹಾಕಿದ ತಮ್ಮ ಟೆಸ್ಟ್ ಕ್ರಿಕೆಟ್ ವಿದಾಯ ಘೋಷಣೆಯ ಸಂದೇಶವೂ ಇದಕ್ಕೆ ಸಾಕ್ಷಿ. 'ಜಂಟಲ್‌ಮ್ಯಾನ್ ಗೇಮ್' ಕ್ರಿಕೆಟ್‌ನಲ್ಲಿ ಒಬ್ಬ ಆಟಗಾರ ಮೈದಾನದ ಒಳಗೆ ಮತ್ತು ಹೊರಗೆ ಹೀಗೆಯೇ ಇರಬೇಕು ಎಂದು ಹೇಳಲಾಗುತ್ತಿದ್ದ ಕೆಲವು ಅಲಿಖಿತ ನಿಯಮಗಳನ್ನು ಮುರಿದ ಆಟಗಾರ ಕೊಹ್ಲಿ, 'ಕಮರ್ಷಿಯಲ್ ಕಾಲಘಟ್ಟದ ಕ್ರಿಕೆಟ್' ಲೋಕದ ಐಕಾನ್ ಎಂಬುದರಲ್ಲಿ ಅನುಮಾನವೇ ಇಲ್ಲ.

ಬೌಂಡರಿಲೈನ್‌ನಲ್ಲಿ ಫೀಲ್ಡಿಂಗ್ ಮಾಡುವಾಗ ಬಾಲಿವುಡ್ ಸಿನೆಮಾ ನೃತ್ಯಗಳ ಹೆಜ್ಜೆಹಾಕುತ್ತ ಅಭಿಮಾನಿಗಳಲ್ಲಿ ಸಂಚಲನ ಮೂಡಿಸಿದರು. ತಮ್ಮ ತಂಡದ ಬೌಲರ್ ವಿಕೆಟ್ ಗಳಿಸಲಿ, ಯಾರೇ ಫೀಲ್ಡರ್ ಕ್ಯಾಚ್ ಪಡೆಯಲಿ ವಿರಾಟ್ ಕುಣಿದು ಕುಪ್ಪಳಿಸುತ್ತಾರೆ. 'ಇದು ಟಿ.ವಿ ಕ್ಯಾಮೆರಾ ಗಮನ ಸೆಳೆಯುವ ಪ್ರಚಾರದ ಹುಚ್ಚು' ಎಂಬ ಟೀಕೆಗಳೂ ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತವಾಗಿದ್ದುಂಟು. ತಮ್ಮನ್ನು ಈ ಹಿಂದೆ ಕಿಚಾಯಿಸಿದ ಬೌಲರ್‌ಗಳನ್ನು ಗುರಿಯಾಗಿಸಿ ದಂಡಿಸುವ ಛಲದಂಕಮಲ್ಲ. ಅಷ್ಟೇ ಅಲ್ಲ. ಸೆಲಿಬ್ರೇಷನ್ ಇರಲಿ, ಸಾಧನೆ ಇರಲಿ ಯಾವುದನ್ನೂ ಬಾಕಿ ಇಟ್ಟುಕೊಳ್ಳುವ ಜಾಯಮಾನವೇ ಅಲ್ಲ. ಬಡ್ಡಿಸಮೇತ ತಿರುಗೇಟು ನೀಡಿ ಸಂಭ್ರಮಿಸಿದ್ದೇ ಹೆಚ್ಚು.

'ವಿರಾಟ್ ಸ್ವಭಾವವೇ ಅಂತಹದ್ದು. ತನ್ನ ಸಹಆಟಗಾರರ ಯಶಸ್ಸನ್ನು ಮುಕ್ತವಾಗಿ ಆಚರಿಸುತ್ತಾರೆ' ಎಂದು ವೇಗದ ಬೌಲರ್ ಮೊಹಮ್ಮದ್ ಶಮಿ ಈ ಹಿಂದೆ ಸಂದರ್ಶನವೊಂದರಲ್ಲಿ ಹೇಳಿದ್ದರು.

ತನ್ನ ಸಹಆಟಗಾರರ ಪರವಾಗಿ ಎದುರಾಳಿಗಳು ಮತ್ತು ಅಂಪೈರ್‌ಗಳೊಂದಿಗೆ ಜಟಾಪಟಿ ನಡೆಸಲು ಯಾವುದೇ ಹಂತದಲ್ಲಿ ಹಿಂಜರಿದಿಲ್ಲ. ತಮ್ಮ ಬಗ್ಗೆ ಟೀಕೆ ಮಾಡಿದವರು ಯಾರೇ ಆಗಿರಲಿ; ತಕ್ಕ ಪ್ರತ್ಯುತ್ತರ ನೀಡದೇ ಬಿಟ್ಟವರೂ ಅಲ್ಲ. ವೀಕ್ಷಕ ವಿವರಣೆಗಾರ ಸುನಿಲ್ ಗಾವಸ್ಕರ್, ಸಂಜಯ್ ಮಾಂಜ್ರೇಕರ್ ಅವರಿಗೂ ತಿರುಗೇಟು ನೀಡುವಲ್ಲಿ ವಿರಾಟ್ ಹಿಂದೆ ಮುಂದೆ ನೋಡಿದವರಲ್ಲ. ಆದರೆ ಆ ರೀತಿ ಮಾಡುವ ಮುನ್ನ ತಮ್ಮ ಬ್ಯಾಟ್‌ನಿಂದ ರನ್ ಹೊಳೆ ಹರಿಸುವ ಛಲವೂ ಅವರದ್ದು ಎಂಬುದು ವಿಶೇಷ. ಬೌಂಡರಿಗೆರೆ ದಾಟಿ ಹೊರ ಬಂದ ನಂತರ ವಯಸ್ಸು, ದೇಶ, ಭಾಷೆ ಮೀರಿದ ಸ್ನೇಹ ಸಂಬಂಧ ರೂಪಿಸಿಕೊಂಡಿರುವ ವ್ಯಕ್ತಿತ್ವ.

ನಾಯಕತ್ವದ ಪರ್ವ

2011ರಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ (ವೆಸ್ಟ್ ಇಂಡೀಸ್ ವಿರುದ್ಧ) ಮಾಡಿದ್ದ ಕೊಹ್ಲಿ, ಮೂರು ವರ್ಷಗಳಲ್ಲಿ ನಾಯಕಪಟ್ಟಕ್ಕೆ ಏರಿದ್ದರು. ಧೋನಿ ಬಿಟ್ಟುಹೋಗಿದ್ದ ಯಶಸ್ಸಿನ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಹೊಣೆ ವಿರಾಟ್‌ಗೆ ಇತ್ತು. ಅದಾಗಲೇ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮುಂದಾಳತ್ವವನ್ನೂ ಅವರೇ ವಹಿಸಿದ್ದರು. 2017ರಲ್ಲಿ ಏಕದಿನ ಕ್ರಿಕೆಟ್ ಮತ್ತು ಟಿ20 ತಂಡಗಳ ಸಾರಥ್ಯವೂ ಅವರದ್ದಾಯಿತು.

ಇದೆಲ್ಲದರ ನಡುವೆ ಟೆಸ್ಟ್ ಕ್ರಿಕೆಟ್ ತಂಡವನ್ನು ಸಮರ್ಥವಾಗಿ ಮುನ್ನಡೆಸಿದರು. ಆಸ್ಟ್ರೇಲಿಯಾ ತಂಡವನ್ನು ಅದರ ನೆಲದಲ್ಲಿಯೇ ಮಣಿಸಿ ಬಾರ್ಡರ್–ಗಾವಸ್ಕರ್ ಟ್ರೋಫಿ ಗೆದ್ದ ಶ್ರೇಯ ವಿರಾಟ್ ನಾಯಕತ್ವಕ್ಕೆ ಸಲ್ಲುತ್ತದೆ.

68 ಟೆಸ್ಟ್‌ಗಳಲ್ಲಿ ನಾಯಕತ್ವ ವಹಿಸಿದ್ದ ಅವರ ಬ್ಯಾಟ್‌ನಿಂದ ಐದು ಸಾವಿರಕ್ಕೂ ಹೆಚ್ಚು ರನ್‌ಗಳು ಹರಿದುಬಂದಿದ್ದು ಸಾಮಾನ್ಯವಲ್ಲ. ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್ ತಂಡಗಳ ಎದುರೂ ಅವರ ಯಶಸ್ಸಿನ ಓಟ ನಿಲ್ಲಲಿಲ್ಲ. ತವರಿನಂಗಳದಲ್ಲಿ ಅವರದ್ದು ಅಜೇಯ ಓಟ.

2022ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಭಾರತ ತಂಡವು ಸರಣಿ ಸೋತಾಗ ವಿರಾಟ್ ನಾಯಕತ್ವ ಬಿಟ್ಟುಕೊಟ್ಟರು. ಈ ಹಂತದಲ್ಲಿ ಅವರ ಫಾರ್ಮ್ ಕೂಡ ಮಂಕಾಗಿತ್ತು. ಇದೆಲ್ಲದರಾಚೆ ಅವರು ಭಾರತ ಟೆಸ್ಟ್ ಕ್ರಿಕೆಟ್ ತಂಡದ ಶ್ರೇಷ್ಠ ನಾಯಕ ಎಂಬುದರಲ್ಲಿ ಎರಡು ಮಾತಿಲ್ಲ. ಇಲ್ಲಿಯವರೆಗಿನ ಎಲ್ಲ ನಾಯಕರಿಗಿಂತಲೂ ಅವರ ಗೆಲುವಿನ ಪಾಲು (ಶೇ 58.82) ಹೆಚ್ಚಿದೆ. ಆದರೆ ವಿರಾಟ್ ತಮ್ಮ ನಾಯಕತ್ವದಲ್ಲಿ ಒಂದೂ ಐಸಿಸಿ ಟ್ರೋಫಿ ಜಯಿಸಲಿಲ್ಲ ಎಂಬ ಕೊರಗು ಕೂಡ ಇದೆ.

'ನನ್ನ ದಾಖಲೆಯನ್ನು ಮುರಿಯುವ ಸಾಮರ್ಥ್ಯ ವಿರಾಟ್ ಅವರಿಗೆ ಇದೆ' ಎಂದು ಸಚಿನ್ ತೆಂಡೂಲ್ಕರ್ ತಮ್ಮ ನಿವೃತ್ತಿಯ ನಂತರ ಸಮಾರಂಭವೊಂದರಲ್ಲಿ ಪರೋಕ್ಷವಾಗಿ ಹೇಳಿದ್ದರು.

ಸಚಿನ್ ಅವರು ಏಕದಿನ ಕ್ರಿಕೆಟ್‌ನಲ್ಲಿ ಗಳಿಸಿದ್ದ 49 ಶತಕಗಳ ದಾಖಲೆಯನ್ನು ವಿರಾಟ್ (51) ಮುರಿದಿದ್ದಾರೆ. ಆದರೆ ಟೆಸ್ಟ್‌ನಲ್ಲಿ ಸಚಿನ್ (51) ದಾಖಲೆ ಮುಟ್ಟಲು ಕೊಹ್ಲಿಗೆ (30) ಸಾಧ್ಯವಾಗಲಿಲ್ಲ. ಅಲ್ಲದೇ 10 ಸಾವಿರ ರನ್‌ಗಳ ಸಾಧನೆಯ ಅನತಿ ದೂರದಲ್ಲಿದ್ದಾಗಲೇ ನಿವೃತ್ತಿ ಘೋಷಿಸಿದ್ದಾರೆ. ಇದೀಗ ಸಚಿನ್ ತೆಂಡೂಲ್ಕರ್ ಅವರ ನೂರು ಶತಕಗಳ ದಾಖಲೆ ಅಬಾಧಿತವಾಗಿದೆ.

ಇನ್ನೆರಡು, ಮೂರು ವರ್ಷ ಆಡಬಹುದಾದ ದೈಹಿಕ ಕ್ಷಮತೆ ಮತ್ತು ಮನೋದಾರ್ಢ್ಯ ಹೊಂದಿರುವ ವಿರಾಟ್ ನಿವೃತ್ತಿಯ ನಿರ್ಧಾರ ಪ್ರಕಟಿಸಿರುವುದು ಅಭಿಮಾನಿಗಳಲ್ಲಿ ಅಚ್ಚರಿ ಮೂಡಿಸಿರುವುದು ಸುಳ್ಳಲ್ಲ. ಅವರ ಸ್ಥಾನವನ್ನು ತುಂಬುವವರು ಸದ್ಯಕ್ಕಂತೂ ಸಮೀಪದಲ್ಲಿ ಯಾರೂ ಕಾಣುತ್ತಿಲ್ಲ.

19 ವರ್ಷದೊಳಗಿನವರ ವಿಶ್ವಕಪ್ ವಿಜಯ..

ಭಾರತ ಸೀನಿಯರ್ ತಂಡದ ನಾಯಕರಾಗಿ ವಿರಾಟ್ ಯಾವುದೇ ಐಸಿಸಿ ಟ್ರೋಫಿ ಜಯಿಸಿಲ್ಲ. ಆದರೆ, 2008ರಲ್ಲಿ ವಿರಾಟ್ ನಾಯಕತ್ವದ 19 ವರ್ಷದೊಳಗಿನವರ ತಂಡವು ವಿಶ್ವಕಪ್ ಜಯಿಸಿತ್ತು. ಅದೇ ತಂಡದಲ್ಲಿ ಕರ್ನಾಟಕದ ಮನೀಷ್ ಪಾಂಡೆ ಹಾಗೂ ಸೌರಾಷ್ಟ್ರದ ಆಲ್‌ರೌಂಡರ್ ರವೀಂದ್ರ ಜಡೇಜ ಕೂಡ ಆಡಿದ್ದರು.

ಈ ವಿಶ್ವಕಪ್ ಟೂರ್ನಿಯಲ್ಲಿ ವಿರಾಟ್ ಸಾಧನೆಯು ಭಾರತ ತಂಡದ ಆಯ್ಕೆಗಾರರ ಗಮನ ಸೆಳೆದಿತ್ತು.

ವಿರಾಟ್ ವಿವಾದಗಳು..

ನಾಯಕತ್ವದ ಭರಾಟೆಯಲ್ಲಿ ಕೆಲವು ವಿವಾದಗಳನ್ನೂ ಅವರು ಮೈಮೇಲೆ ಎಳೆದುಕೊಂಡಿದ್ದರು. ಅದರಲ್ಲಿ ಪ್ರಮುಖವಾಗಿ 2017ರಲ್ಲಿ ಮುಖ್ಯ ಕೋಚ್ ಆಗಿದ್ದ ಅನಿಲ್ ಕುಂಬ್ಳೆ ಜೊತೆಗಿನ ಭಿನ್ನಾಭಿಪ್ರಾಯ ಮತ್ತು ಐಪಿಎಲ್‌ನಲ್ಲಿ ಗೌತಮ್ ಗಂಭೀರ್ ಅವರೊಂದಿಗಿನ ವೈಮನಸ್ಸು.

2017ರಲ್ಲಿ ಬೆಂಗಳೂರಿನಲ್ಲಿ ಆಸ್ಟ್ರೇಲಿಯಾ ಎದುರಿನ ಟೆಸ್ಟ್‌ನಲ್ಲಿ ನಡೆದಿದ್ದ ಡಿಆರ್‌ಎಸ್ ವಿವಾದದಲ್ಲಿ ವಿರಾಟ್ ದೊಡ್ಡ ಸುದ್ದಿಯಾಗಿದ್ದರು. ಸ್ಮಿತ್ ಮತ್ತು ಆಸ್ಟ್ರೇಲಿಯಾ ಆಟಗಾರರು ಡಿಆರ್‌ಎಸ್ ಪಡೆಯುವಾಗ ಡ್ರೆಸಿಂಗ್ ರೂಮ್‌ನ 'ಕಳ್ಳ ಸೂಚನೆ'ಗಳ ಸಹಾಯ ಪಡೆದಿದ್ದರು ಎಂದು ಕೊಹ್ಲಿ ಆರೋಪಿಸಿದ್ದರು. 2021ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಪಂದ್ಯದಲ್ಲಿ ಎಲ್‌ಬಿಡಬ್ಲ್ಯು ವಿವಾದಕ್ಕೆ ಸಂಬಂಧಿಸಿದಂತೆ ಅಧಿಕೃತ ಪ್ರಸಾರಕರ ಬಗ್ಗೆ ಟೀಕಿಸಿದ್ದು ಸ್ಟಂಪ್ ಮೈಕ್‌ನಲ್ಲಿ ದಾಖಲಾಗಿತ್ತು. ಈಚೆಗೆ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿ ಹೊಸ ಹುಡುಗ ಸ್ಯಾಮ್ ಕಾನ್ಸ್‌ಟಸ್ ಅವರಿಗೆ ಬೇಕೆಂತೆ ಭುಜ ತಾಕಿಸಿದ್ದ ಕೊಹ್ಲಿ ಸ್ಲೆಡ್ಜಿಂಗ್ ವಿವಾದಕ್ಕೊಳಗಾಗಿದ್ದರು.

ಬ್ರ್ಯಾಂಡ್.. ಉದ್ಯಮಿ..

ಕ್ರಿಕೆಟ್ ಅಂಗಳದಲ್ಲಿ ವಿರಾಟ್ ಮಾಡಿದ ಸಾಧನೆಗೆ ಮಾರುಕಟ್ಟೆಯೂ ಮಾರುಹೋಗಿದೆ. ಅವರ ಜನಪ್ರಿಯತೆಯನ್ನು ತಮ್ಮ ಉತ್ಪನ್ನಗಳ ಪ್ರಚಾರಕ್ಕೆ ಬಳಸಿಕೊಳ್ಳಲು ದೊಡ್ಡ ಉದ್ಯಮ ಸಂಸ್ಥೆಗಳು ಮುಗಿಬಿದ್ದವು. ಒಂದು ಮೂಲದ ಪ್ರಕಾರ ಕೊಹ್ಲಿ ಬ್ರ್ಯಾಂಡ್ ಮೌಲ್ಯ ₹ 1900 ಕೋಟಿ. ಆದರೆ ಈ ಹಾದಿಯಲ್ಲಿ ಅವರು ಕೆಲವು ಕಟ್ಟುಪಾಡುಗಳನ್ನೂ ಅನುಸರಿಸಿದ್ದು ಜನರ ಮನಗೆದ್ದಿದ್ದರು. ತ್ವಚೆಯ ಕಪ್ಪುಬಣ್ಣ ನಿವಾರಿಸುವ ಕ್ರೀಮ್, ತಂಪು ಪಾನೀಯ ಮತ್ತು ಜಂಕ್ ಫುಡ್ ಜಾಹೀರಾತುಗಳನ್ನು ತಿರಸ್ಕರಿಸಿದ್ದರು. ವಿರಾಟ್ ತಮ್ಮನ್ನು ಕೇವಲ ಕ್ರಿಕೆಟ್‌ಗೆ ಸೀಮಿತಗೊಳಿಸಿಕೊಂಡಿಲ್ಲ. ಉದ್ಯಮಿಯಾಗಿಯೂ ಬೆಳೆದಿದ್ದಾರೆ. ಪತ್ನಿ, ಅನುಷ್ಕಾ ಶರ್ಮಾರೊಂದಿಗೆ ಕ್ರೀಡಾ ಪೋಷಾಕು, ವಸ್ತ್ರ ವಿನ್ಯಾಸ ಮತ್ತು ಹೋಟೆಲ್ ಉದ್ಯಮಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಪತ್ನಿ ಅನುಷ್ಕಾ ಭಾವನಾತ್ಮಕ ಪೋಸ್ಟ್


ನವದೆಹಲಿ (ಪಿಟಿಐ): ವಿರಾಟ್ ಕೊಹ್ಲಿ ಅವರ ಪತ್ನಿ ಹಾಗೂ ನಟಿ ಅನುಷ್ಕಾ ಶರ್ಮಾ ಅವರು ಇನ್‌ಸ್ಟಾಗ್ರಾಮ್‌ನಲ್ಲಿ ಭಾವನಾತ್ಮಕ ಪೋಸ್ಟ್ ಹಾಕಿದ್ದಾರೆ.

'ಬೇರೆಯವರು ದಾಖಲೆ ಮತ್ತು ಮೈಲಿಗಲ್ಲುಗಳ ಬಗ್ಗೆ ಮಾತನಾಡಬಹುದು. ಆದರೆ ನೀವು ಎಂದೂ ತೋರಿಸಿಕೊಳ್ಳದ ಕಣ್ಣೀರು, ಯಾರಿಗೂ ಕಾಣಿಸದ ಹೋರಾಟಗಳು, ಈ ಮಾದರಿಯ ಆಟಕ್ಕೆ ನೀವು ತೋರಿಸಿದ ಅಚಲ ಪ್ರೀತಿಯನ್ನು ಸದಾ ನೆನಪಿನಲ್ಲಿಡುವೆ' ಎಂದು 37 ವರ್ಷ ವಯಸ್ಸಿನ ತಾರಾ ಪತ್ನಿ ಹೇಳಿದ್ದಾರೆ.

'ಈ ಸಾಧನೆಯ ಹಿಂದೆ ಎಷ್ಟೆಲ್ಲಾ ಶ್ರಮವಿದೆ ಎನ್ನುವುದು ನನಗೆ ಗೊತ್ತು. ಪ್ರತಿ ಟೆಸ್ಟ್ ಸರಣಿಯ ನಂತರ ಇನ್ನಷ್ಟು ತಿಳಿವಳಿಕೆ, ವಿನೀತ ಭಾವ ನಿಮ್ಮದಾಗುತಿತ್ತು.

ಎಲ್ಲವನ್ನು ಮೆಟ್ಟಿನಿಂತು ಸಾಧಿಸಿದ ಬೆಳವಣಿಗೆ ನೋಡುತ್ತಿದ್ದುದು ನನ್ನ ಭಾಗ್ಯ' ಎಂದು ಅವರು ಕೊಹ್ಲಿ ಚಿತ್ರಕ್ಕೆ ಶೀರ್ಷಿಕೆ ಬರೆದಿದ್ದಾರೆ.

36 ವರ್ಷ ವಯಸ್ಸಿನ ಕೊಹ್ಲಿ ಅವರು 2017ರಲ್ಲಿ ಅನುಷ್ಕಾ ಅವರನ್ನು ವಿವಾಹವಾಗಿದ್ದರು. ಈ ದಂಪತಿಗೆ ನಾಲ್ಕು ವರ್ಷ ವಯಸ್ಸಿನ ವಮಿಕಾ ಮತ್ತು 15 ತಿಂಗಳ ಅಕಾಯ್ ಎಂಬ ಮಕ್ಕಳಿದ್ದಾರೆ.



ವಿರಾಟ್ ಕೊಹ್ಲಿ ಮತ್ತು ಅನುಷ್ಕಾ ಶರ್ಮಾ

ಫಿಟ್‌ನೆಸ್ ಕಿಂಗ್..

ವಿರಾಟ್ ಕೊಹ್ಲಿ ಅವರ ಯಶಸ್ಸಿಗೆ ಫಿಟ್‌ನೆಸ್ ಕಾರಣ. ವ್ಯಾಯಾಮ, ಆಹಾರ ಮತ್ತು ವಿಹಾರಗಳಲ್ಲಿ ಅವರದ್ದು ಕಟ್ಟುನಿಟ್ಟಾದ ವೇಳಾಪಟ್ಟಿಯಿದೆ. ಭಾರತದ ಕ್ರಿಕೆಟ್‌ನಲ್ಲಿ ಈ ಹಿಂದೆ ರಾಹುಲ್ ದ್ರಾವಿಡ್, ಮಹೇಂದ್ರಸಿಂಗ್ ಧೋನಿ ಸೇರಿದಂತೆ ಕೆಲವರು ಫಿಟ್‌ನೆಸ್ ಕುರಿತು ಹೆಚ್ಚು ಗಮನ ನೀಡುತ್ತಿದ್ದರು. ಆದರೆ ವಿರಾಟ್ ಅದಕ್ಕೊಂದು ಹೊಸ ವ್ಯಾಖ್ಯಾನವನ್ನೇ ಬರೆದರು.

'ಅಂತರರಾಷ್ಟ್ರೀಯ ಕ್ರಿಕೆಟ್ ಆಡಲು ಆರಂಭಿಸಿದಾಗ ನನ್ನ ಕೆನ್ನೆಗಳು ಉಬ್ಬಿದ್ದವು. ದೇಹದಲ್ಲಿ ಕೊಬ್ಬು ಕೂಡ ಇತ್ತು. ಒಂದಿಷ್ಟು ಆಲಸ್ಯವೂ ಇತ್ತು. ರುಚಿಗೆ ಕಟ್ಟುಬಿದ್ದು ಎಲ್ಲವನ್ನೂ ತಿನ್ನುತ್ತಿದ್ದೆ. ಆದರೆ ಅದೊಂದು ದಿನ ಜೀವನದಲ್ಲಿ ದೊಡ್ಡದನ್ನು ಸಾಧಿಸಬೇಕಾದರೆ ಬದಲಾಗಬೇಕು. ಅದಕ್ಕಾಗಿ ಶ್ರಮಪಡಬೇಕು ಎಂಬ ಅರಿವು ಮೂಡಿತು. ಅಷ್ಟೇ; ಫಿಟ್‌ನೆಸ್‌ಗೆ ಒತ್ತುಕೊಟ್ಟೆ. ಆರೋಗ್ಯದ ಕಾರಣಕ್ಕೆ ಸಸ್ಯಾಹಾರಿಯಾದೆ. ಆಹಾರದಲ್ಲಿ ದೇಹಕ್ಕೆ ಒಳಿತಾಗುವುದನ್ನಷ್ಟೇ ಆಯ್ಕೆ ಮಾಡಿಕೊಂಡೆ' ಎಂದು ವಿರಾಟ್ ಅವರೇ ಸಂದರ್ಶನದಲ್ಲಿ ಹೇಳಿದ್ದರು.

ವಿರಾಟ್ ಪ್ರತಿದಿನವೂ ತಮ್ಮ ಫಿಟ್‌ನೆಸ್ ಮತ್ತು ಆಟದ ಅಭ್ಯಾಸದ ಚಿಕ್ಕ ಗುರಿಗಳನ್ನು ನಿಗದಿಪಡಿಸಿಕೊಳ್ಳುತ್ತಾರೆ. ಆ ಪ್ರಕಾರ; ಕಾರ್ಯ ನಿರ್ವಹಿಸುತ್ತಾರೆ. ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿದಾಗ ತಮ್ಮ ಅಭ್ಯಾಸ ಕ್ರಮವನ್ನು ದುಪ್ಪಟ್ಟುಗೊಳಿಸುತ್ತಾರೆಂದು ಅವರ ಆಪ್ತರು ಹೇಳುತ್ತಾರೆ.

ಕೊಹ್ಲಿ ಮನದಲ್ಲೊಂದು ಇಣುಕುನೋಟ....

ನವದೆಹಲಿ (ಪಿಟಿಐ): ಟೆಸ್ಟ್ ಕ್ರಿಕೆಟ್‌ಗೆ ವಿರಾಟ್ ಕೊಹ್ಲಿ ಅವರ ನಿವೃತ್ತಿ ತಂಡಕ್ಕೆ ದೊಡ್ಡ ನಷ್ಟವಾಗಿರಬಹುದು. ಆದರೆ ಅದು ತೀರಾ ಅಚ್ಚರಿಯ ನಡೆಯೇನೂ ಆಗಿರಲಿಲ್ಲ. ದೀರ್ಘ ಮಾದರಿಯಲ್ಲಿ ವೃತ್ತಿ ಜೀವನದ ಸಂಧ್ಯಾಕಾಲದಲ್ಲಿರುವ ಸಮಯದಲ್ಲೇ ತಮ್ಮ ಎಲ್ಲ ನಡೆಗಳ ಮೇಲೆ ಅತಿಯಾದ ಗಮನ ನೀಡುತ್ತಿದ್ದುದು ಅವರ ಮೇಲೆ ಒತ್ತಡ ಹೇರಿರಲು ಸಾಕು.

ತಮಗಿರುವ ಬದ್ಧತೆಯಿಂದ ಟೆಸ್ಟ್ ಕ್ರಿಕೆಟ್ ಮಾದರಿಯನ್ನು ಜೀವಂತವಾಗಿಡಲು ಏಕಾಂಗಿಯಾಗಿ ಹೋರಾಡಿದ ಶ್ರೇಯಸ್ಸು ಅವರದು. ಈಗ ಏಕದಿನ ಕ್ರಿಕೆಟ್‌ಗೆ ಮಾತ್ರ ಭಾರತದ ಸೂಪರ್ ಸ್ಟಾರ್ ಆಟಗಾರ ಲಭ್ಯವಿದ್ದಾರೆ. ಟಿ20 ಅಬ್ಬರದಲ್ಲಿ ಏದುಸಿರು ಬಿಡುತ್ತಿರುವ ಈ ಮಾದರಿಗೆ ಅವರು ಜೀವಕಳೆ ನೀಡಬಹುದೆಂಬ ನಿರೀಕ್ಷೆಯಿದೆ.

ಇಂಗ್ಲೆಂಡ್‌ನಲ್ಲಿ ಐದು ಟೆಸ್ಟ್‌ಗಳ ಸರಣಿಗೆ ಮೊದಲು ಅವರ ಮುಂದೆ ಸವಾಲುಗಳಿದ್ದವು. ಆದರೆ ಅದಕ್ಕೆ ಮೊದಲೇ ಭಾರತದ ಯಶಸ್ವಿ ಆಟಗಾರನ ಟೆಸ್ಟ್ ವಿದಾಯ ಬಹುತೇಕ ಹತ್ತಿರವಾಗಿತ್ತು. 'ಇದು ಸರಿಯಾದ ನಿರ್ಧಾರ. ಒಂದಿಷ್ಟೂ ವಿಷಾದವಿಲ್ಲದೇ, ಮೊಗದಲ್ಲಿ ಮಂದಹಾಸದೊಡನೆ ಹೊರನಡೆಯುತ್ತಿದ್ದೇನೆ' ಎಂದು ಕೊಹ್ಲಿ ನಿವೃತ್ತಿ ನಿರ್ಧಾರದ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಸಾಟಿಯಿಲ್ಲದ ಫಿಟ್ನೆಸ್, ಐಪಿಎಲ್‌ನಲ್ಲಿ ತೋರಿದ ಸ್ಥಿರ ಬ್ಯಾಟಿಂಗ್ ಪ್ರದರ್ಶನ ಪರಿಗಣಿಸಿದರೆ, ಅವರು ಕಡೇಪಕ್ಷ ಇನ್ನೊಂದು ಋತುವಿಗೆ ಆಡಬಹುದಿತ್ತು.

ಆದರೆ ನಿರೀಕ್ಷೆಯ ಭಾರ ಅವರನ್ನು ಕಾಡಿದೆ ಎಂಬುದು ಇತ್ತೀಚಿನ ಆರ್‌ಸಿಬಿಯ ಪಾಡ್‌ಕಾಸ್ಟ್‌ನಲ್ಲಿ ಅವರ ಮಾತುಗಳಿಂದ ವ್ಯಕ್ತವಾಗಿತ್ತು. ಟಿ20 ಮತ್ತು ಟೆಸ್ಟ್‌ಗಳಲ್ಲಿ ಭಾರತ ತಂಡದ ನಾಯಕತ್ವ ತೊರೆಯುವ ಮನದಲ್ಲಿ ಏನು ಸುಳಿದಿತ್ತು ಎಂಬ ಪ್ರಶ್ನೆಗೆ 'ಒಂದು ಹಂತದಲ್ಲಿ ನನ್ನ ಮೇಲಿದ್ದ ಅತಿಯದ ಗಮನವನ್ನು ನಿಭಾಯಿಸುವುದು ತುಂಬಾ ಕಠಿಣವೆನಿಸಿತ್ತು. ನಾನು 7–8 ವರ್ಷ ಭಾರತ ತಂಡದ ನಾಯಕನಾಗಿದ್ದೆ. ಆರ್‌ಸಿಬಿಗೆ 9 ವರ್ಷ ನಾಯಕನಾಗಿದ್ದೆ. ಪ್ರತಿ ಬಾರಿ ಆಡಲು ಇಳಿಯುವಾಗ ನನ್ನ ಮೇಲೆ ನಿರೀಕ್ಷೆಯ ಭಾರ ಗಳಿರುತ್ತಿದ್ದವು' ಎಂದು ಅವರು ಹೇಳಿದ್ದರು.'ದೀರ್ಘ ಅವಧಿಗೆ ಎಲ್ಲವನ್ನೂ ಒಟ್ಟೊಟ್ಟಿಗೆ ನಿರ್ವಹಿಸುವುದು ದೊಡ್ಡ ಸವಾಲು. ಯಾವಾಗ ಇದು ಕೈಮೀರುತ್ತಿದೆ ಎಂದು ಮನಸ್ಸಿಗೆ ಬಂತೊ, ಆಗ ನಾಯಕತ್ವ ತ್ಯಜಿಸಿದೆ. ನಿರಾಳನಾಗಿದ್ದೆ' ಎಂದಿದ್ದರು.

'ಭಾರತ ಮಹಾನ್ ಟೆಸ್ಟ್ ಆಟಗಾರರಲ್ಲೊಬ್ಬರು ದೀರ್ಘ ಮಾದರಿಗೆ ವಿದಾಯ ಹೇಳಿದ್ದಾರೆ. ಬಿಳಿ ಜರ್ಸಿ ತೆಗೆದಿಟ್ಟಿರಬಹುದು. ಆದರೆ ಕಿರೀಟ ಮಾತ್ರ ಅಲ್ಲೇ ಉಳಿಯಲಿದೆ. ಟೆಸ್ಟ್‌ಗೆ ವಿರಾಟ್ ಕೊಹ್ಲಿ ನಿವೃತ್ತಿ ಹೇಳಿದ್ದಾರೆ. ಅವರ ಪರಂಪರೆ ಹೋಲಿಕೆಗೆ ಮೀರಿದ್ದು'

ಐಸಿಸಿ, ಎಕ್ಸ್‌ನಲ್ಲಿ

'ಆ ನಡಿಗೆ, ಆ ಹೊಡೆತಗಳು, ಎಂಥಾ ಭಾವನೆಗಳು, ಅದೆಂಥಾ ಸಂಭ್ರಮ. ಇವೆಲ್ಲವನ್ನೂ ನಾವು ಕಳೆದುಕೊಳ್ಳಲಿದ್ದೇವೆ. ಅದ್ಭುತ ಟೆಸ್ಟ್ ಯುಗಕ್ಕೆ ತೆರೆಬಿದ್ದಿದೆ. ಆದರೆ ಪರಂಪರೆ ಜೀವಂತವಾಗಿರಲಿದೆ. ಕೆಚ್ಚು, ಧೈರ್ಯ ಮತ್ತು ಹೋಲಿಸಲಾಗದ ಬದ್ಧತೆ. ನೀವು ಈ ಮಾದರಿ ಆಡಿದ್ದೀರಷ್ಟೇ ಅಲ್ಲ, ಅದನ್ನು ಎತ್ತರಕ್ಕೇರಿಸಿದ್ದೀರಿ'

ರಾಯಲ್ ಚಾಲೆಂಜರ್ಸ್ ಬೆಂಗಳೂರು, ಎಕ್ಸ್‌ನಲ್ಲಿ

ಹಣದ ಹರಿವು..



ರಾಹುಲ್ ದ್ರಾವಿಡ್ ಮತ್ತು ವಿರಾಟ್ ಕೊಹ್ಲಿ

ವಿರಾಟ್ ಈ ಎತ್ತರಕ್ಕೆ ಬೆಳೆದ ಹಾದಿ ಸುಲಭವೇನೂ ಆಗಿರಲಿಲ್ಲ. ಪರದೇಶಗಳ ತಂಡಗಳಲ್ಲಿ ಅವರಿಗೆ ದೊಡ್ಡ ಸವಾಲು ಎಸೆಯುವ ಬೌಲರ್‌ಗಳು ಮತ್ತು ಪೈಪೋಟಿಯೊಡ್ಡುವ ಬ್ಯಾಟರ್‌ಗಳ ಸಂಖ್ಯೆ (ಸಚಿನ್ ತೆಂಡೂಲ್ಕರ್ ಕಾಲಕ್ಕೆ ಹೋಲಿಸಿದರೆ) ಕಡಿಮೆ ಇತ್ತು. ಆದರೆ ನವಯುಗದ ಸವಾಲುಗಳನ್ನು ಮೀರಿ ನಿಲ್ಲುವುದು ಸರಳವೇನಾಗಿರಲಿಲ್ಲ.

ನದಿಯಲ್ಲಿ ನೀರು ಹರಿದಂತೆ ಕ್ರಿಕೆಟ್‌ನಲ್ಲಿ ಹಣ ಹರಿಯುವ ಈ ಕಾಲಘಟ್ಟದಲ್ಲಿ ಭಾರತ ತಂಡದೊಳಗೆ ಕಾಲಿಟ್ಟು ದಂತಕಥೆಯಾಗಿ ಬೆಳೆಯುವುದು ಸುಲಭವಾದ ಮಾತಲ್ಲ. ಹರೆಯದ ವಯಸ್ಸಿನಲ್ಲಿ ಕೋಟಿ ಕೋಟಿ ಕಾಂಚಾಣ ಕೈಗೆ ಬಂದಾಗ ಉಂಟಾಗುವ ಚಿತ್ತ ಚಾಂಚಲ್ಯವನ್ನು ನಿಗ್ರಹಿಸಿಕೊಂಡು ಸಾಧನೆ ಮಾಡುವುದು ಹುಡುಗಾಟವಲ್ಲ. ಈ ಪರೀಕ್ಷೆಯಲ್ಲಿ ವಿರಾಟ್ ಅಗ್ರ ರ್‍ಯಾಂಕ್ ಗಳಿಸಿದ್ದಾರೆ.

ಬೆಂಗಳೂರು ಶತಕದ ನೆನಪು

ವಿರಾಟ್ ಕೊಹ್ಲಿ ಮತ್ತು ಬೆಂಗಳೂರಿಗೆ ಅವಿನಾಭಾವ ನಂಟು ಇದೆ. ಅದು ಕೇವಲ ರಾಯಲ್ ಚಾಲೆಂಜರ್ಸ್ ಬೆಂಗಳೂರು ನಂಟು ಮಾತ್ರವಲ್ಲ. ಟೆಸ್ಟ್ ಕ್ರಿಕೆಟ್‌ನಲ್ಲಿಯೂ ಅವರಿಗೆ ಇಲ್ಲಿ ಸವಿನೆನಪು ಇದೆ.

ವಿರಾಟ್ ತವರು ದೇಶದ ನೆಲದಲ್ಲಿ ಮೊದಲ ಶತಕ ಗಳಿಸಿದ್ದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ. 2012ರಲ್ಲಿ ಇಲ್ಲಿ ನಡೆದಿದ್ದ ನ್ಯೂಜಿಲೆಂಡ್ ಎದುರಿನ ಟೆಸ್ಟ್‌ನಲ್ಲಿ ಅವರು ಶತಕ ಗಳಿಸಿದ್ದರು.

ಅದಕ್ಕೂ ಕೆಲವು ದಿನಗಳ ಮುನ್ನ ಅವರು ತಮ್ಮ ಟೆಸ್ಟ್ ಜೀವನದ ಪ್ರಥಮ ಶತಕವನ್ನು ಆಸ್ಟ್ರೇಲಿಯಾದ ಅಡಿಲೇಡ್‌ನಲ್ಲಿ ಹೊಡೆದಿದ್ದರು. ಅದು ಅವರ ವೃತ್ತಿಜೀವನಕ್ಕೆ ಲಭಿಸಿದ ಮಹತ್ವದ ತಿರುವಾಗಿತ್ತು.

ಚೆಸ್: ವಿವಾನ್, ಸಾನ್ವಿಗೆ ಪ್ರಶಸ್ತಿ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯ ಚೆಸ್ ಪ್ರತಿಭೆಗಳು, ಮೈಸೂರಿನಲ್ಲಿ ಭಾನುವಾರ ಮುಕ್ತಾಯಗೊಂಡ ರಾಜ್ಯ ಏಳು ವರ್ಷದೊಳಗಿನವರ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಈ ಜಿಲ್ಲೆಯ ವಿವಾನ್ ವರ್ಧನ್ ಸಾಹು, ಯುವನ್ನಾಯಕ್ ಬಿ ಮತ್ತು ರಿತ್ವಿಕ್ ಡಿ. ಅವರು ಓಪನ್ ವಿಭಾಗದಲ್ಲಿ ಮೊದಲ ಮೂರು ಸ್ಥಾನ ಗಳಿಸಿದ್ದಾರೆ.

ಕೃಷ್ಣಮೂರ್ತಿಪುರಂನ ಬಿಎಸ್‌ಎಸ್ ವಿದ್ಯಾಲಯದಲ್ಲಿ ನಡೆದ ಟೂರ್ನಿಯಲ್ಲಿ ವಿವಾನ್ ಎಂಟು ಸುತ್ತುಗಳಿಂದ 7.5 ಪಾಯಿಂಟ್ಸ್ ಸಂಗ್ರಹಿಸಿ ಅಜೇಯನಾಗುಳಿದ. ಯುವನ್ನಾಯಕ್ ಏಳು ಅಂಕ ಗಳಿಸಿದರೆ, ರಿತ್ವಿಕ್ ಆರು ಅಂಕ ಗಳಿಸಿದ್ದ. ಈ ವಿಭಾಗದಲ್ಲಿ 70 ಮಂದಿ ಕಣದಲ್ಲಿದ್ದರು.

ಬಾಲಕಿಯರ ವಿಭಾಗದಲ್ಲಿ ಸಾನ್ವಿ ಸಂತೋಷ್ ಅಂಗಡಿ, ದಿಶಾನಿ ಎಸ್. ಮತ್ತು ದ್ವಿಜಾ ಆನಂದ್ ಅವರು ಕ್ರಮವಾಗಿ ಮೊದಲ ಮೂರು ಸ್ಥಾನ ಗಳಿಸಿದ್ದಾರೆ. ಈ ಮೂವರೂ ತಲಾ ಆರು ಪಾಯಿಂಟ್ಸ್ ಗಳಿಸಿದ್ದು, ಉತ್ತಮ ಟೈಬ್ರೇಕರ್ ಆಧಾರದಲ್ಲಿ ಸ್ಥಾನ ನಿರ್ಧರಿಸಲಾಯಿತು.

ಬಾಲಕಿಯರ ವಿಭಾಗದಲ್ಲಿ 45 ಮಂದಿ ಕಣದಲ್ಲಿದ್ದು, 15 ಮಂದಿ ಬೆಂಗಳೂರು ನಗರ ಜಿಲ್ಲೆಯವರು ಎಂದು ನಗರ ಜಿಲ್ಲೆ ಚೆಸ್ ಸಂಸ್ಥೆ ಅಧ್ಯಕ್ಷೆ ಸೌಮ್ಯಾ ಎಂ.ಯು. ತಿಳಿಸಿದ್ದಾರೆ.

17ರಿಂದ ಐಪಿಎಲ್ ಪುನರಾರಂಭ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯನ್ನು ಮೇ 17ರಿಂದ ಮುಂದುವರಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸೋಮವಾರ ನಿರ್ಧರಿಸಿದೆ. ಪರಿಷ್ಕೃತ ವೇಳಾಪಟ್ಟಿಯಂತೆ ಫೈನಲ್ ಪಂದ್ಯವು ಜೂನ್ 3 ರಂದು ನಿಗದಿಯಾಗಿದೆ.

ಗಡಿಯಲ್ಲಿ ಸಂಘರ್ಷದ ವೇಳೆ ಪಾಕಿಸ್ತಾನ ವೈಮಾನಿಕ ದಾಳಿ ನಡೆಸಬಹುದೆಂದು ಮುನ್ನೆಚ್ಚರಿಕೆ ಕ್ರಮವಾಗಿ ಮೇ 8ರಂದು ಧರ್ಮಶಾಲಾದಲ್ಲಿ ಪಂಜಾಬ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವಣ ಪಂದ್ಯವನ್ನು ಬ್ಲ್ಯಾಕ್‌ಔಟ್ ಮಾಡಿ ಅರ್ಧಕ್ಕೇ ನಿಲ್ಲಿಸಲಾಗಿತ್ತು. ನಂತರ ಬಿಸಿಸಿಐ ಟೂರ್ನಿಯನ್ನು ಒಂದು ವಾರ ಸ್ಥಗಿತಗೊಳಿಸಿತ್ತು.'ಟಾಟಾ ಐಪಿಎಲ್ 2025 ಪುನರಾರಂಭಿಸುವುದಾಗಿ ಪ್ರಕಟಿಸಲು ಬಿಸಿಸಿಐ ಸಂತಸಪಡುತ್ತಿದೆ. ಸರ್ಕಾರ, ಭದ್ರತಾ ಸಂಸ್ಥೆಗಳು ಮತ್ತು ಪ್ರಮುಖ ಭಾಗಿದಾರರ ಜೊತೆ ಸಮಾಲೋಚಿಸಿದ ಬಳಿಕ ಮಂಡಳಿಯು ಈ ಆವೃತ್ತಿಯ ಉಳಿದ ಪಂದ್ಯಗಳನ್ನು ನಡೆಸಲು ನಿರ್ಧರಿಸಿದೆ' ಎಂದು ಮಂಡಳಿ ಹೇಳಿಕೆಯಲ್ಲಿ ತಿಳಿಸಿದೆ.ಮೇ 17ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಕೋಲ್ಕತ್ತ ನೈಟ್‌ರೈಡರ್ಸ್ ನಡುವಣ ಮೊದಲ ಪಂದ್ಯ ಬೆಂಗಳೂರಿನಲ್ಲಿ ನಡೆಯಲಿದೆ.ಪರಿಷ್ಕೃತ ವೇಳಾಪಟ್ಟಿಯ ಪ್ರಕಾರ ಲೀಗ್‌ನ ಉಳಿದ ಪಂದ್ಯಗಳು ಬೆಂಗಳೂರು, ಜೈಪುರ, ದೆಹಲಿ, ಲಖನೌ, ಅಹಮದಾಬಾದ್ ಮತ್ತು ಮುಂಬೈನಲ್ಲಿ ನಡೆಯಲಿವೆ. ಲೀಗ್ ಪಂದ್ಯಗಳ ಸ್ಥಳಗಳನ್ನು ನಂತರ ತಿಳಿಸಲಾಗುವುದು ಎಂದೂ ಪ್ರಕಟಣೆ ತಿಳಿಸಿದೆ. 6 ನಗರಗಳಲ್ಲಿ 17 ಪಂದ್ಯಗಳು ನಡೆಯಬೇಕಿವೆ. ಎರಡು ಭಾನುವಾರ ಡಬಲ್ ಹೆಡರ್ ನಡೆಯಲಿವೆ.

ಅಂಧರ ಕ್ರಿಕೆಟ್: ಭಾರತಕ್ಕೆ ಗೆಲುವು

ಚಿಕ್ಕಬಳ್ಳಾಪುರ: ಭಾರತದ ಅಂಧರ ತಂಡವು, ತಾಲ್ಲೂಕಿನ ಮುದ್ದೇನಹಳ್ಳಿ ಸತ್ಯಸಾಯಿ ಗ್ರಾಮದ ಸಾಯಿ ಕೃಷ್ಣನ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಸಮರ್ಥ್ ಚಾಂಪಿಯನ್ ಟಿ-20 ಸರಣಿಯ ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಎಂಟು ವಿಕೆಟ್‌ಗಳ ಜಯ ಸಾಧಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಆಫ್ರಿಕಾ ತಂಡ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 145 ರನ್ ಗಳಿಸಿತು. ಥಿಬೊ ಮಾಲಿಸೇನ್ 49 ರನ್ ಗಳಿಸಿದರು. ಈ ಗುರಿ ಬೆನ್ನತ್ತಿದ ಭಾರತ ತಂಡಕ್ಕೆ ಆರಂಭಿಕ ಆಟಗಾರರಾದ ದೀಪಕ್ ಮಲ್ಲಿಕ್ (82) ಮತ್ತು ಮನೀಶ್ ಕುಮಾರ್ (45) ಅವರು 130 ರನ್ ಜೊತೆಯಾಟ ಮೂಲಕ ಭದ್ರ ಬುನಾದಿ ಹಾಕಿದರು. ತಂಡ 13.3 ಓವರ್‌ಗಳಲ್ಲಿ ಎರಡು ವಿಕೆಟ್‌ಗೆ 146 ರನ್ ಹೊಡೆದು ಭರ್ಜರಿ ಜಯ ಸಾಧಿಸಿತು.

ಭಾರತಕ್ಕೆ ಇಂದು ನೇಪಾಳ ಸವಾಲು

ಯುಪಿಯಾ (ಅರುಣಾಚಲ ಪ್ರದೇಶ), (ಪಿಟಿಐ): ಈಗಾಗಲೇ ಸ್ಯಾಫ್ 19 ವರ್ಷದೊಳಗಿನವರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ಗೆ ಸ್ಥಾನ ಕಾದಿರಿಸಿಕೊಂಡಿರುವ ಭಾರತ ತಂಡ, ಮಂಗಳವಾರ ನೇಪಾಳ ತಂಡವನ್ನು ಎದುರಿಸಲಿದೆ. ಈ ಪಂದ್ಯ ಗೆದ್ದು ಗುಂಪಿನಲ್ಲಿ ಅಗ್ರಸ್ಥಾನ ಗಳಿಸುವ ಗುರಿ ಹೊಂದಿದೆ.

ಭಾರತ ಕಳೆದ ವಾರ ಮೊದಲ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು 8–0 ಗೋಲುಗಳಿಂದ ಸೋಲಿಸಿತ್ತು. ಭಾನುವಾರ ನೇಪಾಳ ತಂಡವು 5–0 ಯಿಂದ ಶ್ರೀಲಂಕಾ ತಂಡವನ್ನು ಸೋಲಿಸಿತ್ತು. ಹೀಗಾಗಿ ಗುಂಪಿನಿಂದ ಭಾರತ ಮತ್ತು ನೇಪಾಳ ಸೆಮಿಫೈನಲ್ ತಲುಪುವುದು ಖಚಿತವಾಗಿತ್ತು.

ನೇಪಾಳ ವಿರುದ್ಧ ಪಂದ್ಯ ಡ್ರಾ ಮಾಡಿಕೊಂಡರೂ ಭಾರತ ಅಗ್ರಸ್ಥಾನ ಗಳಿಸಬಲ್ಲದು.

ಆರ್‌ಡಬ್ಲ್ಯುಎಫ್‌ಸಿ ತಂಡಕ್ಕೆ ಜಯ

ಬೆಂಗಳೂರು: ರಾಜೇಶ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಆರ್‌ಡಬ್ಲ್ಯುಎಫ್‌ಸಿ ತಂಡವು ಎ ಡಿವಿಷನ್ ಲೀಗ್ ಫುಟ್ಬಾಲ್ ಪಂದ್ಯದಲ್ಲಿ ಸೋಮವಾರ ಯಂಗ್ ಚಾಲೆಂಜರ್ಸ್ ಎಫ್‌ಸಿ ವಿರುದ್ಧ 5–4 ಗೋಲುಗಳಿಂದ ಗೆಲುವು ಸಾಧಿಸಿತು.